Reg NO(PRGI NO): KNKAN/25/A0970 • ಸಂಪುಟ 1 • ಸಂಚಿಕೆ 135 email: tatvanishtadaily@gmail.com 9481559555 08384 452643 3₹ ಪುಟ 6 ಗುರುವಾರ | ಜನವರಿ | 15 | 2026


# ತತ್ವನಿಷ್ಠ

ನಾಡಿನ ನಿಖರ ನುಡಿ


**ದಿನದ ಕಗ್ಗ**

ಮಾವುಸಸಿಯನು ನೆಟ್ಟು ಬೇವುಣಲು ಸಿದ್ಧನಿರು |
ಭೂವಿಷಯದಿಂದ ರಸ ಮಾರ್ಪಡುವುದುಂಟು ||
ಆ ವಿವರ ನಿನಗೇಕೆ? ತೋಟದೊಡೆಯನಿಗಿರಲಿ |
ಸೇವಕನು ನೀನಲ್ತೆ? – ಮಂಕುತಿಮ್ಮ ||

**ವಿಷಯ ವಿಶೇಷ**

**ರಸ್ತೆಗಳಲ್ಲಿ ಹೊಗೆಯಾಟ**

ಸಿದ್ದಾಪುರ: ಮಲೆನಾಡು ಎಂದರೆ ಹಸಿರು, ಸ್ವಚ್ಛಂದ ಗಾಳಿ ಮತ್ತು ಆಹ್ಲಾದಕರ ಪರಿಸರ. ಆದರೆ, ಉತ್ತರ ಕನ್ನಡ ಜಿಲ್ಲೆಯ ಶಿರಸಿ ಮತ್ತು ನೆರೆಯ ಸಾಗರ ರಸ್ತೆಗಳಲ್ಲಿ ಸಂಚರಿಸುವ ಸರ್ಕಾರಿ ಬಸ್‌ಗಳು ಈ ಹಸಿರು ಪರಿಸರಕ್ಕೆ ಕಪ್ಪು ಮಸಿ ಬಳಿಯುತ್ತಿವೆ.

6

# ಶಿರಸಿ ನಗರದಲ್ಲಿ ದಾರಿಸೂಚಕ ನಾಮಫಲಕ ನೆಲಕ್ಕೆ

**● ತತ್ವನಿಷ್ಠ, ಶಿರಸಿ:** ಲಕ್ಷಾಂತರ ರೂ. ವ್ಯಯಿಸಿ, ನಗರ ವ್ಯಾಪ್ತಿಯಲ್ಲಿ ಅಳವಡಿಕೆ ಮಾಡಲಾದ ದಾರಿ ಸೂಚಕ ಮತ್ತು ವಾರ್ಡ್ ಹೆಸರಿರುವ ನಾಮಫಲಕ ಬಹುತೇಕ ಕಡೆಗಳಲ್ಲಿ ನೆಲಕ್ಕೆ ಉದುರಿ ಬಿದ್ದು, ಹಾಳಾಗುತ್ತಿದೆ. ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ನಗರಸಭೆಯ 31 ವಾರ್ಡ್‌ಗಳ ವ್ಯಾಪ್ತಿಯಲ್ಲಿ 2020ರಲ್ಲಿ ಅನುಷ್ಠಾನಗೊಂಡ ನಗರೋತ್ಥಾನ ಯೋಜನೆಯಡಿ ಅಂದಾಜು 50 ಲಕ್ಷ ರೂ. ವೆಚ್ಚದಲ್ಲಿ ವಾರ್ಡ್ ಹೆಸರು ಮತ್ತು ದಾರಿ ಸೂಚನಾ ನಾಮಫಲಕ ಅಳವಡಿಕೆ ಮಾಡಲಾಗಿದೆ. ಎಲ್ಲ 31 ವಾರ್ಡ್‌ಗಳಲ್ಲಿ ಒಟ್ಟೂ 600 ಫಲಕಗಳನ್ನು ಅಳವಡಿಸಲಾಗಿದೆ. ನಾಮಫಲಕ ಅಳವಡಿಕೆ ಕಾಮಗಾರಿ ನಡೆದು ನಾಲ್ಕೈದು ವರ್ಷಗಳು ಕಳೆದಿವೆ. ಆದರೆ, ಬಹುತೇಕ ಕಡೆಗಳಲ್ಲಿ ನಾಮಫಲಕಗಳು ತುಕ್ಕು ಹಿಡಿದು ಜೀರ್ಣಾವಸ್ಥೆಗೆ ತಲುಪಿವೆ. ಕೆಲವೆಡೆ ನಾಮಫಲಕಗಳೇ ಮಾಯವಾದರೆ, ಇನ್ನೂ ಕೆಲವೆಡೆ ಪಾಚಿ ಹಿಡಿದು ಸಂಪೂರ್ಣ ಹೆಸರು ಮಸುಕಾಗಿವೆ. ರಸ್ತೆ, ಕಾಲುವೆ, ಪೈಪ್ಲೈನ್ ಮತ್ತಿತರರ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಬೇಕಾದ ವೇಳೆ ನಾಮಫಲಕಗಳಿಗೆ ಹಾನಿಯಾಗಿ ಕೆಳಕ್ಕುರುಳಿವೆ. ನಗರೋತ್ಥಾನ-2 ಹಂತದ ಕಾಮಗಾರಿಯ ವೇಳೆಯಲ್ಲಿ ಅಂದಾಜು 100 ಫಲಕಗಳನ್ನು ಹಾಕಲಾಗಿತ್ತು. ತದನಂತರವೂ ಕೆಲವು ಫಲಕಗಳನ್ನು ಹಾಕಲಾಗಿದೆ. ಈಗ ಅವುಗಳೆಲ್ಲವೂ ಕೇವಲ ನೆನಪಾಗಿಯೇ ಉಳಿಯುವಂತಾಗಿದೆ ಎಂದು ಸಾಮಾಜಿಕ ಕಾರ್ಯಕರ್ತ ಪರಮಾನಂದ ಹೆಗಡೆ ಬೇಸರ ವ್ಯಕ್ತಪಡಿಸಿದರು.



ಇಲ್ಲಿನ ಚೌಕಿಮಠ, ಪಡ್ತಿಗಲ್ಲಿ, ಇಂದಿರಾನಗರ, ವೀರಭದ್ರಗಲ್ಲಿ, ಮಾರಿಕಾಂಬಾ ನಗರದ, ಲಯನ್ಸ್ ನಗರ, ಮರಾಠಿಕೊಪ್ಪ, ರಾಜೀವನಗರ, ಕೆಎಚ್‌ಬಿ ಕಾಲೋನಿ, ಲಿಡ್ಕರ ಕಾಲೋನಿ, ವಿದ್ಯಾನಗರ, ಬಸವೇಶ್ವರ ನಗರ ಸೇರಿದಂತೆ ಬಹುತೇಕ ಕಡೆಗಳಲ್ಲಿ ನಾಮಫಲಕ ವಾಲಿದರೆ, ಕೆಲ ಭಾಗದಲ್ಲಿ ಕಬ್ಬಿಣದ ಸರಳು ಮಾತ್ರ ಇದ್ದು, ಫಲಕ ತುಕ್ಕು ಹಿಡಿದು ನೆಲಕ್ಕೆ ಉರುಳಿದೆ. ಕೆಲವು ಫಲಕ ಮಾಸಿವೆ. ಹೊರ ಭಾಗದಿಂದ ಆಗಮಿಸುವ ಸಾರ್ವಜನಿಕರು ದಾರಿಯಲ್ಲಿ ಓಡಾಡುವವರ ಬಳಿ ಕೇಳಿ ತೆರಳುವಂತಾಗಿದೆ. ನಗರಸಭೆ ಪ್ರತಿ ವಾರ್ಡ್‌ನಲ್ಲಿ ಸರ್ವೆ ನಡೆಸಿ, ಜೀರ್ಣಾವಸ್ಥೆ ತಲುಪಿದ ದಾರಿ ಸೂಚಕ ಹಾಗೂ ವಾರ್ಡ್ ಸೂಚಕ ಫಲಕಗಳನ್ನು ಸರಿಪಡಿಸುವಲ್ಲಿ ಆಸಕ್ತಿ ವಹಿಸಬೇಕೆಂಬ ಆಗ್ರಹ ಸಾರ್ವಜನಿಕ ವಲಯದಿಂದ ಕೇಳಿಬಂದಿದೆ.

ನಗರಸಭೆಯು ಹೊಸ ಕಾಮಗಾರಿ ಕೈಗೊಳ್ಳಲು ಆಸಕ್ತಿ ತೋರುತ್ತದೆಯೋ ಹೊರತು ಹಳೆಯ ಕಾಮಗಾರಿ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ವಹಿಸುತ್ತಿದೆ. ನಗರ ವ್ಯಾಪ್ತಿಯ ಬಹುತೇಕ ಕಡೆಗಳಲ್ಲಿ ನಗರಸಭೆಯಿಂದ ಅಳವಡಿಕೆ ಮಾಡಲಾದ ದಾರಿ ಸೂಚಕ ನಾಮಫಲಕ ನೆಲಕ್ಕುರುಳಿದೆ. ಫೆ. 24ರಿಂದ ಆರಂಭಗೊಳ್ಳುವ ರಾಜ್ಯ ಪ್ರಸಿದ್ಧ ಮಾರಿಕಾಂಬಾ ದೇವಿ ಜಾತ್ರೆಯೊಳಗಡೆ ಅದನ್ನು ಸರಿಪಡಿಸುವ ಕಾರ್ಯಕ್ಕೆ ಮುಂದಾಗಬೇಕು ಎಂದು ಸಾಮಾಜಿಕ ಕಾರ್ಯಕರ್ತ ಪರಮಾನಂದ ಹೆಗಡೆ ಒತ್ತಾಯಿಸಿದ್ದಾರೆ.

## ಮಾರಿಕಾಂಬಾ ಜಾತ್ರೆ: ಜ. 19ರಂದು ಸಭೆ



**● ತತ್ವನಿಷ್ಠ, ಶಿರಸಿ:** ರಾಜ್ಯ ಪ್ರಸಿದ್ಧ ಮಾರಿಕಾಂಬಾ ಜಾತ್ರಾ ಮಹೋತ್ಸವದ ಪ್ರಯುಕ್ತ ಪೂರ್ವಭಾವಿ ಸಭೆಯು ನಗರದ ಆಡಳಿತ ಸೌಧದ ಸಭಾಂಗಣದಲ್ಲಿ ಜ. 19ರಂದು ಮಧ್ಯಾಹ್ನ 3.30 ಗಂಟೆಯಿಂದ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ, ಶಾಸಕ ಭೀಮಣ್ಣ ನಾಯ್ಕ, ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ಉಪಸ್ಥಿತಿಯಲ್ಲಿ ನಡೆಯಲಿದೆ.

## ಮನೆಬಾಗಿಲಿಗೆ ಅಂಬಾರಿ ಮೇಲೆ ಅಯ್ಯಪ್ಪ ಉತ್ಸವ



**● ತತ್ವನಿಷ್ಠ, ಸಿದ್ದಾಪುರ:** ಪಟ್ಟಣದ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಜಾತ್ರೋತ್ಸವದ ಪ್ರಮುಖ ಆಕರ್ಷಣೆಯಾದ ಅಯ್ಯಪ್ಪ ಸ್ವಾಮಿಯ ಅಂಬಾರಿ ಮೆರವಣಿಗೆಯು ಬುಧವಾರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು.ಶ್ರೀ ಚೈತನ್ಯ ರಾಜಾರಾಮ ಕ್ಷೇತ್ರ ಶಿರಳಗಿಯ ಶ್ರೀ ಬ್ರಹ್ಮಾನಂದಾ ಭಾರತೀ ಸ್ವಾಮಿಗಳು ಉತ್ಸವಕ್ಕೆ ಚಾಲನೆ ನೀಡಿದರು. 'ಸ್ವಾಮಿ ಅಲ್ಲೇ ಕುಳಿತುಕೊಳ್ಳುವ ದೇವರಲ್ಲ, ಭಕ್ತರ ಮನೆ ಬಾಗಿಲಿಗೆ ಬರುವ ದೇವರು ನಮ್ಮ ಅಯ್ಯಪ್ಪ,' ಎಂಬ ಭಾವನೆಯೊಂದಿಗೆ ಸಾವಿರಾರು ಭಕ್ತರು ಮೆರವಣಿಗೆಯಲ್ಲಿ ಪಾಲ್ಗೊಂಡರು. ಸಿದ್ದಾಪುರ ಪಟ್ಟಣವು ಜಾತಿ, ಮತ, ಧರ್ಮ ಬೇಧವಿಲ್ಲದೆ ಭಕ್ತಿಭಾವದಲ್ಲಿ ಮಿಂದೆದ್ದಿತು.

## ಏಕಾಏಕಿ ಮಳೆ: ಬೆಳೆ ರಕ್ಷಣೆಗೆ ರೈತರ ಸಾಹಸ



**● ತತ್ವನಿಷ್ಠ, ಶಿರಸಿ:** ನಗರ ಹಾಗೂ ಗ್ರಾಮೀಣ ಭಾಗದ ಕೆಲವು ಕಡೆಗಳಲ್ಲಿ ಬುಧವಾರ ಒಂದು ತಾಸಿಗೂ ಅಧಿಕ ಕಾಲ ಏಕಾಏಕಿ ಮಳೆ ಸುರಿದ ಪರಿಣಾಮ ರೈತರು ತೀವ್ರ ಪರದಾಡುವಂತಾಯಿತು.

ಅಡಿಕೆ ಕಟವಾವು ಭರದಿಂದ ಸಾಗುತ್ತಿದ್ದು, ಭತ್ತ ಕೊಯ್ಲು ಮಾಡಿ ಬವಣೆ ಹಾಕಿಟ್ಟಿದ್ದಾರೆ. ರೈತರು ಕೆಂಪಡಕೆ ಸಿದ್ಧಪಡಿಸುವ ತರಾತುರಿಯಲ್ಲಿ ಮನೆಯಂಗಳದಲ್ಲಿ ಒಣಗಿಸಿದ್ದಾರೆ. ಮಳೆಯ ವಾತಾವರಣದಿಂದಾಗಿ ಈ ಅಡಿಕೆ ಹಾನಿಗೊಳಗಾಗುವ ಸಾಧ್ಯತೆ ಹೆಚ್ಚಿದೆ. ಕೆಂಪಡಿಕೆ ಸಿದ್ಧಪಡಿಸಲು ಕನಿಷ್ಠ ಒಂದು ವಾರಗಳ ಕಾಲ ಬಿಸಿಲು ಬೀಳಬೇಕಿದೆ. ಆದರೆ, ಕಳೆದ ಮೂರ್ನಾಲ್ಕು ದಿನಗಳಿಂದ ಮೋಡ ಕವಿದ ವಾತಾವರಣವಿದ್ದ ಕಾರಣ ರೈತರಿಗೆ ಅಡಿಕೆ ಒಣ ಹಾಕಲು ಸಾಧ್ಯವಾಗಿಲ್ಲ. ಅಲ್ಲದೇ ಬುಧವಾರ ಮಳೆ ಸಹ ಸುರಿದಿದ್ದರಿಂದ ರೈತರು ಅಡಿಕೆಯನ್ನು ಮಳೆ ತಾಗದಂತೆ ಮುಚ್ಚಲು ಹರಸಾಹಸ ಮಾಡಿದರು. ಈ ವರ್ಷ ಚಳಿ ಜಾಸ್ತಿ ಇದ್ದ ಕಾರಣ ಮಾವಿನಗಿಡಗಳಲ್ಲಿ ಅಧಿಕ ಪ್ರಮಾಣದಲ್ಲಿ ಹೂವು ಬಿಟ್ಟಿದ್ದವು. ರೈತರು ಉತ್ತಮ ಬೆಳೆಯನ್ನೂ ನಿರೀಕ್ಷಿಸಿದ್ದರು. ಮಳೆಯಿಂದಾಗಿ ಈ ಹೂವು ಫಸಲು ಕಟ್ಟುವ ಸಾಧ್ಯತೆ ಕ್ಷೀಣಿಸಿದೆ. ಅನಿರೀಕ್ಷಿತ ಈ ಮಳೆ ರೈತರಿಗೆ ಲಾಭಕ್ಕಿಂತ ಹಾನಿಯನ್ನೇ ಜಾಸ್ತಿ ಮಾಡಿದೆ.

## ಸಿದ್ದಾಪುರ ಪಪಂನಿಂದ ಅತಿಕ್ರಮಣ ತೆರವು

**● ತತ್ವನಿಷ್ಠ, ಸಿದ್ದಾಪುರ:** ಪಟ್ಟಣದ ತಾಲೂಕು ಸರ್ಕಾರಿ ಆಸ್ಪತ್ರೆ ಎದುರಿನ ಪ್ರಯಾಣಿಕರ ತಂಗುದಾಣವನ್ನು ಆವರಿಸಿಕೊಂಡಿದ್ದ ಅನಧಿಕೃತ ಅಂಗಡಿಗಳನ್ನು ಪಟ್ಟಣ ಪಂಚಾಯತ ಅಧಿಕಾರಿಗಳು ತೆರವುಗೊಳಿಸಿದ್ದಾರೆ.

ತತ್ವನಿಷ್ಠ ಫಲಶ್ರುತಿ



ಡಿ. 31 ರಂದು 'ತತ್ವನಿಷ್ಠ' ಪತ್ರಿಕೆಯು "ಪಾದಚಾರಿ ಮಾರ್ಗವೀಗ ವ್ಯಾಪಾರಿಗಳ ಅನಧಿಕೃತ ಅಂಗಳ' ಎಂಬ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟಿಸಿತ್ತು. ತಂಗುದಾಣ ಮತ್ತು ಪಾದಚಾರಿ ಮಾರ್ಗವನ್ನು ವ್ಯಾಪಾರಿಗಳು ಸಂಪೂರ್ಣವಾಗಿ ಆಕ್ರಮಿಸಿಕೊಂಡಿದ್ದರಿಂದ, ರೋಗಿಗಳು, ಶಾಲಾ ವಿದ್ಯಾರ್ಥಿಗಳು ಹಾಗೂ ಬಸ್‌ಗಾಗಿ ಕಾಯುವ ಪ್ರಯಾಣಿಕರು ರಸ್ತೆಯ ಮೇಲೆಯೇ ನಿಲ್ಲುವಂತಾಗಿತ್ತು. ಇದರಿಂದ ಅಪಘಾತದ ಭೀತಿ ಎದುರಾಗಿತ್ತು. ವರದಿಗೆ ತಕ್ಷಣ ಸ್ಪಂದಿಸಿದ ಸಿದ್ದಾಪುರ ಪಪಂ ಆಡಳಿತ, ತಂಗುದಾಣದ ಆವರಣದಲ್ಲಿದ್ದ ಹೂವು, ಹಣ್ಣು ಮತ್ತು ಇತರೆ ವ್ಯಾಪಾರಸ್ಥರನ್ನು ಅಲ್ಲಿಂದ ತೆರವುಗೊಳಿಸಿದೆ.

ಕೆಲವು ದಿನಗಳ ಹಿಂದೆ ವ್ಯಾಪಾರಿಗಳ ಸರಕುಗಳಿಂದ ತುಂಬಿ ತುಳುಕುತ್ತಿದ್ದ ಬಸ್ ತಂಗುದಾಣ, ಇದೀಗ ಸಂಪೂರ್ಣ ಖಾಲಿಯಾಗಿದೆ. ಪ್ರಯಾಣಿಕರು ಕುಳಿತುಕೊಳ್ಳಲು ಮತ್ತು ಬಸ್ಸುಗಳಿಗೆ ಕಾಯಲು ಜಾಗ ಸಿಕ್ಕಂತಾಗಿದೆ. ಆಸ್ಪತ್ರೆಗೆ ಬರುವ ರೋಗಿಗಳು ಮತ್ತು ವಯೋವೃದ್ಧರಿಗೆ ಇದರಿಂದ ಹೆಚ್ಚಿನ ಅನುಕೂಲವಾಗಿದೆ. ಮುಂದಿನ ದಿನಗಳಲ್ಲಿ ಮತ್ತೆ ಅತಿಕ್ರಮಣವಾಗದಂತೆ ಅಧಿಕಾರಿಗಳು ನಿಗಾ ವಹಿಸಬೇಕೆಂದು ನಾಗರಿಕರು ಆಗ್ರಹಿಸಿದ್ದಾರೆ.















## ಪಂಚಾಂಗ

ಸಂವತ್ಸರ: ವಿಶ್ವಾವಸು. ಮಾಸ: ಪುಷ್ಯ.
ಪಕ್ಷ: ಕೃಷ್ಣ ಪಕ್ಷ. ತಿಥಿ: ದ್ವಾದಶಿ. ನಕ್ಷತ್ರ: ಜೇಷ್ಟ.
ಸೂರ್ಯೋದಯ: ಬೆಳಿಗ್ಗೆ-07:15. ಸೂರ್ಯಾಸ್ತ: ಸಂಜೆ-05:45.
ರಾಹು ಕಾಲ: ಮಧ್ಯಾಹ್ನ-01:49ರಿಂದ ಮಧ್ಯಾಹ್ನ-03:08ರ ವರೆಗೆ
ಗುಳಿಕ ಕಾಲ: ಬೆಳಿಗ್ಗೆ-09:52ರಿಂದ ಬೆಳಿಗ್ಗೆ-11:11ರ ವರೆಗೆ



**ಶ್ರೀ ವಿಠ್ಠಲ ಭಟ್ಟ ಕೆಕ್ಕಾರು**
ಖ್ಯಾತ ಜ್ಯೋತಿಷಿಗಳು, ಆಧ್ಯಾತ್ಮಿಕ ಚಿಂತಕರು
9113295125

## ರಾಶಿ ಫಲ

- **ಮೇಷ:** ಕೆಲಸ ನಿಧಾನಗತಿಯಲ್ಲಿರಬಹುದು. ಸಹನೆಯಿಂದ ಮುಂದುವರಿದರೆ ಫಲ ಉತ್ತಮ.
- **ವೃಷಭ:** ಹೂಡಿಕೆ ಅನುಕೂಲ. ಬಾಕಿ ಹಣ ಕೈಗೆ ಸಿಗುವ ಸಾಧ್ಯತೆ.
- **ಮಿಥುನ:** ವೃತ್ತಿಯಲ್ಲಿ ಮೆಚ್ಚುಗೆ. ನಿಮ್ಮ ಮಾತಿಗೆ ಅಧಿಕ ಪ್ರಭಾವ.
- **ಕಟಕ:** ಹೊರಗಿನ ಆಹಾರ ತಪ್ಪಿಸಿ. ಜ್ವರ, ಶೀತ ಜಾಗ್ರತೆ.
- **ಸಿಂಹ:** ಸಾಮಾಜಿಕ ಕೀರ್ತಿ ಹೆಚ್ಚುವುದು. ಪ್ರಮುಖ ವ್ಯಕ್ತಿಯ ಪರಿಚಯ.
- **ಕನ್ಯಾ:** ಹಣಕಾಸಿನಲ್ಲಿ ಸುಧಾರಣೆ, ಆದರೆ ಖರ್ಚು ನಿಯಂತ್ರಿಸಿ.
- **ತುಲಾ:** ಮನೆಯವರು ನಿಮ್ಮ ಮಾತಿಗೆ ಒಪ್ಪಿಗೆ. ಶುಭ ಕಾರ್ಯದಲ್ಲಿ ಪಾಲ್ಗೊಳ್ಳುವಿರಿ.
- **ವೃಶ್ಚಿಕ:** ರಹಸ್ಯ ಕಾರ್ಯ ಯಶಸ್ವಿ. ಶತ್ರುಗಳ ಯೋಜನೆ ಸದ್ದು ಮಾಡದೆ ನಿವಾರಣೆ.
- **ಧನು:** ಭಕ್ತಿ, ದೇವಾರಾಧನೆ ಶುಭ. ಮನಕ್ಕೆ ನೆಮ್ಮದಿ.
- **ಮಕರ:** ವ್ಯಾಪಾರದಲ್ಲಿ ಲಾಭ. ಕೆಲಸಗಳಿಗೆ ಚುರುಕು.
- **ಕುಂಭ:** ಹೊಸ ಅವಕಾಶಗಳು ಬರಲಿವೆ. ಅಧಿಕಾರಿಗಳ ಮೆಚ್ಚುಗೆ.
- **ಮೀನ:** ಮಾನಸಿಕ ಒತ್ತಡ ಕಡಿಮೆಯಾಗುವುದು. ಅಭ್ಯಾಸ ಮತ್ತು ಧ್ಯಾನ ಪ್ರಯೋಜನಕಾರಿ.

## ಅಡಿಕೆ ಧಾರಣೆ

### ಶಿರಸಿ

| | ಕನಿಷ್ಠ | ಗರಿಷ್ಠ |
|---|---|---|
| ಆಪಿ | ------ | ------ |
| ರಾಶಿ | 51099 | 58399 |
| ಬೆಟ್ಟೆ | 34699 | 53299 |
| ಕೆಂಪು ಗೋಟು | 28699 | 36399 |
| ಬಿಳಿ ಗೋಟು | 22109 | 41599 |
| ಹಳೆ ಚಾಲಿ | ------ | ------ |
| ಹೊಸ ಚಾಲಿ | 43429 | 51111 |
| ಕೋಕಾ | ------ | ------ |
| ಕಾಳು ಮೆಣಸು | 65676 | 69001 |

### ಸಿದ್ದಾಪುರ

| | ಕನಿಷ್ಠ | ಗರಿಷ್ಠ |
|---|---|---|
| ಆಪಿ | ------ | ------ |
| ರಾಶಿ | 48099 | 54269 |
| ಬೆಟ್ಟೆ | 41699 | 48699 |
| ಕೆಂಪು ಗೋಟು | 32099 | 32099 |
| ಬಿಳಿ ಗೋಟು | 25619 | 39309 |
| ಹಳೆ ಚಾಲಿ | 42679 | 49319 |
| ಹೊಸ ಚಾಲಿ | 40000 | 43089 |
| ಕೋಕಾ | 20699 | 28119 |
| ಕಾಳು ಮೆಣಸು | ------ | ------ |

## ಅರ್ಜಿ ಆಹ್ವಾನ

● **ತತ್ವನಿಷ್ಠ, ಶಿರಸಿ:** ರಬ್ಬರ್ ಮ್ಯಾಟ್ (ಕೌ ಮ್ಯಾಟ್) ಸಹಾಯಧನದಲ್ಲಿ ವಿತರಣೆಗೆ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. 2025-26 ನೇ ಸಾಲಿನಲ್ಲಿ ರಬ್ಬರ್ ಮ್ಯಾಟ್‌ಗಳು ಸರಬರಾಜು ಆಗಿದ್ದು, ಶೇ. 50ರಷ್ಟು ಸಹಾಯಧನದಲ್ಲಿ ಸರ್ಕಾರದ ಮೀಸಲಾತಿಯಲ್ಲಿ ರಬ್ಬರ್ ಮ್ಯಾಟ್ ವಿತರಣೆಗೆ ಫಲಾನುಭವಿಗಳು ಆಯ್ಕೆ ಆಗಬೇಕಿದೆ. ಆದ್ದರಿಂದ ಆಸಕ್ತ ಹೈನುಗಾರರು ಜ. 21ರ ಮಧ್ಯಾಹ್ನ 3.30 ಒಳಗಡೆ ಹತ್ತಿರದ ಪಶುವೈದ್ಯ ಸಂಸ್ಥೆ ಅಥವಾ ಮುಖ್ಯ ಪಶು ವೈದ್ಯಾಧಿಕಾರಿಗಳ ಕಾರ್ಯಾಲಯಕ್ಕೆ ಅರ್ಜಿ ಜತೆ ಆಧಾರ ಕಾರ್ಡ್, ರೇಷನ್ ಕಾರ್ಡ್, ಜಾತಿ ಪ್ರಮಾಣ ಪತ್ರದ ಪ್ರತಿ, ಫ್ರುಟ್ಸ್ ಐಡಿ ನಂಬರ್ ಸಲ್ಲಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## 6ನೇ ತರಗತಿ ಪ್ರವೇಶಕ್ಕೆ ಅರ್ಜಿ

● **ತತ್ವನಿಷ್ಠ, ಕಾರವಾರ:** ತಾಲೂಕಿನ ಅಮದಳ್ಳಿಯ ಡಾ. ಬಿ.ಆರ್. ಅಂಬೇಡ್ಕರ್ ಬಾಲಕಿಯರ ವಸತಿ ಶಾಲೆಯಲ್ಲಿ 2026-27ನೇ ಸಾಲಿಗೆ ಆರನೇ ತರಗತಿ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಈಗಾಗಲೇ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿಯನ್ನು ಜ. 25ರೊಳಗಾಗಿ ಸಲ್ಲಿಸಬಹುದು. ಪ್ರವೇಶ ಪರೀಕ್ಷೆಯು ಮಾ. 1ರಂದು ನಿಗದಿಪಡಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿಯನ್ನು ಭರ್ತಿ ಮಾಡಲು ಡಾ. ಬಿ.ಆರ್. ಅಂಬೇಡ್ಕರ್ ಬಾಲಕಿಯರ ವಸತಿ ಶಾಲೆ ಅಮದಳ್ಳಿ ಕಾರವಾರ ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ http://kea.kar.nic.in ನಲ್ಲಿ https://kreis.karnataka.gov.in ಲಿಂಕ್ ಆಯ್ಕೆ ಮಾಡಿಕೊಳ್ಳುವುದು ಅಥವಾ ದೂರವಾಣಿ ಸಂಖ್ಯೆ: 9901573174, 9164673124 ಸಂಪರ್ಕಿಸುವಂತೆ ಡಾ. ಬಿ.ಆರ್. ಅಂಬೇಡ್ಕರ್ ಬಾಲಕಿಯರ ವಸತಿ ಶಾಲೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೂತ್ಕಳದ ಧನ್ವಂತರಿ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಆಯುರ್ವೇದ ಆರೋಗ್ಯ ತಪಾಸಣೆ

● **ತತ್ವನಿಷ್ಠ, ಭಟ್ಕಳ:** ಮಾರುಕೇರಿಯ ಹೂತ್ಕಳದ ಶ್ರೀ ಧನ್ವಂತರಿ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ನಡೆಯುತ್ತಿರುವ ಕೃತಕೋಟಿ ಶ್ರೀಧನ್ವಂತರಿ ಜಪ ಸಾಂಗತಾ ಹೋಮ, ವರ್ಧಂತ್ಯುತ್ಸವದ ಅಂಗವಾಗಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಏರ್ಪಡಿಸಲಾಗಿದ್ದ ಉಚಿತ ಆಯುರ್ವೇದ ಆರೋಗ್ಯ ತಪಾಸಣಾ ಶಿಬಿರವನ್ನು ಶ್ರೀ ಧನ್ವಂತರಿ ಕ್ಷೇತ್ರದ ಅರ್ಚಕ ಶಂಕರ ಭಟ್ಟ ಉದ್ಘಾಟಿಸಿದರು.



ನಂತರ ಮಾತನಾಡಿದ ಅವರು ಆಯುರ್ವೇದ ಚಿಕಿತ್ಸೆ ಆರಾಧ್ಯ ದೇವರಾದ ಶ್ರೀ ಧನ್ವಂತರಿ ಕ್ಷೇತ್ರದಲ್ಲಿ ನಡೆಯುತ್ತಿರುವ ಉಚಿತ ಆಯುರ್ವೇದ ಚಿಕಿತ್ಸೆಯಿಂದ ಈ ಭಾಗದ ಎಲ್ಲಾ ಜನರು ಕೂಡಾ ಆರೋಗ್ಯವಂತರಾಗುವಂತಾಗಲಿ ಎಂದು ಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಆಸ್ಪತ್ರೆಯ ಮೆಡಿಕಲ್ ಡೈರೆಕ್ಟರ್ ಡಾ. ನಾಗರಾಜ ಗ್ರಾಮೀಣ ಭಾಗದಲ್ಲಿ ಉಚಿತ ಆರೋಗ್ಯ ತಪಾಸಣೆ ನಡೆಸಿ ನಮ್ಮ ಸಂಶೋಧನಾ ಘಟಕದಲ್ಲಿಯೇ ತಯಾರಾದ ಔಷಧವನ್ನು ಉಚಿತವಾಗಿ ನೀಡಲು ಸಂತಸವಾಗುತ್ತಿದೆ. ಶ್ರೀ ವೀರೇಂದ್ರ ಹೆಗ್ಗಡೆಯವರ ಕನಸೂ ಆಯುರ್ವೇದನ್ನು ಗ್ರಾಮೀಣ ಭಾಗಕ್ಕೆ ತಲುಪಿಸುವುದಾಗಿದೆ. ಶ್ರೀ ಧನ್ವಂತರಿ ಕ್ಷೇತ್ರದಲ್ಲಿ ಪ್ರಥವಾಗಿ ನಡೆಯುತ್ತಿರುವ ಈ ಆಯುರ್ವೆದ ತಪಾಸಣಾ ಶಿಬಿರಕ್ಕೆ ಉತ್ತಮ ಸ್ಪಂದನೆ ದೊರೆತಿರುವುದು ಸಂತಸ ತಂದಿದೆ ಎಂದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಮಾರುಕೇರಿ ಗ್ರಾಪಂ ಉಪಾಧ್ಯಕ್ಷ ಎಂ.ಡಿ. ನಾಯ್ಕ ಮಾತನಾಡಿ, ಮಾರುಕೇರಿಯಂತಹ ಗ್ರಾಮೀಣ ಭಾಗಕ್ಕೆ ಬಂದು ಉಚಿತ ಚಿಕಿತ್ಸೆ ನೀಡುತ್ತಿರುವ ವೈದ್ಯರುಗಳು ಹಾಗೂ ಕಾಲೇಜಿನ ಪ್ರಮುಖರ ಕಾರ್ಯವನ್ನು ಶ್ಲಾಘಿಸಿದರು.

ಗಣೇಶ ಹೆಬ್ಬಾರ್ ಕೋಣಾರ ಮಾತನಾಡಿ ಶ್ರೀ ಧನ್ವಂತರಿ ಕ್ಷೇತ್ರವು ಸರ್ವರೋಗ ನಿವಾರಕ ಕ್ಷೇತ್ರವಾಗಿದ್ದು ಇಲ್ಲಿಗೆ ಬಂದು ಪ್ರಾರ್ಥನೆ ಮಾಡಿದವರಿಗೆ ಉತ್ತಮ ಆರೋಗ್ಯ ಲಭ್ಯವಾಗುತ್ತದೆ. ಆಯುರ್ವೇದ ಕಾಲೇಜಿನವರ ಇಂದಿನ ಉಚಿತ ಆರೋಗ್ಯ ತಪಾಸಣಾ ಶಿಬಿರ ಅರ್ಥಪೂರ್ಣವಾಗಿದ್ದು ಎಲ್ಲರಿಗೂ ಒಳಿತಾಗಲಿ ಎಂದು ಹಾರೈಸಿದರು.

ವೇದಿಕೆಯಲ್ಲಿ ಪ್ರಮುಖರಾದ ಕೆ.ಜಿ. ನಾಯ್ಕ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಮಂಜುನಾಥ ನಾಯ್ಕ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಗೋಕುಲ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಪತ್ರಕರ್ತ ರಾಧಾಕೃಷ್ಣ ಭಟ್ಟ ನಿರೂಪಿಸಿದರು. ಡಾ. ನಿರಂಜನ ಹೆಬ್ಬಾರ್ ವಂದಿಸಿದರು.

# ಇಳುವರಿ ಕುಂಠಿತ: ಕಂತು ಸೌಲಭ್ಯ ಕೊಡಿ

## ಸಂಸದ ಕಾಗೇರಿ, ಶಾಸಕ ಭೀಮಣ್ಣಗೆ ರೈತರು, ಸಹಕಾರಿಗಳ ಮನವಿ

● **ತತ್ವನಿಷ್ಠ, ಶಿರಸಿ:** ಕಳೆದ ಮಳೆಗಾಲದಲ್ಲಿ ಕೊಳೆ ರೋಗ ಹಾಗೂ ತೀವ್ರ ಗತಿಯಲ್ಲಿ ವ್ಯಾಪಿಸಿಕೊಂಡಿರುವ ಎಲೆ ಚುಕ್ಕಿ ರೋಗದಿಂದ ಶೇ. 70ರಷ್ಟು ಬೆಳೆ ನಷ್ಟವಾಗಿದೆಯಲ್ಲದೆ ಹೆಚ್ಚಿನ ಪ್ರದೇಶದಲ್ಲಿ ಸಂಪೂರ್ಣ ಅಡಿಕೆ ತೋಟವೇ ನಾಶವಾದ ಸ್ಥಿತಿಯಲ್ಲಿ ಇಳುವರಿ ಏಕಾಏಕಿ ಕುಸಿತದಿಂದ ರೈತರು ಕಂಗಾಲಾಗಿದ್ದು ಇವರು ಪಡೆದಿರುವ ಬೆಳೆಸಾಲ ಪಾವತಿಗೆ ಶೂನ್ಯ ಬಡ್ಡಿ ಸೌಲಭ್ಯದಲ್ಲಿಯೇ ಐದು ಕಂತಿನ ಸೌಲಭ್ಯ ಒದಗಿಸಿಕೊಡಬೇಕು ಮತ್ತು ಮಾಧ್ಯಮಿಕ ಸಾಲದ ಕಂತನ್ನು ಮುಂದಿನ ವರ್ಷಕ್ಕೆ ಭರಣ ಮಾಡುವ ಅವಕಾಶ ಒದಗಿಸಿಕೊಟ್ಟು ಬಡ್ಡಿಯನ್ನು ಸರ್ಕಾರವೇ ಭರಿಸಿಕೊಡಬೇಕೆಂದು ರೈತರು, ಸಹಕಾರಿ ಸಂಘಗಳ ಆಡಳಿತ ಮಂಡಳಿಗಳು ಮನವಿ ಮಾಡಿವೆ.



ತಮ್ಮ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟು ಈ ದಿಸೆಯಲ್ಲಿ ಕಾರ್ಯ ನಿರ್ವಹಿಸಿ ಕೊಡಬೇಕೆಂದು ಶಾಸಕ ಭೀಮಣ್ಣ ನಾಯ್ಕ ಹಾಗೂ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿಯವರಿಗೆ ಶಿರಸಿ, ಸಿದ್ದಾಪುರ ಹಾಗೂ ಯಲ್ಲಾಪುರ ತಾಲೂಕಿನ ಸಹಕಾರಿ ಸಂಘಗಳ ಅಧ್ಯಕ್ಷರು, ಕಾರ್ಯದರ್ಶಿಗಳ ನಿಯೋಗ ಪತ್ರ ಸಲ್ಲಿಸಿದೆ.

ಇಲ್ಲಿಯವರೆಗೂ ರೈತರು ತಾವು ಪಡೆದ ಕೆ.ಸಿ.ಸಿ. ಸಾಲವನ್ನು ಪ್ರಾಮಾಣಿಕವಾಗಿ ಕಾಲಕಾಲಕ್ಕೆ ಮರುಪಾವತಿ ಮಾಡುತ್ತ ಬಂದಿದ್ದಾರೆ. ಆದರೆ ಈ ವರ್ಷ, ವಿಶೇಷವಾಗಿ ಸಾಂಪ್ರದಾಯಿಕ ಅಡಿಕೆ ತೋಟಗಳ ರೈತರು ತಾವು ಪಡೆದ ಕೆ.ಸಿ.ಸಿ. ಸಾಲ ಹಾಗೂ ಕೃಷಿ ಮಾಧ್ಯಮಿಕ ಸಾಲ ಹಾಗೂ ಬಡ್ಡಿಯನ್ನು ತುಂಬಲು ಸಾಧ್ಯವಾಗದೇ ಅಸಹಾಯಕ ಪರಿಸ್ಥಿತಿಯಲ್ಲಿದ್ದಾರೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ರೈತರ ಹಿತ ಕಾಯುವುದು ಅಗತ್ಯವಾಗಿದ್ದು ಇನ್ನೇನು ಸಾಲ ಮರುಪಾವತಿ ಸಮಯ ಹತ್ತಿರವಾಗುತ್ತಿರುವ ಈ ಸಂದರ್ಭದಲ್ಲಿ ಸರ್ಕಾರ ನೆರವಿಗೆ ಮುಂದಾಗಬೇಕು. ಆ ದಿಸೆಯಲ್ಲಿ, 2025-26ನೇ ಸಾಲಿನಲ್ಲಿ ಪಡೆದ ಕೆ.ಸಿ.ಸಿ. ಸಾಲವನ್ನು ಬಡ್ಡಿ ರಹಿತವಾಗಿ 5 ಕಂತುಗಳನ್ನಾಗಿ ಪರಿವರ್ತಿಸಿ ಹಾಗೂ ಕೃಷಿ ಮಾಧ್ಯಮಿಕ ಸಾಲದ ಬಡ್ಡಿಯನ್ನು ಮನ್ನಾ ಮಾಡಿಕೊಡಬೇಕು; ವಾಡಿಕೆಯಂತೆ ಹೊಸ ಕೆ.ಸಿ.ಸಿ. ಸಾಲವನ್ನು ಮಂಜೂರು ಮಾಡಬೇಕು. ಈ ಕುರಿತು ಸರ್ಕಾರದ ಗಮನಕ್ಕೆ ತಂದು ರೈತರಿಗೆ ಸೂಕ್ತ ಪರಿಹಾರ ಒದಗಿಸಿಕೊಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

**ಬೆಳೆ ವಿಮೆ ಕೊಡಿಸಿ:** ಪ್ರಸ್ತುತ ಅವಧಿಯಲ್ಲಿ ಅಡಿಕೆ, ಕಾಳುಮೆಣಸು ಬೆಳೆಗಳಿಗೆ ಸಂಬಂಧಿಸಿ ಹವಾಮಾನ ಆಧರಿತ ಬೆಳೆವಿಮೆ ಇಂದಿಗೂ ರೈತರ ಖಾತೆಗೆ ಜಮಾ ಆಗದೆ ಮತ್ತಷ್ಟು ನಿರಾಸೆ ಆವರಿಸಿದೆ. ವಿಮಾ ಪರಿಹಾರವನ್ನು ಅತೀ ಶೀಘ್ರದಲ್ಲಿ ದೊರಕಿಸಿಕೊಡಬೇಕು ಎಂದು ಸಂಸದ ಹಾಗೂ ಶಾಸಕರಲ್ಲಿ, ಯಡಳ್ಳಿ ಸೊಸೈಟಿ ಅಧ್ಯಕ್ಷ ಜಿ.ಆರ್. ಹೆಗಡೆ ಮತ್ತು ಸಹಕಾರಿ ಯೂನಿಯನ್ ನಿರ್ದೇಶಕ ಮಹೇಂದ್ರ ಭಟ್ ನೇತೃತ್ವದಲ್ಲಿ ವಿವಿಧ ಪ್ರಮುಖರು ಮನವಿ ಮಾಡಿದ್ದಾರೆ.

# ಚೆಸ್ ಪಂದ್ಯಾವಳಿ ವಿಜೇತರಿಗೆ ಬಹುಮಾನ ವಿತರಣೆ

● **ತತ್ವನಿಷ್ಠ, ಕಾರವಾರ:** ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ ಜಿಲ್ಲಾ ಶಾಖೆ ಕಾರವಾರ, ಉತ್ತರ ಕನ್ನಡ ಜಿಲ್ಲಾ ಸರಕಾರಿ ನೌಕರರ ಸಹಕಾರಿ ಕ್ರೆಡಿಟ್ ಸೊಸೈಟಿ, ಜಿಲ್ಲಾ ಕ್ರೀಡಾ ಪ್ರತಿಷ್ಠಾನ ಹಾಗೂ ಕಾರವಾರ ಚೆಸ್ ಕ್ಲಬ್ ಇವರ ಸಹಯೋಗದೊಂದಿಗೆ ಕಾರವಾರದ ಸರಕಾರಿ ನೌಕರರ ಭವನದಲ್ಲಿ, ಉತ್ತರ ಕನ್ನಡ ಜಿಲ್ಲಾ ಚದುರಂಗ ಚಾಂಪಿಯನ್‌ಶಿಪ್ ಪಂದ್ಯಾವಳಿ ನಡೆಯಿತು.



ಉತ್ತರ ಕನ್ನಡ ಜಿಲ್ಲಾ ಸರಕಾರಿ ನೌಕರರ ಸಹಕಾರಿ ಕ್ರೆಡಿಟ್ ಸೊಸೈಟಿ ಹಾಗು ಉತ್ತರ ಕನ್ನಡ ಜಿಲ್ಲಾ ಚದುರಂಗ ಸಂಘದ ಅಧ್ಯಕ್ಷ ಸಂಜೀವ್ ಕುಮಾರ್ ನಾಯ್ಕ, ಉಪಾಧ್ಯಕ್ಷ ರಾಮಚಂದ್ರ ಭಟ್, ಉತ್ತರ ಕನ್ನಡ ಜಿಲ್ಲಾ ಚದುರಂಗ ಸಂಘದ ಖಜಾಂಚಿ ಕೃಷ್ಣ ಎಸ್. ಭಟ್, ಉತ್ತರ ಕನ್ನಡ ಜಿಲ್ಲಾ ಸರಕಾರಿ ನೌಕರರ ಸಹಕಾರಿ ಕ್ರೆಡಿಟ್ ಸೊಸೈಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿಜೇತರಿಗೆ ಜಗದೀಪ ರಾವ್ ಬಹುಮಾನವನ್ನು ವಿತರಿಸಿದರು.

ಪಂದ್ಯಾವಳಿಯಲ್ಲಿ ಮುಕ್ತ, 17 ವರ್ಷದೊಳಗಿನ ಹಾಗೂ 13 ವರ್ಷದೊಳಗಿನವರ ವಿಭಾಗದ ರಾಜ್ಯ ಆಯ್ಕೆಯ ಪ್ರಕ್ರಿಯೆ ನಡೆಯಿತು. ಒಟ್ಟೂ 27,500 ರೂ. ನಗದು ಹಾಗೂ ಟ್ರೋಫಿಗಳನ್ನು ವಿಜೇತರಿಗೆ ವಿತರಿಸಲಾಯಿತು. ಮುಖ್ಯತೀರ್ಪುಗಾರ ಆನಂದ ಸ್ವಾಮಿ ಪ್ರಕಟಣೆಯಂತೆ ಮುಕ್ತ ವಿಭಾಗದಲ್ಲಿ ಪ್ರಥಮ ಬಹುಮಾನ ಎಮ್. ಸುಮೀತ್ ಕುಮಾರ್ 4,000 ರೂ. ಮತ್ತು ಟ್ರೋಫಿ, ದ್ವಿತೀಯ ರಾಮಚಂದ್ರ ಭಟ್ ಮಾತ್ನಳ್ಳಿ 3,000 ರೂ. ಮತ್ತು ಟ್ರೋಫಿ, ತೃತೀಯ ಸಮರ್ಥ ಜೆ. ರಾವ್ 2,000 ರೂ. ಮತ್ತು ಟ್ರೋಫಿ, ಚತುರ್ಥ ನವೀನ ಶ್ರೀ. ಹೆಗಡೆ 1,000 ರೂ. ಮತ್ತು ಟ್ರೋಫಿ, 17 ವರ್ಷದೊಳಗಿನ ವಿಭಾಗ ಉತ್ತಮ ಬಾಲಕಿ ಆಟಗಾರ್ತಿ ಪ್ರಥಮ ಭೂಮಿಕಾ ಪ್ರದೀಪ ಹೆಗಡೆ 2,500 ರೂ. ಮತ್ತು ಟ್ರೋಫಿ, ದ್ವಿತೀಯ ಆದ್ಯ ಕಟ್ಟೇರ 1,250 ರೂ. ಮತ್ತು ಟ್ರೋಫಿ, 17 ವರ್ಷದೊಳಗಿನ ವಿಭಾಗ ಪ್ರಥಮ ಅಭಿನೀತ ಭಟ್ 2,500 ರೂ. ಮತ್ತು ಟ್ರೋಫಿ, ದ್ವಿತೀಯ ದಕ್ಷ ಜಿ. ಬಳ್ಕೂರ 1,500 ರೂ. ಮತ್ತು ಟ್ರೋಫಿ, ತೃತೀಯ ಶ್ರವಣ ಆರ್. ಹೆಗಡೆ 1,000 ರೂ. ಮತ್ತು ಟ್ರೋಫಿ, 13 ವರ್ಷದೊಳಗಿನವರ ವಿಭಾಗದ ಉತ್ತಮ ಬಾಲಕಿ ಆಟಗಾರ್ತಿ ಪ್ರಥಮ ಸಮೃದ್ಧಿ ಆರ್. ರೇವಣ್ಕರ 2,500 ರೂ. ಮತ್ತು ಟ್ರೋಫಿ, ದ್ವಿತೀಯ ಸಾದ್ವಿ ಶರಣಪ್ಪ ಹಳ್ಳಿ 1,250 ರೂ. ಮತ್ತು ಟ್ರೋಫಿ ಪಡೆದಿದ್ದಾರೆ.

13 ವರ್ಷದೊಳಗಿನವರ ವಿಭಾಗದಲ್ಲಿ ಪ್ರಥಮ ಪವನ್ ಕುಮಾರ್ ಹೆಗಡೆ 2,500 ಮತ್ತು ಟ್ರೋಫಿ, ದ್ವಿತೀಯ ಚಿಂತನ ಬಿ. ಭಟ್ 1,500 ರೂ. ಮತ್ತು ಟ್ರೋಫಿ, ತೃತೀಯ ಆದಿತ್ಯ ನೈನ್ 1,000 ರೂ. ಮತ್ತು ಟ್ರೋಫಿ ಪಡೆದಿದ್ದಾರೆ.

ಪಂದ್ಯಾವಳಿಯು ಫಿಡೆ ಸ್ವಿಸ್ ಲೀಗ್ ಮಾದರಿಯಲ್ಲಿ 20 ನಿಮಿಷ ಮತ್ತು 5 ಸೆಕೆಂಡ್ ಪ್ರತಿ ನಡೆಗೆ ಸೇರ್ಪಡೆಯಾಗಿ ಜರುಗಿತು ಮತ್ತು 156 ಸ್ಪರ್ಧಾಳುಗಳು ಪಂದ್ಯಾವಳಿಯಲ್ಲಿ ಭಾಗವಹಿಸಿದ್ದರು. ಪ್ರತಿಯೊಂದು ವಿಭಾಗದಲ್ಲಿ ತಲಾ ಎರಡರಂತೆ ಆಟಗಾರರನ್ನು ರಾಜ್ಯ ಚೆಸ್ ಪಂದ್ಯಾವಳಿಗೆ ಆಯ್ಕೆ ಮಾಡಲಾಗಿದೆ ಎಂದು ಸಂಘದ ಕಾರ್ಯದರ್ಶಿ ನವೀನ ಹೆಗಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸು ಡೊ ಕು 109

| | | | | | | | | |
|---|---|---|---|---|---|---|---|---|
| 9 | | 8 | | 5 | 1 | | 6 | |
| 5 | | 3 | 8 | 7 | | | | 2 |
| 2 | | 7 | | | 3 | | 1 | |
| | | | 6 | 8 | 7 | | | 1 |
| | | | | | | | | 3 |
| | | 6 | | 1 | | 7 | 2 | 8 |
| 1 | | 5 | | 6 | | | | |
| | 7 | | | | 4 | | 8 | |
| 8 | 3 | | 9 | | | | | |

ಈ ಸುಡೊಕು ಸಂಖ್ಯಾಬಂಧದಲ್ಲಿರುವ ಎಲ್ಲ ಸಾಲುಗಳಲ್ಲಿ ಮತ್ತು ಕಂಬಗಳಲ್ಲಿ ಒಂದರಿಂದ ಒಂಬತ್ತರ ತನಕ ಅಂಕಿಗಳಿರಬೇಕು. ಪ್ರತಿ 3x3 ಬಾಕ್ಸ್‌ನಲ್ಲೂ ಒಂದರಿಂದ ಒಂಬತ್ತರೊಳಗಿನ ಅಂಕಿಗಳಿರಬೇಕು ಮತ್ತು ಯಾವುದೇ ಅಂಕಿ ಪುನರಾವರ್ತನೆ ಆಗಬಾರದು.

### ಸುಡೊಕು 108ರ ಉತ್ತರ

| | | | | | | | | |
|---|---|---|---|---|---|---|---|---|
| 8 | 3 | 7 | 6 | 9 | 1 | 5 | 2 | 4 |
| 2 | 1 | 9 | 7 | 5 | 4 | 6 | 3 | 8 |
| 6 | 4 | 5 | 8 | 3 | 2 | 1 | 9 | 7 |
| 4 | 8 | 2 | 1 | 6 | 5 | 9 | 7 | 3 |
| 3 | 9 | 6 | 4 | 8 | 7 | 2 | 1 | 5 |
| 7 | 5 | 1 | 9 | 2 | 3 | 4 | 8 | 6 |
| 5 | 2 | 8 | 3 | 4 | 9 | 7 | 6 | 1 |
| 9 | 7 | 3 | 5 | 1 | 6 | 8 | 4 | 2 |
| 1 | 6 | 4 | 2 | 7 | 8 | 3 | 5 | 9 |

## ತತ್ವನಿಷ್ಠ ವರದಿಗಾರರು

- ಶಿರಸಿ-ಮಂಜುನಾಥ ಈರಗೊಪ್ಪ 8971124937
- ಯಲ್ಲಾಪುರ-ಶ್ರೀಧರ ವೈದಿಕ 9483490345
- ಸಿದ್ದಾಪುರ-ನಿತಿನ ಹೆಗಡೆ ಮುತ್ತಿಗೆ 8550855071
- ಅಂಕೋಲಾ-ರಾಘು ಕಾಕರಮಠ 9449999775
- ಭಟ್ಕಳ-ಆರ್.ಕೆ. ಭಟ್ಕಳ 9448221117
- ಕುಮಟಾ-ಗಣೇಶ ಜೋಶಿ ಸಂಕೊಳ್ಳಿ 9482212898
- ದಾಂಡೇಲಿ-ಅಕ್ಷಯ ಗೋಸಾವಿ 9663591069
- ಬನವಾಸಿ-ಸುಧೀರ ನಾಯರ 9481608757
- ಕಾರವಾರ-ಸುನೀಲ್ ಹಣಕೋಣ 9902355539

## ರಾಷ್ಟ್ರೀಯ ಯುವ ದಿನಾಚರಣೆ

● **ತತ್ವನಿಷ್ಠ, ಶಿರಸಿ:** ಎಂಇಎಸ್ ಆರ್.ಎನ್. ಶೆಟ್ಟಿ ಪಾಲಿಟೆಕ್ನಿಕ್‌ನಲ್ಲಿ ಸ್ವಾಮಿ ವಿವೇಕಾನಂದರ ಜನ್ಮದಿನದ ಅಂಗವಾಗಿ ಯುವ ದಿನ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಭಾರತ ಗುಲಾಮ ಸ್ಥಿತಿಯಲ್ಲಿ ಇರುವಾಗ ಭಾರತವು ಏನು ಎಂಬುದನ್ನು, ವಿದೇಶಿಯರಿಗೆ ಅಲ್ಲದೇ ಭಾರತೀಯರಿಗೂ ತೋರಿಸಿದ್ದು ಸ್ವಾಮಿ ವಿವೇಕಾನಂದರು. ಭಾರತವು ಜ್ಞಾನದ ಕಾರಣದಿಂದ ವಿಶ್ವಗುರುವಾಗಿದ್ದು, ಭಾರತೀಯರ ಜ್ಞಾನದ ಮಹತ್ವವನ್ನು ತಿಳಿಸಿ, ಭಾರತೀಯರಲ್ಲಿ ರಾಷ್ಟ್ರೀಯ ಪ್ರಜ್ಞೆಯ ಜಾಗೃತಿ ಮೂಡಿಸಿದ್ದಾರೆ ಎಂದರು.



ಕಾಲೇಜಿನ ವಿದ್ಯಾರ್ಥಿಗಳು, ಪ್ರಾಚಾರ್ಯ ಗಣಪತಿ ಹೆಗಡೆ, ಎಂಇಎಸ್ ಸದಸ್ಯ ಟಿ.ಎಸ್. ಹಳೇಮನೆ ಮತ್ತು ಎಲ್ಲ ಬೋಧಕ-ಬೋಧಕೇತರ ಸಿಬ್ಬಂದಿ ಭಾಗವಹಿಸಿದ್ದರು. ಎನ್.ಎಸ್.ಎಸ್. ವಿಭಾಗದ ಸಂಯೋಜಕ ಗಣಪತಿ ಶೇಟ್ ಕಾರ್ಯಕ್ರಮ ನಡೆಸಿಕೊಟ್ಟರು.

## ಜ. 31ರಂದು ಬೆಳ್ಳಿ ಮಹೋತ್ಸವ

● **ತತ್ವನಿಷ್ಠ, ಭಟ್ಕಳ:** ಕರ್ನಾಟಕ ಸರ್ಕಾರದ ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ಪಂಚಾಯತ ಉತ್ತರ ಕನ್ನಡ, ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯ ಹಾಗೂ ಕ್ಷೇತ್ರ ಸಂಪನ್ಮೂಲ ಕೇಂದ್ರ, ಭಟ್ಕಳ ಸಮೂಹ ಸಂಪನ್ಮೂಲ ಕೇಂದ್ರ, ಭಟ್ಕಳ ಇವುಗಳ ಸಂಯುಕ್ತ ಆಶ್ರಯದಲ್ಲಿ ತಾಲೂಕಿನ ಕೆಕ್ಕೋಡ್ ಸರ್ಕಾರಿ ಕಿರಿಯ ಶಾಲೆಯ ಬೆಳ್ಳಿ ಮಹೋತ್ಸವ ಕಾರ್ಯಕ್ರಮ ಜ. 31ರಂದು ಶನಿವಾರ ಹಮ್ಮಿಕೊಳ್ಳಲಾಗಿದೆ ಎಂದು ಶಾಲಾ ಅಭಿವೃದ್ಧಿ ಸಮಿತಿ ತಿಳಿಸಿದೆ. ಕಾರ್ಯಕ್ರಮವು ಮಧ್ಯಾಹ್ನ 2.30ರಿಂದ ಪ್ರಾರಂಭವಾಗಲಿದ್ದು ಸಭಾ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಮಂಕಾಳ ವೈದ್ಯ, ಹಾಡುವಳ್ಳಿ ಗ್ರಾಪಂ ಅಧ್ಯಕ್ಷ ಶ್ರೀಧರ ಶೆಟ್ಟಿ, ಮಾಜಿ ಶಾಸಕ ಸುನೀಲ್ ನಾಯ್ಕ ಸೇರಿದಂತೆ ಇತರರು ಉಪಸ್ಥಿತರಿರಲಿದ್ದಾರೆ. ಸಭಾ ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ನಾಟಕ ಪ್ರದರ್ಶನ ನಡೆಯಲಿದೆ. ರಾತ್ರಿ 8.30ಕ್ಕೆ ಅನ್ನ ಸಂತರ್ಪಣೆ ನಡೆಯಲಿದೆ ಎಂದು ತಿಳಿಸಿದೆ.



## ಭೂತೇಶ್ವರ ದೇವರ ಮಕರ ಸಂಕ್ರಾಂತಿ ಉತ್ಸವ


● **ತತ್ವನಿಷ್ಠ, ಶಿರಸಿ:** ವಾರ್ಷಿಕವಾಗಿ ಸಂಕ್ರಾಂತಿಯ ಶುಭ ದಿನದಂದು ನಡೆಯುವ ತಾಲೂಕಿನ ಹಳ್ಳಿಕಾನ ಗ್ರಾಮದ ಭೂತೇಶ್ವರ ದೇವರ ಮಕರ ಸಂಕ್ರಾಂತಿ ಉತ್ಸವ ಅತ್ಯಂತ ಭಕ್ತಿ ಸಂಭ್ರಮದಿಂದ ಬುಧವಾರ ಜರುಗಿತು. ಹಳ್ಳಿಕಾನ ಗ್ರಾಮಸ್ಥರಿಂದಲೇ ನಡೆಯುವ 53ನೇ ವರ್ಷದ ಸಂಕ್ರಾಂತಿ ಕಾರ್ಯಕ್ರಮದ ನಿಮಿತ್ತ ಬೆಳಿಗ್ಗೆ 1001 ಸಾಮೂಹಿಕ ಸತ್ಯನಾರಾಯಣ ವೃತಕಥೆ ಮತ್ತು ಗಣಹವನ, ರುದ್ರಾಭಿಷೇಕ, ಪ್ರಾರ್ಥನೆ, ತೀರ್ಥ ಪ್ರಸಾದ ಹಾಗೂ ಎಳ್ಳು ಬೆಲ್ಲ ವಿತರಣೆ ನಡೆಯಿತು. ಬಳಿಕ ಮಧ್ಯಾಹ್ನ 1ರಿಂದ ಸಾಮೂಹಿಕ ಅನ್ನ ಸಂತರ್ಪಣೆ ನಡೆದಿದ್ದು, ಸಾವಿರಾರು ಭಕ್ತರು ಪ್ರಸಾದ ಸ್ವೀಕರಿಸಿದರು. ನಂತರ ದೇವರ ಫಲಾವಳಿಗಳ ಸವಾಲು ನಡೆದಿದ್ದು, ಸಾಯಂಕಾಲ ವಿವಿಧ ತಂಡಗಳಿಂದ ಭಜನಾ ಕಾರ್ಯಕ್ರಮ ನಡೆಯಿತು. ರಾತ್ರಿ ಮಕ್ಕಳ ಮನರಂಜನಾ ಕಾರ್ಯಕ್ರಮ ಹಾಗೂ ಗ್ರಾಮಸ್ಥರಿಂದ ಜಾನಪದ ಸೊಗಡು ಉಳಿಸುವ ತವರಿನ ತುತ್ತು ನಾಟಕ ಪ್ರದರ್ಶನ ನಡೆಯಿತು. ಸಂಕ್ರಾಂತಿಯಂದು ಮಳೆ ಸಿಂಚನವಾದರೂ ಎಲ್ಲ ಭಕ್ತಾಧಿಗಳಿಗೆ ಅನ್ನ ಪ್ರಸಾದ ವಿತರಿಸಲಾಯಿತು. ಸಮಿತಿಯ ಅಧ್ಯಕ್ಷ ಸಂತೋಷ ನಾಯ್ಕ, ಉಪಾಧ್ಯಕ್ಷ ವೆಂಕಟ್ರಮಣ ನಾಯ್ಕ ಸೇರಿದಂತೆ ಗ್ರಾಮಸ್ಥರ ಸಹಯೋಗದಲ್ಲಿ ಶಿಸ್ತಿನಿಂದ ಕಾರ್ಯಕ್ರಮ ಆಚರಿಸಲಾಯಿತು.



### ಜಿಲ್ಲಾ ನೀರು, ನೈರ್ಮಲ್ಯ ಮಿಷನ್ ಸಮಿತಿ ಸಭೆ

# ಕುಡಿಯುವ ನೀರು ಕಲುಷಿತಗೊಳ್ಳದಂತೆ ಎಚ್ಚರ ವಹಿಸಿ: ಡಾ. ದಿಲೀಷ್ ಶಶಿ

● **ತತ್ವನಿಷ್ಠ, ಕಾರವಾರ:** ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಮೂಲಗಳ, ನೀರಿನ ಮಾದರಿಗಳನ್ನು ಪರೀಕ್ಷಿಸಿ, ನೀರು ಕಲುಷಿತಗೊಳ್ಳದಂತೆ ನಿರಂತರವಾಗಿ ಪರಿಶೀಲನೆ ನಡೆಸಿ, ಅಗತ್ಯವಿರುವ ಎಲ್ಲ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ದಿಲೀಷ್ ಶಶಿ ಸೂಚನೆ ನೀಡಿದರು.



ಅವರು ಜಿ.ಪಂ. ಸಭಾಂಗಣದಲ್ಲಿ ನಡೆದ ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ ಸಮಿತಿ ಸಭೆಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯ ಗ್ರಾಮೀಣ ಜನವಸತಿ ಪ್ರದೇಶಗಳ ಕುಡಿಯುವ ನೀರು ಸರಬರಾಜು ವ್ಯವಸ್ಥೆಯಡಿ ಕ್ಲೋರಿನೇಶನ್ ಮಾಡಿರುವ ಬಗ್ಗೆ ಮತ್ತು ಪೈಪ್ ಲೈನ್‌ಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಿರುವ ಬಗ್ಗೆ ನಿರಂತರವಾಗಿ ಪರಿಶೀಲಿಸಬೇಕು. ನೀರಿನ ಮಾದರಿಗಳನ್ನು ಪಡೆದು ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಒಳಪಡಿಸಿ, ನೀರು ಗುಣಮಟ್ಟದಿಂದ ಕೂಡಿದ್ದು, ಕುಡಿಯಲು ಯೋಗ್ಯವಿರುವ ಬಗ್ಗೆ ಖಚಿತಪಡಿಸಿಕೊಂಡು ಸಾರ್ವಜನಿಕರಿಗೆ ಸರಬರಾಜು ಮಾಡುವಂತೆ ನಿರ್ದೇಶನ ನೀಡಿದರು.

ಕುಡಿಯುವ ನೀರಿನ ಮೂಲಗಳು ಕಲುಷಿತವಾಗಿರುವುದು ಕಂಡು ಬಂದಲ್ಲಿ ತಕ್ಷಣವೇ ಅಗತ್ಯ ಕ್ರಮಗಳನ್ನು ಕೈಗೊಂಡು, ಸಾರ್ವಜನಿಕರಿಗೆ ಯಾವುದೇ ಹಾನಿಯಾಗದಂತೆ ಎಚ್ಚರವಹಿಸಬೇಕು. ಕಲುಷಿತ ನೀರಿನ ಮೂಲವನ್ನು ಶುದ್ಧಗೊಳಿಸಲು ಸಾಧ್ಯವಿಲ್ಲದಿದ್ದಲ್ಲಿ ಪರ್ಯಾಯ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡುವಂತೆ ಮತ್ತು ಈ ಸಂದರ್ಭದಲ್ಲಿ ಪ್ರಮಾಣೀಕೃತ ಕಾರ್ಯವಿಧಾನಗಳನ್ನು (ಎಸ್.ಓ.ಪಿ) ಅಳವಡಿಸಿಕೊಂಡು ಕಾರ್ಯನಿರ್ವಹಿಸಲು ತಿಳಿಸಿದರು.

ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನತೆ ವಾಸಿಸುವ ಪ್ರದೇಶದಲ್ಲಿ ಹಮ್ಮಿಕೊಂಡ ಕುಡಿಯುವ ನೀರಿನ ಕಾಮಗಾರಿಗಳ ಪ್ರಸ್ತಾವನೆಯನ್ನು 2 ವಾರದೊಳಗೆ ಸಲ್ಲಿಸುವಂತೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಿಡಲಾದ ಅನುದಾನವನ್ನು ನಿಗದಿತ ಅವಧಿಯೊಳಗೆ ಬಳಸಬೇಕಾಗಿರುವುದರಿಂದ ತಾಲೂಕುವಾರು ಹಂಚಿಕೆಯಾದ ಕಾಮಗಾರಿಗಳಲ್ಲಿ ಏನಾದರೂ ಬದಲಾವಣೆಗಳಿದ್ದಲ್ಲಿ ಸ್ಥಳೀಯ ಶಾಸಕರ ಗಮನಕ್ಕೆ ತಂದು ಪ್ರಸ್ತಾವನೆ ಸಲ್ಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಲ ಜೀವನ ಮಿಷನ್ ಯೋಜನೆಯ ಕಾಮಗಾರಿಗಳ ಅವಧಿ ವಿಸ್ತರಣೆಯ 20 ಪ್ರಸ್ತಾವನೆಗಳ ಪೈಕಿ 3 ಕಾಮಗಾರಿಗಳ ಅವಧಿ ವಿಸ್ತರಣೆಗೆ ಈ ಸಮಿತಿಯಲ್ಲಿ ಅನುಮೋದನೆ ನೀಡಲು ಅವಕಾಶವಿದ್ದು, ಉಳಿದ ಕಾಮಗಾರಿಗಳು 2 ವರ್ಷ ಮೇಲ್ಪಟ್ಟು ವಿಳಂಬ ಆಗಿರುವುದರಿಂದ ಸರ್ಕಾರದಿಂದ ಅನುಮೋದನೆ ಆಗಬೇಕಾಗಿದೆ ಅಂತಹ ಕಾಮಗಾರಿಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಕ್ರಮ ಕೈಗೊಳ್ಳಲು ತಿಳಿಸಿದರು.

ಸಭೆಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಧಾರವಾಡ ವಿಭಾಗದ ಮುಖ್ಯ ಇಂಜನೀಯರ್, ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಅಲ್ಲಾಭಕ್ಷ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯನಿರ್ವಾಹಕ ಇಂಜನೀಯರ್ ಎಚ್. ಸತ್ಯಪ್ಪ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

# ಅರಣ್ಯ ನೀತಿ ನೆಪದಲ್ಲಿ ಉತ್ತರಕನ್ನಡದ ಬೆಟ್ಟ ಭೂಮಿಗಳ ಮೇಲೆ ಸರ್ಕಾರದ ಕಣ್ಣು?

■ **ಮಹೇಶ್ವರ ಹೆಗಡೆ, ಬಲವಳ್ಳಿ**

ಉತ್ತರ ಕನ್ನಡ ಜಿಲ್ಲೆಯ ರೈತರು ಸಾಂಪ್ರದಾಯಿಕವಾಗಿ ಬಳಕೆ ಮಾಡಿಕೊಂಡು ಬಂದಿರುವ ಅಸ್ಸೆಸ್ಸಡ್ ಮತ್ತು ಅಸ್ಸೈನಡ್ ಬೆಟ್ಟ ಭೂಮಿಗಳ ಮೇಲೆ ಅರಣ್ಯ ಇಲಾಖೆ ಅಡ್ಡಿಪಡಿಸುತ್ತಿರುವುದರಿಂದ ರೈತ ಸಮುದಾಯದಲ್ಲಿ ತೀವ್ರ ಅಸಮಾಧಾನ ಉಂಟಾಗಿದೆ. ಕಂದಾಯ ಇಲಾಖೆ ತೀರ್ವೆ (ಕಂದಾಯ) ಆಕರಣೆ ಮಾಡುತ್ತಿರುವ ಈ ಭೂಮಿಗಳನ್ನು ಅರಣ್ಯ ಇಲಾಖೆಯ ನಿಯಂತ್ರಣಕ್ಕೆ ಒಳಪಡಿಸಲು ನಡೆಯುತ್ತಿರುವ ಪ್ರಯತ್ನಗಳು, ರೈತರ ಬದುಕಿಗೆ ದೊಡ್ಡ ಆತಂಕವಾಗಿ ಪರಿಣಮಿಸುತ್ತಿವೆ ಎಂಬ ಆರೋಪಗಳು ಕೇಳಿಬರುತ್ತಿವೆ.

ಉತ್ತರ ಕನ್ನಡ ಜಿಲ್ಲೆಯ ಅಸ್ಸೆಸ್ಸಡ್ ಮತ್ತು ಅಸ್ಸೈನಡ್ ಬೆಟ್ಟ ಭೂಮಿಗಳು, ರಾಜ್ಯದ ಇತರ ಭಾಗಗಳಾದ ದಕ್ಷಿಣ ಕನ್ನಡ ಜಿಲ್ಲೆಯ ಕುಮ್ಕಿ , ಕಾನು, ಬಾಣೆ ಭೂಮಿಗಳು, ಉತ್ತರ ಕನ್ನಡದ ಹಾಡಿ ಭೂಮಿಗಳು, ಮೈಸೂರು ಪ್ರದೇಶದ ಕಾನು ಮತ್ತು ಸೊಪ್ಪಿನ ಬೆಟ್ಟಗಳು, ಕೊಡಗಿನ ಜಮ್ಮಾ-ಬಾಣೆ ಭೂಮಿಗಳು ಹಾಗೂ ಹೈದರಾಬಾದ್ ಪ್ರದೇಶದ ಮೋಟಸ್ಥಳ ತರಿ ಭೂಮಿಗಳಿಗಿಂತ ಭಿನ್ನ ಸ್ವರೂಪದ್ದಾಗಿವೆ. ಇಲ್ಲಿ ಬೆಟ್ಟ ಭೂಮಿಗಳಿಗೆ ಲಾಗೂ ಭಾಗಾಯತದ ಜೊತೆಗೆ ತೀರ್ವೆ ಆಕರಣೆ ಮಾಡಲಾಗುತ್ತಿದ್ದು , ಸರ್ಕಾರ ನೇರವಾಗಿ ಕಂದಾಯ ವಸೂಲಿ ಮಾಡುತ್ತಿದೆ. ಇದೇ ಕಾರಣದಿಂದ ಈ ಭೂಮಿಗಳನ್ನು "ಅಸ್ಸೆಸ್ಸಡ್ ಮತ್ತು ಅಸ್ಸೈನಡ್ ಬೆಟ್ಟ ಭೂಮಿಗಳು" ಎಂದು ಗುರುತಿಸಲಾಗುತ್ತಿದೆ.

ಕಂದಾಯವನ್ನು ವಸೂಲಿ ಮಾಡುತ್ತಿರುವ ಹಿನ್ನೆಲೆಯಲ್ಲಿ, ಈ ಭೂಮಿಗಳನ್ನು ಕಂದಾಯ ಇಲಾಖೆಯ ಅಧೀನಕ್ಕೆ ನೀಡಲಾಗಿದ್ದು , ಕರ್ನಾಟಕ ಭೂಕಂದಾಯ ಅಧಿನಿಯಮ-1964ರ ಕಲಂ 79/2ರ ಅಡಿಯಲ್ಲಿ ಸ್ಪಷ್ಟವಾಗಿ ಗುರುತಿಸಲಾಗಿದೆ. ಈ ಕಲಂನ ಉಪಪ್ರಕರಣ (1) ರ ಪ್ರಕಾರ ಉತ್ತರ ಕನ್ನಡ ಜಿಲ್ಲೆಯ ಬೆಟ್ಟ ಭೂಮಿಗಳ ಮೇಲೆ ಈ ಹಿಂದಿನಿಂದಲೂ ಬಳಕೆಯಲ್ಲಿದ್ದ ವಿಶೇಷ ಹಕ್ಕು-ಸೌಲಭ್ಯಗಳು ಮುಂದುವರಿಯಬೇಕೆಂದು ಸ್ಪಷ್ಟಪಡಿಸಲಾಗಿದೆ. ಈ ಹಕ್ಕುಗಳ ವಿವರಗಳು ಕರ್ನಾಟಕ ಅರಣ್ಯ ಕೈಪಿಡಿ 131ಎಫ್‌ನಲ್ಲಿಯೂ ಉಲ್ಲೇಖಗೊಂಡಿವೆ.

ಬೆಟ್ಟ ಬಳಕೆದಾರರ ಪ್ರಕಾರ, ಉತ್ತರ ಕನ್ನಡ ಜಿಲ್ಲೆಯ ಅಸ್ಸೆಸ್ಸಡ್ ಮತ್ತು ಅಸ್ಸೈನಡ್ ಬೆಟ್ಟ ಭೂಮಿಗಳ ಮೇಲಿನ ಹಕ್ಕುಗಳು ಬ್ರಿಟಿಷ್ ಕಾಲದ ಬಾಂಬೆ ಪ್ರೆಸಿಡೆನ್ಸಿ ಸರ್ಕಾರ ಜಾರಿಗೆ ತಂದ ಕಾನೂನುಗಳು ಮತ್ತು ರೆಸಲ್ಯೂಷನ್‌ಗಳ ಮೂಲಕ ಮಾನ್ಯತೆ ಪಡೆದಿವೆ. ಬ್ರಿಟಿಷರ ಆಗಮನಕ್ಕೂ ಮುನ್ನದಿಂದಲೇ ಈ ಭೂಮಿಗಳನ್ನು ರೈತರು ಸಾಂಪ್ರದಾಯಿಕವಾಗಿ ಬಳಸಿಕೊಂಡು ಬಂದಿದ್ದು , ನಂತರ ಅದನ್ನು ಕಾನೂನುಬದ್ಧಗೊಳಿಸಲಾಗಿದೆ ಎಂಬ ದಾಖಲೆಗಳೂ ಲಭ್ಯವಿವೆ.

ಇಷ್ಟಿದ್ದರೂ, ಅರಣ್ಯ ಇಲಾಖೆ ಕರ್ನಾಟಕ ಭೂಕಂದಾಯ ಅಧಿನಿಯಮದ ಕಲಂ 79/2 ಹಾಗೂ ಅರಣ್ಯ ಕೈಪಿಡಿ 131ಎಫ್‌ಗೆ ವಿರುದ್ಧವಾಗಿ ಬಳಕೆಯ ಹಕ್ಕುಗಳಿಗೆ ಅಡ್ಡಿಪಡಿಸುತ್ತಿದೆ ಎಂಬ ಆರೋಪಗಳು ಕೇಳಿಬಂದಿವೆ. ಬೆಟ್ಟದಲ್ಲಿ ಕೃಷಿ ಹಾಗೂ ಸಂಬಂಧಿತ ಚಟುವಟಿಕೆ ನಡೆಸಲು ತೊಂದರೆ ಆಗುತ್ತಿದ್ದು , ಈ ಕುರಿತು ಅರಣ್ಯ ಇಲಾಖೆಯನ್ನು ಸಂಪರ್ಕಿಸಿದಾಗ ಸಮರ್ಪಕ ಉತ್ತರ ಸಿಗುತ್ತಿಲ್ಲ ಎನ್ನುವುದು ರೈತರ ಅಳಲು.

ಇನ್ನೊಂದೆಡೆ, ಅಸ್ಸೆಸ್ಸಡ್ ಮತ್ತು ಅಸ್ಸೈನಡ್ ಬೆಟ್ಟ ಭೂಮಿಗಳಲ್ಲಿ ಅನಧಿಕೃತ ಅತಿಕ್ರಮಣ ನಡೆದಿದ್ದರೂ, ಅದನ್ನು ತೆರವುಗೊಳಿಸಲು ಸಂಬಂಧಿಸಿದ ಇಲಾಖೆಗಳಿಂದ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುತ್ತಿಲ್ಲ ಎಂಬ ಆರೋಪವೂ ಇದೆ. ಇದರಿಂದ ಭೂಗಳ್ಳರಿಗೆ ಮತ್ತಷ್ಟು ಅತಿಕ್ರಮಣಕ್ಕೆ ಪ್ರೋತ್ಸಾಹ ದೊರೆಯುವಂತಾಗಿದೆ ಎಂದು ಬೆಟ್ಟ ಬಳಕೆದಾರರು ಆತಂಕ ವ್ಯಕ್ತಪಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಬೆಟ್ಟ ಬಳಕೆದಾರರು ಹಾಗೂ ಹೋರಾಟಗಾರರು ಕೆಲವು ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ.

ರಾಜ್ಯದ ಇತರ ಸೊಪ್ಪಿನ ಬೆಟ್ಟಗಳಿಗಿಂತ ಭಿನ್ನ ಸ್ವರೂಪ ಹೊಂದಿರುವ ಉತ್ತರ ಕನ್ನಡ ಜಿಲ್ಲೆಯ ಅಸ್ಸೆಸ್ಸಡ್ ಮತ್ತು ಅಸ್ಸೈನಡ್ ಬೆಟ್ಟ ಭೂಮಿಗಳನ್ನು ಸರಿಯಾಗಿ ಗುರುತಿಸಿ, ಆಕಾರಬಂದುವಿನ 5ಬಿ ಕಾಲಂನಲ್ಲಿ ತಪ್ಪಾಗಿ ದಾಖಲಾಗಿರುವ ಅಂಶಗಳನ್ನು ತಿದ್ದುಪಡಿ ಮಾಡಿ, 28ನೇ ಕಾಲಂನಲ್ಲಿ ಸ್ಪಷ್ಟವಾಗಿ ಗುರುತಿಸಬೇಕು. ಪಹಣಿಯಲ್ಲಿ 3ನೇ ಕಾಲಂನಲ್ಲಿ ಯಾವುದೇ "ಖರಾಬು" ಎಂದು ನಮೂದಿಸದೇ, ಸಂಪೂರ್ಣ ಕ್ಷೇತ್ರವನ್ನು ಉಳಿಸಿ, 9ನೇ ಕಾಲಂನಲ್ಲಿ ಪೂರ್ಣ ಕ್ಷೇತ್ರವನ್ನು ದಾಖಲಿಸಬೇಕು ಎಂಬುದು ಅವರ ಮೊದಲ ಬೇಡಿಕೆ.

ಅದೇ ರೀತಿ, ತೀರ್ವೆ ತುಂಬುತ್ತಿರುವ ಅಸ್ಸೆಸ್ಸಡ್ ಮತ್ತು ಅಸ್ಸೈನಡ್ ಬೆಟ್ಟ ಭೂಮಿಗಳಿಂದ ಅನಧಿಕೃತ ಅತಿಕ್ರಮಣದಾರರನ್ನು ತಕ್ಷಣ ತೆರವುಗೊಳಿಸಿ, ಮೂಲ ಬಳಕೆದಾರರು ಯಾವುದೇ ಅಡ್ಡಿ-ಆತಂಕವಿಲ್ಲದೆ ಸಂಪೂರ್ಣ ಬೆಟ್ಟ ಕ್ಷೇತ್ರವನ್ನು ಉಪಯೋಗಿಸಲು ಅವಕಾಶ ಮಾಡಿಕೊಡಬೇಕು ಎಂಬುದು ಮತ್ತೊಂದು ಪ್ರಮುಖ ಆಗ್ರಹವಾಗಿದೆ.

ಬೆಟ್ಟ ಬಳಕೆದಾರರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ, ಕಂದಾಯ ಇಲಾಖೆ, ಅರಣ್ಯ ಇಲಾಖೆ ಹಾಗೂ ಸಂಬಂಧಿಸಿದ ಸಕ್ಷಮ ಪ್ರಾಧಿಕಾರಗಳು ತಕ್ಷಣ ಕ್ರಮ ಕೈಗೊಂಡು ರೈತರಿಗೆ ನ್ಯಾಯ ಒದಗಿಸಬೇಕೆಂದು ಬೆಟ್ಟ ಬಳಕೆದಾರರ ಪರವಾಗಿ ಒತ್ತಾಯಿಸಲಾಗಿದೆ.

## ಜ.18ರಂದು ವಿಶೇಷ ಚಿಂತನ ಸಭೆ

● **ತತ್ತ್ವನಿಷ್ಠ, ಸಿದ್ದಾಪುರ:** ವಿವಾದಾತ್ಮಕ ಅಘನಾಶಿನಿ ನದಿ ಜೋಡಣೆ ಯೋಜನೆ ಹಾಗೂ ಅರಣ್ಯವಾಸಿಗಳ ಸಮಸ್ಯೆಗಳ ಕುರಿತು ಚರ್ಚಿಸಲು ಇದೇ ಜನವರಿ 18ರ ಭಾನುವಾರದಂದು ಬೆಳಿಗ್ಗೆ 10 ಗಂಟೆಗೆ ಪಟ್ಟಣದ ರಾಘವೇಂದ್ರ ಮಠದ ಸಭಾ ಮಂಟಪದಲ್ಲಿ ವಿಶೇಷ 'ಚಿಂತನ ಸಭೆ'ಯನ್ನು ಆಯೋಜಿಸಲಾಗಿದೆ ಎಂದು ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಜಿಲ್ಲಾ ಸಂಚಾಲಕ ಮಾಬ್ಲೇಶ್ವರ ನಾಯ್ಕ ಬೇಡ್ಕಣಿ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಅಘನಾಶಿನಿ ಜಲ ವಿದ್ಯುತ್ ಹಾಗೂ ನದಿ ಜೋಡಣೆ ಯೋಜನೆಯು ಪರಿಸರ ವಿರೋಧಿ ಯೋಜನೆಯಾಗಿದೆ. ಅಘನಾಶಿನಿ ನದಿಯ ನೀರನ್ನು ಸಾಗರ, ಶಿವಮೊಗ್ಗ ಮತ್ತು ತರೀಕೆರೆ ಮಾರ್ಗವಾಗಿ ವಾಣಿ ವಿಲಾಸ ಜಲಾಶಯಕ್ಕೆ ಕೊಂಡೊಯ್ಯುವ ಪ್ರಸ್ತಾಪವಿದ್ದು , ಇದರಿಂದ ಉತ್ತರ ಕನ್ನಡ ಜಿಲ್ಲೆಯ ಪರಿಸರ ವ್ಯವಸ್ಥೆಯ ಮೇಲೆ ಗಂಭೀರ ದುಷ್ಪರಿಣಾಮ ಬೀರಲಿದೆ. ಈ ಹಿನ್ನೆಲೆಯಲ್ಲಿ, ಯೋಜನೆಯ ಸಾಧಕ-ಬಾಧಕಗಳು ಹಾಗೂ ಅರಣ್ಯವಾಸಿಗಳು ಎದುರಿಸುತ್ತಿರುವ ಅಭದ್ರತೆಯ ಕುರಿತು ಸಭೆಯಲ್ಲಿ ಸವಿವರವಾಗಿ ಚರ್ಚಿಸಲಾಗುವುದು ಎಂದು ತಿಳಿಸಿದ್ದಾರೆ.ಜಿಲ್ಲಾ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಅಧ್ಯಕ್ಷರಾದ ರವೀಂದ್ರ ನಾಯ್ಕ ಅವರು ಈ ಚಿಂತನ ಸಭೆಯ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಈ ಮಹತ್ವದ ಸಭೆಗೆ ಸಾರ್ವಜನಿಕರು ಹಾಗೂ ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಅವರು ಕೋರಿದ್ದಾರೆ.



● **ತತ್ತ್ವನಿಷ್ಠ, ಯಲ್ಲಾಪುರ:** ತಾಲೂಕಿನ ಬಾರೆಯ ಯುವ ಕೃಷಿಕ ರಾಮಕೃಷ್ಣ ಭಟ್ಟ ಅವರು ಶಿರಸಿಯ ಕದಂಬ ಸಂಸ್ಥೆ ನೀಡುವ ಪ್ರತಿಷ್ಠಿತ ರಾಣಿ ಚೆನ್ನಭೈರಾದೇವಿ ಯುವ ಕೃಷಿಕ ಪ್ರಶಸ್ತಿಗೆ ಭಾಜನರಾಗಿದ್ದಾರೆ. ನೀರ್ನಳ್ಳಿಯ ಸೀತಾರಾಮ ಹೆಗಡೆಯವರ ಮನೆಯಂಗಳದಲ್ಲಿ ನಡೆದ ಕಾಳುಮೆಣಸಿನ ಹಬ್ಬದಲ್ಲಿ ಗಣ್ಯರ ಉಪಸ್ಥಿತಿಯಲ್ಲಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

# ಅಯ್ಯಪ್ಪ ಸನ್ನಿಧಿಯಲ್ಲಿ ಹರಿ-ಹರ ಐಕ್ಯತೆ: ಸಂಭ್ರಮದ ಜಾತ್ರೆ

## ಬ್ರಹ್ಮಾನಂದ ಶ್ರೀ ಆಶೀರ್ವಚನ | ಸಹಸ್ರಾರು ಭಕ್ತರಿಂದ ದೇವರ ದರ್ಶನ

● **ತತ್ತ್ವನಿಷ್ಠ, ಸಿದ್ದಾಪುರ:** ಸೂರ್ಯನು ದಕ್ಷಿಣಾಯನದಿಂದ ಉತ್ತರಾಯಣಕ್ಕೆ ಪಥ ಬದಲಿಸುವ ಮಕರ ಸಂಕ್ರಮಣವು ಕೇವಲ ಗ್ರಹಗಳ ಚಲನೆಯಲ್ಲ, ಅದು ಮನುಷ್ಯನ ಮನಸ್ಸನ್ನು ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯುವ ಪವಿತ್ರ ಕಾಲ ಎಂದು ಶ್ರೀ ಚೈತನ್ಯ ರಾಜಾರಾಮ ಕ್ಷೇತ್ರ ಶಿರಳಗಿಯ ಶ್ರೀ ಬ್ರಹ್ಮಾನಂದಾ ಭಾರತೀ ಸ್ವಾಮಿಗಳು ಹೇಳಿದರು.



ಅವರು ಬುಧವಾರ ಪಟ್ಟಣದ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಜಾತ್ರೋತ್ಸವದ 5 ನೇ ದಿನದ ಕಾರ್ಯಕ್ರಮ ದಲ್ಲಿ ಭಾಗವಹಿಸಿ ಆಶೀರ್ವಚನ ನೀಡಿದರು.

ಸಂಕ್ರಾಂತಿಯ ದಿನದಂದು ಗಂಗಾಸ್ನಾನ ಅಥವಾ ಪವಿತ್ರ ಜಲದಲ್ಲಿ ಸ್ನಾನ ಮಾಡುವುದು ದೈಹಿಕ ಶುದ್ಧಿಯ ಜೊತೆಗೆ ಮಾನಸಿಕ ಮಲಿನತೆಯನ್ನು ಕಳೆಯುತ್ತದೆ. ಈ ಸಂದರ್ಭದಲ್ಲಿ ಮಾಡುವ ಎಳ್ಳು ದಾನ ಮತ್ತು ಅರ್ಚನೆಗಳು ಜನ್ಮಾಂತರದ ಪಾಪಗಳನ್ನು ಕಳೆಯಬಲ್ಲವು. ಅಯ್ಯಪ್ಪ ಸ್ವಾಮಿಯ ವ್ರತವು ಹರಿ ಮತ್ತು ಹರನ ಐಕ್ಯತೆಯನ್ನು ಸಾರುತ್ತದೆ. ಇಲ್ಲಿ ಜಾತಿ, ಮತ ಭೇದವಿಲ್ಲದೆ ಎಲ್ಲ ಭಕ್ತರನ್ನು 'ಸ್ವಾಮಿ' ಎಂದು ಕರೆಯುವ ಮೂಲಕ ಅದ್ಭುತವಾದ ಸಾಮಾಜಿಕ ಸಮಾನತೆಯನ್ನು ಕಾಣಬಹುದು. ಶಬರಿಮಲೆಯ 18 ಮೆಟ್ಟಿಲುಗಳು ಕೇವಲ ಕಲ್ಲಿನ ರಚನೆಗಳಲ್ಲ; ಅವು ಪಂಚ ಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು, ನಾಲ್ಕು ಅಂತಃಕರಣಗಳಾದ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ, ಮೂರು ಗುಣಗಳಾದ ಸತ್ವ , ರಜ, ತಮ ಹಾಗೂ ವಿದ್ಯಾ-ಅವಿದ್ಯೆಯನ್ನು ಪ್ರತಿನಿಧಿಸುವ ಯೋಗದ ಹಂತಗಳಾಗಿವೆ.41 ದಿನಗಳ ಮಂಡಲ ವ್ರತವನ್ನು ಶ್ರದ್ಧೆಯಿಂದ ಪಾಲಿಸಿ, ಇರುಮುಡಿಯನ್ನು ಹೊತ್ತು ಸಾಗುವ ಭಕ್ತನು ತನ್ನ ಲೌಕಿಕ ಆಸೆಗಳನ್ನು ಸುಟ್ಟು , ಪರಮಾತ್ಮನಲ್ಲಿ ಲೀನವಾಗುತ್ತಾನೆ ಎಂಬುದೇ ಈ ಯಾತ್ರೆಯ ಅಂತರಾರ್ಥ. ಕಪ್ಪು ಎಳ್ಳಿನ ಸ್ನಾನ ಮತ್ತು ಅಯ್ಯಪ್ಪನ ದರ್ಶನಗಳು ನಮ್ಮ ಬದುಕಿನ ದಿಕ್ಸೂಚಿಯಾಗಬೇಕು ಎಂದು ಅವರು ಕರೆ ನೀಡಿದರು

ಅಯ್ಯಪ್ಪ ಸೇವಾ ಸಮಿತಿಯ ಅಧ್ಯಕ್ಷ ಡಾ. ಕೆ.ಶ್ರೀಧರ ವೈದ್ಯ ಮಾತನಾಡಿ ಜೀವನ ಎನ್ನುವುದು ನಿರಂತರ ಸಂಘರ್ಷ. ಕಷ್ಟ-ಸುಖಗಳೆಲ್ಲವೂ ಮುಗಿದ ಮೇಲೆ ಬದುಕು ನಡೆಸುತ್ತೇನೆ ಎನ್ನುವುದು, ಸಮುದ್ರದ ಅಲೆಗಳು ನಿಂತ ಮೇಲೆ ಸ್ನಾನ ಮಾಡುತ್ತೇನೆ ಎನ್ನುವಷ್ಟೇ ಮೂರ್ಖತನದ ಮಾತು. ಕಷ್ಟಗಳ ನಡುವೆಯೇ ನೆಮ್ಮದಿ ಮತ್ತು ದೇವರನ್ನು ಕಾಣುವುದೇ ನಿಜವಾದ ಜೀವನ . ವರ್ಷಕ್ಕೊಮ್ಮೆ ಬರುವ ಈ ಉತ್ಸವವು ಊರವರನ್ನು ಒಂದೆಡೆ ಸೇರಿಸುವ ಕೊಂಡಿಯಾಗಿದೆ. ಇಲ್ಲಿ ಜಾತಿ, ಮತ, ಭೇದವಿಲ್ಲದೆ ಎಲ್ಲರೂ ಒಟ್ಟಾಗಿ ದೇವರ ಸೇವೆಯಲ್ಲಿ ತೊಡಗುವುದೇ ಈ ಕ್ಷೇತ್ರದ ವಿಶೇಷ. ಕಳೆದ ಐದು ದಿನಗಳಿಂದ ನಡೆಯುತ್ತಿರುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಕ್ತರು ತೋರಿದ ಶಿಸ್ತು ಮತ್ತು ಭಕ್ತಿ ಅಭಿನಂದನಾರ್ಹ ಎಂದು ಶ್ಲಾಘಿಸಿದರು.

ಜಾತ್ರಾ ಸಮಿತಿ ಅಧ್ಯಕ್ಷ ಕೆ ಜಿ. ನಾಗರಾಜ ಮಾತನಾಡಿ ಇಲ್ಲಿ ಶ್ರೀಮಂತ-ಬಡವ ಎಂಬ ತಾರತಮ್ಯವಿಲ್ಲ. ಪ್ರತಿಯೊಬ್ಬರೂ ಸ್ವಾಮಿಯ ಸೇವೆಯಲ್ಲಿ ಸ್ವಯಂಪ್ರೇರಿತರಾಗಿ, ಸೇವಾ ಮನೋಭಾವದಿಂದ ತೊಡಗಿಸಿಕೊಳ್ಳುತ್ತಾರೆ. ತಾಯಂದಿರು ಸೇರಿದಂತೆ ಎಲ್ಲಾ ಸ್ವಯಂಸೇವಕರು ಹಗಲಿರುಳು ಶ್ರಮಿಸಿ ಅಯ್ಯಪ್ಪನ ಸನ್ನಿಧಿಯಲ್ಲಿ ಶಾಂತಿಯ ವಾತಾವರಣ ನಿರ್ಮಿಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಸಿದ್ದಾಪುರದಿಂದ ಕಾಲು ನಡಿಗೆ ಮೂಲಕ ಶಬರಿಮಲೆ ಗೆ ಕಾಲು ನಡಿಗೆ ಮೂಲಕ ಹೋಗಿ ದರ್ಶನ ಮಾಡಿ ಬಂದ ಕಾಶಿನಾಥ ಗುಡಿಗಾರ ದಂಪತಿಗಳನ್ನು ಶ್ರೀ ಗಳು ಸನ್ಮಾನಿಸಿದರು.

ಸಮಿತಿಯ ಪ್ರಮುಖರಾದ ಪಿ ಬಿ. ಹೊಸೂರ್, ಶ್ರೀಪಾದ ಹೆಗಡೆ, ಸುದರ್ಶನ ಪಿಳ್ಳೆ, ಶ್ರೀನಿವಾಸ್ ಪ್ರಭು ಸದಾನಂದ್ ಕಾಮತ, ಗಣಪತಿ ನಾಯ್ಕ , ವಿಜಯ್ ಹೆಗಡೆ, ರಮೇಶ್ ಆಚಾರ್ಯ, ಕಾಶೀನಾಥ ಗುಡಿಗಾರ, ಕೆ ಕೆ ನಾಯ್ಕ್, ರಘುವೀರ ನಾಯ್ಕ ಮುಂತಾದವರುಸಭೆ ಯಲ್ಲಿ ಉಪಸ್ಥಿತರಿದ್ದರು.

ಬೆಳಿಗ್ಗೆಯಿಂದ ದೇವಸ್ಥಾನದ ತಂತ್ರಿಯವರಾದ ಬ್ರಹ್ಮಶ್ರೀ ತರಣ ನಲ್ಲೂರು ಪದ್ಮನಾಭನ್ ಉಣ್ಣಿ ನಂಬೂದರಿ ಇವರಿಂದ ವಿಶೇಷ ಪೂಜೆ ಹಾಗೂ ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಿತು.ಎಂಟು ಸಾವಿರಕ್ಕೂ ಅಧಿಕ ಭಕ್ತಾದಿಗಳು ಅನ್ನಸಂತರ್ಪಣೆ ಯಲ್ಲಿ ಪಾಲ್ಗೊಂಡಿದ್ದರು. ಉತ್ಸವದ ಪ್ರಧಾನ ಅರ್ಚಕ, ವಿಶೇಷ ಪಾತ್ರಿಗಳಾದ ವೆ. ಮೂ. ಗಣೇಶ ಭಟ್ಟ ಉಚ್ಚಿಲ ಧಾರ್ಮಿಕ ಕಾರ್ಯಕ್ರಮ ದಲ್ಲಿ ಉಪಸ್ಥಿತರಿದ್ದರು.

# ವಿವೇಕಾನಂದರ ತತ್ತ್ವ-ಆದರ್ಶಗಳನ್ನು ಮೈಗೂಡಿಸಿಕೊಳ್ಳಿ

● **ತತ್ತ್ವನಿಷ್ಠ, ಸಿದ್ದಾಪುರ:** ಯುವಕರು ಸ್ವಾಮಿ ವಿವೇಕಾನಂದರ ತತ್ವ ಹಾಗೂ ಆದರ್ಶಗಳನ್ನು ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕು. ಅವರ ಜೀವನ ಮತ್ತು ಮೌಲ್ಯಗಳು ಇಂದಿಗೂ ಜೀವಂತವಾಗಿದ್ದು , ಅವು ಯುವಕರ ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕೆ ದಾರಿದೀಪವಾಗಿವೆ ಎಂದು ಸಿದ್ದಾಪುರದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರಾದ ಶಾರದಾದೇವಿ ಸಿ. ಹಟ್ಟಿ ಅವರು ಹೇಳಿದರು.




ಅವರು ತಾಲೂಕು ಕಾನೂನು ಸೇವಾ ಸಮಿತಿ, ಅಭಿಯೋಜನಾ ಇಲಾಖೆ, ನ್ಯಾಯವಾದಿಗಳ ಸಂಘ, ಪೊಲೀಸ್ ಇಲಾಖೆ ಹಾಗೂ ಕವಂಚೂರಿನ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಇವರ ಸಂಯುಕ್ತಾಶ್ರಯದಲ್ಲಿ ಇತ್ತೀಚಿಗೆ ಏರ್ಪಡಿಸಲಾಗಿದ್ದ 'ರಾಷ್ಟ್ರೀಯ ಯುವ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸ್ವಾಮಿ ವಿವೇಕಾನಂದರ ಜನ್ಮ ದಿನದ ಅಂಗವಾಗಿ ಪ್ರತಿ ವರ್ಷ ರಾಷ್ಟ್ರೀಯ ಯುವ ದಿನವನ್ನು ಆಚರಿಸಲಾಗುತ್ತದೆ ಎಂದು ಅವರು ಸ್ಮರಿಸಿದರು.

ಗೌರವ ಉಪಸ್ಥಿತರಿದ್ದ ಸಿದ್ದಾಪುರದ ಸಿವಿಲ್ ಜಡ್ಜ್ ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಧೀಶರಾದ ಉಮೇಶ ಎಂ.ಪಿ. ಅವರು ಮಾತನಾಡಿ, ತಾಲೂಕು ಕಾನೂನು ಸೇವಾ ಸಮಿತಿಯ ಧ್ಯೇಯೋದ್ದೇಶಗಳ ಬಗ್ಗೆ ಅರಿವು ಮೂಡಿಸಿದರು. ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಮತ್ತು ಇತರ ಎಲ್ಲಾ ದಾಖಲೆಗಳು ಸರಿಯಾಗಿರುವಂತೆ ನೋಡಿಕೊಳ್ಳಬೇಕೆಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಸಿದ್ಧಾಪುರದ ಮಹಿಳಾ ಉಪ ನಿರೀಕ್ಷಕರಾದ ಗೀತಾ ಶಿರ್ಶಿಕರ ಅವರು ರಸ್ತೆ ಸುರಕ್ಷತೆ ಮತ್ತು ಮೋಟಾರು ವಾಹನ ಕಾಯಿದೆ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕವಂಚೂರಿನ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಪ್ರಾಂಶುಪಾಲರಾದ ವೀರಣ್ಣ ಎಸ್. ನೂರಂದನವರ ವಹಿಸಿದ್ದರು. ಉಪನ್ಯಾಸಕಿ ಶ್ವೇತಾ ಸ್ವಾಗತಿಸಿದರು, ಹಾಗೂ ಸುಮನ ವಂದಿಸಿದರು. 10ನೇ ತರಗತಿಯ ವಿದ್ಯಾರ್ಥಿಗಳು ಪ್ರಾರ್ಥಿಸಿದರು.

# ಭಗವದ್ಗೀತೆ ಇದು ಮನಃಶಾಸ್ತ್ರ ಗ್ರಂಥವೂ ಹೌದು: ನಾರಾಯಣ



● **ತತ್ತ್ವನಿಷ್ಠ, ಯಲ್ಲಾಪುರ:** ಭಗವದ್ಗೀತೆ ಕೇವಲ ಧರ್ಮ ಗ್ರಂಥವಲ್ಲ. ಇದು ಮನಃಶಾಸ್ತ್ರ ಗ್ರಂಥವೂ ಹೌದು ಎಂದಿ ನಿವೃತ್ತ ಸಂಸ್ಕೃತ ಉಪನ್ಯಾಸಕ ನಾರಾಯಣ ಭಟ್ಟ ಹೇಳಿದರು.

ಅವರು ಪಟ್ಟಣದ ವಿಶ್ವದರ್ಶನ ಶಿಕ್ಷಣ ಸಮೂಹದ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಸಭಾಭವನದಲ್ಲಿ ನಡೆದ ಭಗವದ್ಗೀತೆ ಸಪ್ತಾಹದ ಸಮಾರೋಪದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು. ಶ್ರೇಷ್ಠ, ನ್ಯಾಯಯುತ ಜೀವನದ ಚೌಕಟ್ಟನ್ನು ನೀಡುವ ಗ್ರಂಥವಿದು. ಚಂಚಲವಾದ ಮನಸ್ಸು ಲೋಕ ಮೋಹದಲ್ಲಿ ತೊಡಗಿಸಿಕೊಂಡಿರುತ್ತದೆ. ಅದನ್ನು ಹಿಡಿತದಲಿಟ್ಟು , ಆತ್ಮಾವಲೋಕನ ಮಾಡಿಕೊಳ್ಳಲು ಭಗವದ್ಗೀತೆ ಓದು ಸಹಕಾರಿ ಎಂದರು.

ಭಗವದ್ಗೀತೆಯ ಪ್ರಶ್ನೋತ್ತರದಲ್ಲಿ ಗುಣಾತ್ಮಕ ಶಿಕ್ಷಣದ ಕುರಿತು ತಿಳಿಸಲಾಗಿದೆ. ಗುರುವಿನೊಂದಿಗಿನ ಸಂವಾದ ಅತೀ ಹೆಚ್ಚಿನ ಜ್ಞಾನ ಪಡೆಯಲು ಕಾರಣ ಎಂಬುದನ್ನು ತಿಳಿಸುತ್ತದೆ. ವಿದ್ಯಾರ್ಥಿಗಳು ಮೌನವಾಗಿರದೆ, ಪ್ರಶ್ನೆ ಕೇಳುವ ಮನೋಭಾವ ಬೆಳೆಸಿಕೊಂಡರೆ ಉನ್ನತ ಮಟ್ಟದ ಶಿಕ್ಷಣ ಪಡೆದುಕೊಳ್ಳಬಹುದು. ದಿನನಿತ್ಯ ಗೀತೆಯ 5 ಶ್ಲೋಕವನ್ನು ಓದಿ, ಅರ್ಥೈಸಿಕೊಂಡು, ಅಳವಡಿಸಿಕೊಳ್ಳುವುದನ್ನು ರೂಢಿಸಿಕೊಳ್ಳಬೇಕು ಎಂದರು.

ವಿಶ್ವದರ್ಶನ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ. ಡಿ ಕೆ ಗಾಂವ್ಕರ್ ಮಾತನಾಡಿ, ಭಗವದ್ಗೀತೆ ಪಠಣ ಕೇವಲ ಸಪ್ತಾಹಕ್ಕೆ ಸೀಮಿತವಾಗದೇ ನಿರಂತರವಾಗಿರಬೇಕು ಎಂದರು.

ಕೇಂದ್ರೀಯ ಶಾಲೆಯ ಪ್ರಾಂಶುಪಾಲೆ ಮಹಾದೇವಿ ಭಟ್ ಸ್ವಾಗತಸಿದರು. ಅಮಿತ ಭಟ್ ನಿರೂಪಿಸಿದರು. ವಿನೀತ್ ಭಟ್ ವಂದಿಸಿದರು.

# ಶಿವಯೋಗಿ ಸಿದ್ದರಾಮೇಶ್ವರರ ಜಯಂತಿ ಆಚರಣೆ

● **ತತ್ತ್ವನಿಷ್ಠ, ಮುಂಡಗೋಡ:** 12ನೇ ಶತಮಾನದಲ್ಲಿ ಬಸವಣ್ಣನವರಂತೆ ಸಮಾಜ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದವರಲ್ಲಿ ಶಿವಯೋಗಿ ಸಿದ್ದರಾಮೇಶ್ವರರು ಕೂಡ ಒಬ್ಬರು ಎಂದು ಮುಂಡಗೋಡ ತಹಸೀಲ್ದಾರ್ ಶಂಕರ ಗೌಡಿ ಹೇಳಿದರು.



ಬುಧವಾರ ಇಲ್ಲಿಯ ಮಿನಿ ವಿಧಾನಸೌಧ ಎದುರಿನ ಶ್ರೀ ಸಿದ್ದರಾಮೇಶ್ವರ ಗದ್ದುಗೆ ಆವರಣದಲ್ಲಿ ತಾಲೂಕು ಆಡಳಿತ, ತಾಪಂ ಹಾಗೂ ಪಪಂ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಉದ್ಘಾಟಿಸಿ ಮಾತನಾಡಿದರು.

ತಾಪಂ ಕಾರ್ಯನಿರ್ವಹಣಾಧಿಕಾರಿ ಟಿ.ವೈ. ದಾಸನಕೊಪ್ಪ , ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಎಸ್. ಫಕ್ಕೀರಪ್ಪ , ಬೋವಿ ಸಮಾಜದ ಜಿಲ್ಲಾಧ್ಯಕ್ಷ ಹನುಮಂತಪ್ಪ ಆರೇಗೊಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ತಾಲೂಕು ಬೋವಿ ಸಮಾಜದ ಅಧ್ಯಕ್ಷ ದಯಾನಂದ ಕಳಸಾಪುರ, ದಲಿತ ಮುಖಂಡ ಚಿದಾನಂದ ಹರಿಜನ, ಪಪಂ ಮುಖ್ಯಾಧಿಕಾರಿ ಸಂತೋಷ ಹಾಲಕಲ್ಲಾಪುರ, ಕ್ಷೇತ್ರ ಶಿಕ್ಷಣಾಧಿಕಾರಿ ಜಿ. ಸುಮಾ, ಸಹಾಯಕ ಕೃಷಿ ನಿರ್ದೇಶಕ ಕೆ.ಎನ್. ಮಹಾರೆಡ್ಡಿ , ಕಸಾಪ ಅಧ್ಯಕ್ಷ ವಸಂತ ಕೊಣಸಾಲಿ, ತೋಟಗಾರಿಕೆ ಇಲಖೆ ಹಿರಿಯ ಸಹಾಯಕ ನಿದೇಶಕ ಕೃಷ್ಣ ಕುಳ್ಳೂರ, ಗ್ರಾಮೀಣ ಕುಡಿಯುವ ನೀರು ಯೋಜನೆ ಇಲಾಖೆ ಅಧಿಕಾರಿ ರಾಜೇಶ್ವರಿ ಕದಂ, ರೂಪಾ ಅಂಗಡಿ, ಎಸ್.ಎಸ್. ಪಾಟೀಲ ಮುಂತಾದವರು ಉಪಸ್ಥಿತರಿದ್ದರು. ಪಿ. ನಾಗೇಂದ್ರ ಉಪನ್ಯಾಸ ನೀಡಿದರು. ಮಲ್ಲಿಕಾರ್ಜುನ ಬಡಿಗೇರ ನಿರೂಪಿಸಿ, ವಂದಿಸಿದರು.

ಇದೇ ಸಂದರ್ಭದಲ್ಲಿ ಜವಾಹರ ನವೋದಯ ಶಾಲೆಗೆ ಆಯ್ಕೆಯಾದ ತಾಲೂಕಿನ ಮಕ್ಕಳಿಗೆ ಹುಲಿಗೆಮ್ಮ ದೇವಿ ಶಿಕ್ಷಣ ಸಂಸ್ಥೆ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಮಂಜುನಾಥ ಬೋವಿ ಇದ್ದರು.

## ಸ್ವಾಮಿ ವಿವೇಕಾನಂದ ಜನ್ಮ ದಿಚರಣೆ




● **ತತ್ತ್ವನಿಷ್ಠ, ಶಿರಸಿ:** ಇಲ್ಲಿನ ವಿವೇಕಾನಂದನಗರದ ಸಮೃದ್ಧಿ ಮಹಿಳಾ ಮಂಡಳ ಹಾಗೂ ಪಂದಳ ಚಾರಿಟೇಬಲ್ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ಟ್ರಸ್ಟ್‌ನ ಕಚೇರಿಯ ಎದುರುಗಡೆ ಆವರಣದಲ್ಲಿ ಸ್ವಾಮಿ ವಿವೇಕಾನಂದರ ಜನ್ಮ ದಿನವನ್ನು ಇತ್ತೀಚೆಗೆ ಆಚರಿಸಲಾಯಿತು.

ಚಿಂತಕರು, ಸಾಹಿತಿಗಳು ಹಾಗೂ ಸಾಮಾಜಿಕ ಕಾರ್ಯಕರ್ತ ಮಂಜುನಾಥ ಹೆಗಡೆ, ಸ್ವಾಮಿ ವಿವೇಕಾನಂದರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ವಿವೇಕಾನಂದರ ಕುರಿತು ಮಾತನಾಡಿ, ತಮ್ಮ ಅನಿಸಿಕೆ ಹಂಚಿಕೊಂಡರು. ಚಿಂತಕರ ಚಾವಡಿಯ ಅಧ್ಯಕ್ಷ ಶ್ರೀಧರ ಭಟ್, ಕರ್ನಾಟಕ ವಿಕಾಸ ಬ್ಯಾಂಕ್ನ ನಿವೃತ್ತ ಅಧಿಕಾರಿ ಕೃಷ್ಣ ಭಟ್, ಕೆ.ಎಸ್.ಆರ್. ಟಿ.ಸಿ ನಿವೃತ್ತ ನೌಕರ ಚಂದ್ರಶೇಖರ ಸಿ., ಡಿ.ಎಸ್.ನಾಯ್ಕ ಅವರು ವಿವೇಕಾನಂದರ ಕುರಿತು ಹಿತಗಳನ್ನುನಾಡಿದರು. ಈ ಸಂದರ್ಭದಲ್ಲಿ ಸಮೃದ್ಧಿ ಮಹಿಳಾ ಮಂಡಳ ಹಾಗೂ ಪಂದಳ ಚಾರಿಟೇಬಲ್ ಟ್ರಸ್ಟ್ ನ ಸದಸ್ಯರು ಮತ್ತು ಹಿರಿಯ ನಾಗರಿಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

### 80 ಸಾವಿರ ಅರಣ್ಯವಾಸಿ ಕುಟುಂಬಗಳಿಗೆ ಕೇವಲ 19 ಸಾವಿರ ಹೆಕ್ಟರ್ ಭೂಮಿ ನೀಡಲು ಹಿಂದೇಟು

# ಯೋಜನೆಗೆ ಸಾಕು – ಇನ್ನೂ ಜೀವನಕ್ಕೆ ನೀಡಿ: ರವೀಂದ್ರ ನಾಯ್ಕ

● **ತತ್ತ್ವನಿಷ್ಠ, ಶಿರಸಿ:** ಸ್ವಾತಂತ್ರ್ಯ ನಂತರ ಉತ್ತರ ಕನ್ನಡ ಜಿಲ್ಲೆಯಲ್ಲಿ ವಿವಿಧ ರಾಷ್ಟ್ರೀಯ ಯೋಜನೆ ಮತ್ತು ಮೂಲಭೂತ ಸೌಕರ್ಯಗಳಿಗಾಗಿ 64,365 ಹೆಕ್ಟರ್ ಅರಣ್ಯ ಭೂಮಿಯನ್ನು ಸರ್ಕಾರ ಅರಣ್ಯೇತರ ಚಟುವಟಿಕೆಗಳಿಗೆ ಬಿಡುಗಡೆ ಮಾಡಿದೆ. ಆದರೆ, ಅರಣ್ಯದಲ್ಲೇ ವಾಸಿಸಿ ಜೀವನ ನಡೆಸುತ್ತಿರುವ ಸುಮಾರು 80 ಸಾವಿರ ಅರಣ್ಯವಾಸಿ ಕುಟುಂಬಗಳು ಸಾಗುವಳಿ ಮಾಡುತ್ತಿರುವ 19 ಸಾವಿರ ಹೆಕ್ಟರ್ ಅರಣ್ಯ ಭೂಮಿಯನ್ನು ಅವರಿಗೆ ಹಸ್ತಾಂತರಿಸಲು ಸರ್ಕಾರ ಹಿಂಜರಿಯುತ್ತಿರುವುದು ವಿಷಾದಕರ ಎಂದು ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ಹೇಳಿದರು.

ಅಭಿವೃದ್ಧಿ ಹೆಸರಿನಲ್ಲಿ ಅರಣ್ಯ ಭೂಮಿಯನ್ನು ದಾರಾಳವಾಗಿ ನೀಡುತ್ತಿರುವ ಸರ್ಕಾರ, ಬದುಕಿಗಾಗಿ ಭೂಮಿ ಬೇಕೆಂದು ಹೋರಾಡುವ ಅರಣ್ಯವಾಸಿಗಳ ವಿಷಯದಲ್ಲಿ ಮಾತ್ರ ಕಠಿಣ ನಿಲುವು ತಾಳುತ್ತಿದೆ. ಇದು ಸ್ಪಷ್ಟವಾದ ದ್ವಂದ್ವ ನೀತಿ ಎಂದು ಅವರು ಆರೋಪಿಸಿದರು.



ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಪ್ರಮಾಣ 1973ರಲ್ಲಿ 72.26% ಇದ್ದು , 2013ರಲ್ಲಿ 59.70%ಕ್ಕೆ ಇಳಿಕೆಯಾಗಿದೆ. 40 ವರ್ಷಗಳಲ್ಲಿ 12.55% ಅರಣ್ಯ ಕಡಿಮೆಯಾಗಿದೆ. ಈ ಕುಸಿತಕ್ಕೆ ಅರಣ್ಯವಾಸಿಗಳ ಅತಿಕ್ರಮಣ ಕಾರಣವಲ್ಲ; ಅಭಿವೃದ್ಧಿ ಯೋಜನೆಗಳಿಗೆ ಅರಣ್ಯ ಭೂಮಿ ನಿರಂತರವಾಗಿ ಬಿಡುಗಡೆ ಮಾಡಿರುವುದೇ ಪ್ರಮುಖ ಕಾರಣ ಎಂದು ರವೀಂದ್ರ ನಾಯ್ಕ ಪ್ರತಿಪಾದಿಸಿದರು.

ಮುಂಡಗೋಡ ತಾಲೂಕಿನಲ್ಲಿ 1,600 ಹೆಕ್ಟರ್ ಭೂಮಿಯನ್ನು ಟಿಬೆಟಿಯನ್ ಕಾಲೋನಿಗೆ ನೀಡಿರುವ ಸರ್ಕಾರ, ಜಿಲ್ಲೆಯ 80 ಸಾವಿರ ಅರಣ್ಯವಾಸಿ ಕುಟುಂಬಗಳಿಗೆ ಕೇವಲ 19 ಸಾವಿರ ಹೆಕ್ಟರ್ ಭೂಮಿ ನೀಡಲು ಹಿಂದೇಟು ಹಾಕುತ್ತಿರುವುದು ಖೇದಕರ. ಯೋಜನೆಗಳಿಗೆ "ಹೌದು", ಬದುಕಿಗೆ "ಇಲ್ಲ" ಎನ್ನುವ ನೀತಿ ತಕ್ಷಣ ಬದಲಾಗಬೇಕು ಎಂದು ಅವರು ಆಗ್ರಹಿಸಿದರು.

ಜಿಲ್ಲೆಯಲ್ಲಿ ಕಾಳಿ ಹೈಡ್ರೋ ಪ್ರಾಜೆಕ್ಟ್, ಶರಾವತಿ ಯೋಜನೆಗಳು, ಕೈಗಾ ಅಣುಸ್ಥಾವರ, ನೌಕಾ ನೆಲೆ, ಕೊಂಕಣ ರೈಲ್ವೇ, ಹುಬ್ಬಳ್ಳಿ-ಅಂಕೋಲ ರೈಲ್ವೇ, ಎನ್‌ಎಚ್-66 ಅಗಲೀಕರಣ, ಸೀಬರ್ಡ್ ನೌಕಾನೆಲೆ, ರಸ್ತೆ, ಉದ್ಯಮ, ಏತ ನೀರಾವರಿ, ಸಿವಿಲ್ ಏರ್‌ಪೋರ್ಟ್ ಹಾಗೂ ರಕ್ಷಣಾ ವಲಯ ಸೇರಿದಂತೆ ವಿವಿಧ ಯೋಜನೆಗಳಿಗೆ ಒಟ್ಟಾರೆ 64,365 ಹೆಕ್ಟರ್ ಅರಣ್ಯ ಭೂಮಿ ವರ್ಗಾಯಿಸಿರುವ ದಾಖಲೆಗಳು ಲಭ್ಯವಿವೆ ಎಂದು ಅವರು ತಿಳಿಸಿದರು.

ಅರಣ್ಯ ಹಕ್ಕು ಕಾಯಿದೆ ಅಡಿಯಲ್ಲಿ ಜಿಲ್ಲೆಯಲ್ಲಿ 80,684 ಅರ್ಜಿಗಳು ಸಲ್ಲಿಕೆಯಾಗಿದ್ದು , ಒಟ್ಟು 53,005 ಎಕರೆ ಸಾಗುವಳಿ ಪ್ರದೇಶಕ್ಕೆ ಸಂಬಂಧಿಸಿದೆ. ಇದರಲ್ಲಿ ಬಹುಪಾಲು ಅರ್ಜಿಗಳು 1 ಎಕರೆಗಿಂತ ಕಡಿಮೆ ಭೂಮಿಗೆ ಸಂಬಂಧಿಸಿದವು. ಆದರೂ ಅರಣ್ಯವಾಸಿಗಳನ್ನು ಅನಧಿಕೃತ ಒತ್ತುದಾರರೆಂದು ಗುರುತಿಸಿ ಒಕ್ಕಲೆಬ್ಬಿಸುವುದು ಅರಣ್ಯವಾಸಿ ವಿರೋಧಿ ನೀತಿಯಾಗಿದೆ ಎಂದು ಅವರು ಕಿಡಿಕಾರಿದರು.

ಅಭಿವೃದ್ಧಿಯ ಹೆಸರಿನಲ್ಲಿ ಅರಣ್ಯ ಭೂಮಿ ನೀಡುವುದು ನಿಲ್ಲಬೇಕು. ಈಗಾದರೂ ಸರ್ಕಾರ "ಯೋಜನೆಗೆ ಸಾಕು – ಇನ್ನೂ ಜೀವಕ್ಕೆ ನೀಡಿ" ಎಂಬ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ರವೀಂದ್ರ ನಾಯ್ಕ ಒತ್ತಾಯಿಸಿದರು.

ತತ್ವನಿಷ್ಠ
ನಾಡಿನ ನಿಖರ ನುಡಿ

## ಸಂಪಾದಕೀಯ

# ಬೀದಿ ನಾಯಿಗಳಿಗೆ ಬಿರಿಯಾನಿ ಅಲ್ಲ, ಜನರ ಜೀವಕ್ಕೆ ರಕ್ಷಣೆ ಬೇಕು

ದೇಶದಲ್ಲಿ ದಿನೇದಿನೇ ಹೆಚ್ಚುತ್ತಿರುವ ಬೀದಿ ನಾಯಿಗಳ ದಾಳಿ ಪ್ರಕರಣಗಳು ಕೇವಲ ಆಡಳಿತಾತ್ಮಕ ಲೋಪವಲ್ಲ, ಇದು ಸಾರ್ವಜನಿಕ ಸುರಕ್ಷತೆಗೆ ಸವಾಲಾಗಿ ಪರಿಣಮಿಸಿದೆ. ಈ ಹಿನ್ನಲೆಯಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ಇತ್ತೀಚಿನ ಕಠಿಣ ಎಚ್ಚರಿಕೆ, ಸರ್ಕಾರಗಳಿಗೆ ಕೇವಲ ತಾಕೀತಲ್ಲ; ಇದು ಹೊಣೆಗಾರಿಕೆಯ ಸ್ಪಷ್ಟ ಘೋಷಣೆಯಾಗಿದೆ. ಬೀದಿ ನಾಯಿ ಕಡಿತದಿಂದ ಸಂಭವಿಸುವ ಪ್ರತಿಯೊಂದು ಸಾವಿಗೂ ಸಂಬಂಧಪಟ್ಟ ರಾಜ್ಯ ಸರ್ಕಾರಗಳಿಗೆ ಭಾರೀ ಮೊತ್ತದ ಪರಿಹಾರ ವಿಧಿಸಲಾಗುತ್ತದೆ ಎಂದು ಉಚ್ಚ ನ್ಯಾಯಾಲಯ ಹೇಳಿರುವುದು, ಆಡಳಿತದ ನಿರ್ಲಕ್ಷ್ಯಕ್ಕೆ ತೀವ್ರ ಚಾಟಿ ಬೀಸಿದಂತಾಗಿದೆ.

ಇಂತಹ ಸಂದರ್ಭದಲ್ಲೇ, ಕರ್ನಾಟಕ ಸರ್ಕಾರ ಮತ್ತು ಬೆಂಗಳೂರು ಮಹಾನಗರ ಪಾಲಿಕೆ ಬೀದಿ ನಾಯಿಗಳಿಗೆ ಆಹಾರ ನೀಡುವ ಯೋಜನೆ ಕೈಗೊಳ್ಳುತ್ತಿರುವುದು ಜನರಲ್ಲಿ ಅಚ್ಚರಿಯ ಜೊತೆಗೆ ಆತಂಕವನ್ನೂ ಹುಟ್ಟಿಸಿದೆ. ಲಭ್ಯ ಮಾಹಿತಿಯಂತೆ, ಬೆಂಗಳೂರು ನಗರದಲ್ಲೇ ಸುಮಾರು 2.7 ರಿಂದ 2.8 ಲಕ್ಷ ಬೀದಿ ನಾಯಿಗಳು ಇದ್ದು, ಅವುಗಳಿಗೆ ಆಹಾರ ನೀಡಲು ವರ್ಷಕ್ಕೆ ಸುಮಾರು 2.9 ಕೋಟಿ ರೂಪಾಯಿ ವೆಚ್ಚ ಮಾಡುವ ಉದ್ದೇಶ ಸರ್ಕಾರದ್ದಾಗಿದೆ. ಜನರ ತೆರಿಗೆ ಹಣವನ್ನು ಬಳಸಿಕೊಂಡು ಬೀದಿ ನಾಯಿಗಳಿಗೆ ಬಿರಿಯಾನಿ ನೀಡುವ ಯೋಚನೆ, ಆಡಳಿತದ ಆದ್ಯತೆಗಳ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎಬ್ಬಿಸುತ್ತದೆ.

ನಿಜಕ್ಕೂ ಸಮಸ್ಯೆ ಬೀದಿ ನಾಯಿಗಳಿಗೆ ಆಹಾರ ಸಿಗುತ್ತಿಲ್ಲ ಎಂಬುದಲ್ಲ. ಸಮಸ್ಯೆ ಅವುಗಳ ಸಂಖ್ಯೆ ನಿಯಂತ್ರಣ ತಪ್ಪಿರುವುದು, ನಿರ್ವಹಣೆಯ ಕೊರತೆ ಮತ್ತು ಕಾನೂನುಬದ್ಧ ಕ್ರಮಗಳ ಜಾರಿಗೆ ಸರ್ಕಾರ ವಿಫಲವಾಗಿರುವುದೇ. ಕರ್ನಾಟಕದಲ್ಲಿ 2024–25ರ ಅವಧಿಯಲ್ಲಿ ಮೂರು ಲಕ್ಷಕ್ಕೂ ಅಧಿಕ ನಾಯಿ ಕಡಿತ ಪ್ರಕರಣಗಳು ದಾಖಲಾಗಿವೆ ಎಂಬುದು ಆತಂಕಕಾರಿ ಅಂಕಿ-ಅಂಶ. ಈ ದಾಳಿಗಳಲ್ಲಿ ಮಕ್ಕಳೂ, ವೃದ್ಧರೂ ಬಲಿಯಾಗಿದ್ದಾರೆ. ಕೆಲವೆಡೆ ಈ ದಾಳಿಗಳು ಮರಣಕ್ಕೂ ಕಾರಣವಾಗಿವೆ. ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿರುವಂತೆ, ಪ್ರಾಣಿ ಜನನ ನಿಯಂತ್ರಣ (ಎಬಿಸಿ) ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವಲ್ಲಿ ರಾಜ್ಯ ಸರ್ಕಾರಗಳು ಸಂಪೂರ್ಣ ವಿಫಲವಾಗಿವೆ. 1950ರ ದಶಕದಿಂದಲೇ ಈ ವಿಷಯ ಸಂಸತ್ತಿನ ಚರ್ಚೆಯಲ್ಲಿದ್ದರೂ, ಇಂದಿಗೂ ಸಮಸ್ಯೆ ಸಾವಿರ ಪಟ್ಟು ಹೆಚ್ಚಾಗಿದೆ ಎಂಬ ನ್ಯಾಯಾಲಯದ ಟೀಕೆ ಆಡಳಿತದ ಅಸಡ್ಡೆಯ ಪ್ರತಿಬಿಂಬವಾಗಿದೆ. ಇಂತಹ ಸ್ಥಿತಿಯಲ್ಲಿ ಆಹಾರ ನೀಡುವುದನ್ನು ಪರಿಹಾರವೆಂದು ತೋರಿಸುವುದು ಸಮಸ್ಯೆಯನ್ನು ಮುಚ್ಚಿಹಾಕುವ ಪ್ರಯತ್ನವೇ ಹೊರತು, ಮೂಲ ನಿವಾರಣೆ ಅಲ್ಲ.

ಬೀದಿ ನಾಯಿಗಳಿಗೆ ಅತಿಯಾಗಿ ಆಹಾರ ನೀಡುವುದರಿಂದ ಅವುಗಳ ಸಂತಾನೋತ್ಪತ್ತಿ ವೇಗವಾಗಿ ನಡೆಯುತ್ತದೆ. ಇದು ದಾಳಿಗಳ ಸಂಖ್ಯೆಯನ್ನು ಕಡಿಮೆ ಮಾಡುವ ಬದಲು ಹೆಚ್ಚಿಸುವ ಅಪಾಯವಿದೆ. ಆಹಾರ ನೀಡುವವರು ನೇರ ಹೊಣೆಗಾರರು ಎಂಬ ಸುಪ್ರೀಂ ಕೋರ್ಟ್‌ನ ಅಭಿಪ್ರಾಯ, ಸರ್ಕಾರದ ಯೋಜನೆಗಳಿಗೂ ಅನ್ವಯಿಸುತ್ತದೆ. ನಾಳೆ ಬೀದಿ ನಾಯಿ ದಾಳಿಯಿಂದ ಸಾವು ಸಂಭವಿಸಿದರೆ, ಆಹಾರ ನೀಡಿದ ಆಡಳಿತವೇ ನೈತಿಕ ಮತ್ತು ಕಾನೂನು ಹೊಣೆ ಹೊರುವ ಸ್ಥಿತಿ ನಿರ್ಮಾಣವಾಗುತ್ತದೆ.

ಸರ್ಕಾರಕ್ಕೆ ಈಗ ಅಗತ್ಯವಿರುವುದು ಭಾವನಾತ್ಮಕ ತೀರ್ಮಾನವಲ್ಲ, ವೈಜ್ಞಾನಿಕ ಮತ್ತು ಕಾನೂನುಬದ್ಧ ಕ್ರಮ. ಇದನ್ನು ಅರಿತರೆ ಅಷ್ಟೇ ಸಾಕು.

# ಸಹನೆ ದೌರ್ಬಲ್ಯವಲ್ಲ: ದೌರ್ಜನ್ಯ ಸಹಿಸಲ್ಲ, ಪ್ರತೀಕಾರ ತಪ್ಪಿದ್ದಲ್ಲ

**ಚಾಣಾಕ್ಯನಂತಹ ತಲೆ ಮತ್ತು ಭಾಜೀರಾವ್‌ನಂತಹ ಧೈರ್ಯದ ವ್ಯಕ್ತಿತ್ವ ಎಂದರೆ ಅದು ನಮ್ಮ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಧೋವಲ್. ಅಜಿತ್ ರ ತಂತ್ರಗಾರಿಕೆಯ ಹೆಗ್ಗಳಿಕೆ ಪರಿಣಾಮ ಭಾರತ ಅನೇಕ ಸಂಕಷ್ಟಗಳಿಂದ ಪಾರಾಗಿದೆ. ಪಾಕಿಸ್ತಾನಕ್ಕೆ ಕಾಲಕಾಲಕ್ಕೆ ತಕ್ಕ ಉತ್ತರ ನೀಡುವಲ್ಲಿ ಯಶಸ್ವಿಯಾಗಿದೆ. ತಮ್ಮ ಪ್ರೇರಣಾದಾಯಕ ಮಾತುಗಳಿಂದ ನನ್ನಂಥವರ ಹೃದಯ ಗೆದ್ದ ಆ ಧೀರ ನಿಜವಾಗಿಯೂ ಭಾರತದ ಹೆಮ್ಮೆಯ ಕುವರ. ಭಾರತದ ಶತ್ರು ರಾಷ್ಟ್ರಗಳು ಅದರಲ್ಲೂ ಪಾಕಿಸ್ತಾನ ಕಡುಚಳಿಯಲ್ಲೂ ಬೆವರುವಂತೆ ಮಾಡುವ ಸಾಮರ್ಥ್ಯ ಇರುವ ಏಕೈಕ ವ್ಯಕ್ತಿ ಎಂದರೆ ಅಜಿತ್ ಮಾತ್ರ. ಅವರು ಯುವಕರನ್ನುದ್ದೇಶಿಸಿ ಆಡಿದ ಮಾತುಗಳು ಬರೀ ಮಾತಲ್ಲ. ಭವ್ಯ ಭಾರತದ ಭವಿಷ್ಯದ ಮೆಟ್ಟಿಲುಗಳು.**



✍ ಡಾ.ಜಿ.ಜಿ.ಹೆಗಡೆ

**ಪ್ರಸ್ತುತ**



**ನಿ**ನ್ನೆ ಸಂಜೆ ಫೇಸ್‌ಬುಕ್ ನೋಡ್ತಾ ಇದ್ದೆ. ಹಾಗೆ ಸ್ಕ್ರೋಲ್ ಮಾಡ್ತಾ ಹೋದಂತೆ ಒಂದು ಕುತೂಹಲಕಾರಿ ಪೋಸ್ಟ್ ನೋಡಿದೆ. ಅದೇಕೋ ತುಂಬಾನೇ ಗಮನಸೆಳೆಯಿತು. ಆ ಪೋಸ್ಟ್ ಕೆಳಗೆ ಒಂದು ಯೂ ಟ್ಯೂಬ್ ಲಿಂಕ್ ಕೂಡ ಇತ್ತು. ಕೂಡಲೇ ಕ್ಲಿಕ್ ಮಾಡಿದೆ. ಅದರಲ್ಲಿ ಕೇಳಿದ್ದು ಭಾರತದ ಸುರಕ್ಷತೆ ಬಗ್ಗೆ ಮಾಡಬೇಕಾದ ಕ್ರಮಗಳ ಬಗ್ಗೆ.....

ಹಾಗೆಯೇ ಮುಂದೆ ನೋಡುತ್ತಾ ಹೋದಂತೆ ಮೈನವಿರೇಳಿಸಿತು. ಯೂ ಟ್ಯೂಬ್‌ನಲಿ ಪ್ರಸಾರವಾಗುತ್ತಿದ್ದ ವ್ಯಕ್ತಿಯ ಆ ಮಾತುಗಳು ನಿಜ ಎನಿಸಿದವು. ಅರೆ ಒಂದು ಕ್ಷಣ ನಾವಿದರ ಬಗ್ಗೆ ಯೋಚಿಸಿಯೇ ಇಲ್ಲವಲ್ಲ ಎಂದೆನಿಸಿತು. ಆ ವ್ಯಕ್ತಿಯಲ್ಲ ಶಕ್ತಿ ಆಡಿದ ಮಾತುಗಳು ಬೇರೇನೂ ಅಲ್ಲ ನಮ್ಮ ದೇಶದ ಭದ್ರತೆ ಮತ್ತು ಸುರಕ್ಷತೆಗೆ ಕೈಗೊಳ್ಳಲೇಬೇಕಾದ ಅನಿವಾರ್ಯತೆ ಬಗ್ಗೆ. ಆ ಶಕ್ತಿ ಬೇರೆ ಯಾರೂ ಅಲ್ಲ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಧೋವಲ್.

ಅವರ ಮಾತಲ್ಲಿ ನಮ್ಮ ದೇಶದ ಬಗ್ಗೆ ನೈಜ ಕಳಕಳಿ ಇತ್ತು. ರಕ್ಷಣೆಗೆ ಕೈಗೊಳ್ಳಬೇಕಾದ ಉಪಾಯಗಳ ಹುಡುಕಾಟ ಮತ್ತು ತುಡಿತವಿತ್ತು. ಪ್ರತಿ ಮಾತೂ ದೇಶಾಭಿಮಾನ ಉಕ್ಕಿಸುವಂತಿತ್ತು. ಇನ್ನೆಷ್ಟು ದಿನ ಅಂತಾ ಸಹಿಸೋದು? ನಮ್ಮ ಸಹನೆಗೂ ಒಂದು ಮಿತಿ ಇದೆ. ದಿಟ್ಟ ಪ್ರತ್ಯುತ್ತರ ನೀಡುವ ಕಾಲ ಸನ್ನಿಹಿತವಾಗಿದೆ ಮತ್ತು ಅನಿವಾರ್ಯವೂ ಹೌದು ಎಂದು ಅವರು ಆಡಿದ ಮಾತು ಎದೆಗೆ ನಾಟಿತು. ಇಷ್ಟು ದಿನ ನಮ್ಮಮೇಲೆ ನಡೆದ ನಿರಂತರ ಹಿಂಸೆ, ಮರೆಮಾಚಿದ ಇತಿಹಾಸ, ಜಗತ್ತು ನಮ್ಮ ಬಳಸಿ ಬಿಸಾಡಿದ ರೀತಿಯ ಬಗ್ಗೆ ಅವರಿಗಿದ್ದ ಆಕ್ರೋಶದ ಕಿಡಿ ನನ್ನಲ್ಲೂ ಹತ್ತಿತು. ಅವರ ಒಂದೊಂದು ಮಾತು ಬೆಂಕಿಯುಂಡೆಯಂತಾಗಿದ್ದವು. ನನಗೆ ಗೊತ್ತಿಲ್ಲದಂತೆ ರೋಮಗಳು ಎದ್ದು ನಿಂತವು. ನನ್ನಲ್ಲೂ ಎಲ್ಲೋ ಒಂದೆಡೆ ಆಕ್ರೋಶ ಭುಗಿಲೆದ್ದಿತು.

ಅಭಿವೃದ್ಧಿ ಹೊಂದಿದ ಭಾರತ ಯುವ ನಾಯಕರ ಸಂವಾದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಯುವಜನರೊಂದಿಗೆ ಅವರು ನಡೆಸಿದ ಸಂವಾದ ಹತ್ತು ಹಲವು ವಿಷಯಗಳನ್ನು ಪರಿಚಯಿಸಿತಲ್ಲದೇ ಪ್ರಧಾನಿ ನರೇಂದ್ರ ಮೋದಿಯವರಂತಹ ಬಲಿಷ್ಠ ನಾಯಕನ ಕೈಯಲ್ಲಿ ದೇಶದ ಚುಕ್ಕಾಣಿ ಕೊಟ್ಟಿರುವುದಕ್ಕೆ ಹೆಮ್ಮೆಯ ಭಾವ ಮೂಡಿಸಿತು. ಯುವಜನರು ತೆಗೆದುಕೊಳ್ಳುವ ನಿರ್ಧಾರ ಮುಂದಿನ ಪೀಳಿಗೆಯ ಭವಿಷ್ಯ ರೂಪಿಸಲಿದೆ ಎಂದು ಮಾರ್ಮಿಕವಾಗಿ ಹೇಳಿದ್ದು ಸತ್ಯ ಎನಿಸಿತು. ಎಲ್ಲಾ ಸಂಘರ್ಷಗಳು ಮತ್ತು ಯುದ್ಧಗಳಿಗೆ ಕಾರಣ ಕೆಲವು ದೇಶಗಳು ತಮ್ಮ ಇಚ್ಛೆಯನ್ನು ಇತರರ ಮೇಲೆ ಹೇರಲು ಬಯಸುತ್ತವೆ. ಅದಕ್ಕಾಗಿ ತಮ್ಮ ಶಕ್ತಿಯನ್ನು ಬಳಸಿಕೊಳ್ಳುತ್ತಿವೆ. ಅದಕ್ಕೆ ಮೊದಲು ನಾವು ಶಕ್ತಿಶಾಲಿಯಾಗಿ, ಸ್ವತಂತ್ರರಾಗಿರಬೇಕು. ನಮ್ಮಲ್ಲಿ ಆತ್ಮವಿಶ್ವಾಸ ಬರಬೇಕು. ಆಗ ಮಾತ್ರ ನಿಮ್ಮ ಶಸ್ತ್ರಾಸ್ತ್ರಗಳಿಗೆ ಬಲತುಂಬಿದಂತಾಗುತ್ತದೆ. ಇಂದು ನಮ್ಮ ದೇಶದಲ್ಲಿ ಅಂತಹ ನಾಯಕತ್ವವಿರುವುದು ನಮ್ಮ ಅದೃಷ್ಟ. ಅವರ ಬದ್ಧತೆ, ಸಮರ್ಪಣೆ ಮತ್ತು ಕಠಿಣ ಪರಿಶ್ರಮ ನಮಗೆಲ್ಲರಿಗೂ ಸ್ಫೂರ್ತಿ ಎಂದು ಹೇಳಿದ ಮಾತುಗಳು ಮನಸೆಳೆದವು. ನೈತಿಕ ಮತ್ತು ಮಾನವೀಯ ಮೌಲ್ಯಗಳ ಆಧಾರದ ಮೇಲೆ ಮಹಾನ್ ಭಾರತವನ್ನು ಮತ್ತೆ ನಿರ್ಮಿಸುವುದೇ ನಿಜವಾದ ಪ್ರತೀಕಾರ ಎಂದು ಯುವಜನರಿಗೆ ನೀಡಿದ ಕರೆ ಖರೆ ಎನಿಸಿತು. ನಾವೆಂದೂ ನಾವಾಗಿಯೇ ಇನ್ನೊಂದು ದೇಶದ ಮೇಲೆ ಅತಿಕ್ರಮಣ ಮಾಡಿದವರಲ್ಲ. ಇನ್ನೊಂದು ಧರ್ಮವನ್ನು ಕೀಳಾಗಿ ಕಂಡು ಮತಾಂತರ ಮಾಡಿಸಿದವರಲ್ಲ, ಇನ್ನೊಂದು ದೇಶದ ಸಂಪತ್ತು ನಮ್ಮದು ಎಂದವರಲ್ಲ. ಏಕೆಂದರೆ ಅದು ನಮ್ಮ ಸಭ್ಯತೆಯಲ್ಲ ಎಂದು ಟ್ರಂಪ್ ಹೆಸರು ಹೇಳದೇ ಆಡಿದ ಮಾತುಗಳು ಪ್ರಚಲಿತ ವಿದ್ಯಮಾನಗಳಿಗೆ ಹಿಡಿದ ಕೈಗನ್ನಡಿಯಾಗಿತ್ತು. ಟ್ರಂಪ್ ಎಂಬ ಹುಚ್ಚನ ಅತಿರೇಕದ ಆಟಗಳ ಬಗ್ಗೆ ಅವರ ಮಾತಿನಲ್ಲಿ ಪ್ರಸ್ತಾಪವಿತ್ತು. ಕಳೆದ ಒಂದು ದಶಕದಿಂದ ದೇಶ ಯಾವುದೇ ಸಂಘರ್ಷವಿಲ್ಲದೇ ಸಮರ್ಥ ನಾಯಕತ್ವದಡಿ ಮುನ್ನಡೆ ಸಾಗುತ್ತಿದೆ. ಮೋದಿಜಿ ನಮಗೆ ಆ ಸೌಭಾಗ್ಯವನ್ನು ಕೊಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಮೋದಿಜಿ ಇಲ್ಲದಿದ್ದರೂ ದೇಶ ನಡೆದೇ ನಡೆಯತ್ತೆ. ಆದರೆ ಮೋದಿಯಂಥವರು ಇನ್ನೂ ಹತ್ತು ಜನ ನಮ್ಮ ಮುಂದಿನ ಪೀಳಿಗೆಯಿಂದ ಬರಬೇಕು ಎನ್ನುವ ಆಶಯವೂ ಅಲ್ಲಿತ್ತು. ಪೂರ್ವಜರ ಸಂಘರ್ಷದ ಜೀವನ, ಸ್ವಾತಂತ್ರ್ಯ ಹೋರಾಟ, ನಮ್ಮ ದೇವಾಲಯಗಳ ನಾಶ ಹಾಗೂ ಅದರ ಮಹತ್ವ ಏನಾಗಿತ್ತು ಎಂಬುದರ ಬಗ್ಗೆ ಅವರು ತಿಳಿಸಿಕೊಟ್ಟ ಮಾಹಿತಿ ನಿಜಕ್ಕೂ ಕಣ್ತೆರೆಸುವಂಥದ್ದು.

ಅಜಿತ್ ಧೋವಲ್ ಎಂಬ ಹೆಸರು ಕೇಳಿದ ತಕ್ಷಣವೇ ಪ್ರತಿಯೊಬ್ಬ ಭಾರತೀಯನ ಕಿವಿ ನೆಟ್ಟಗಾಗುತ್ತವೆ. ಕಾರಣ ಧೋವಲ್ ಹೆಸರು ಸುದ್ದಿಯಲ್ಲಿ ಇದೆ ಎಂದಾದರೆ ಆತ ನಮ್ಮ ಶತ್ರು ರಾಷ್ಟ್ರಗಳಿಗೆ ಬುದ್ಧಿ ಕಲಿಸಲು ತಯಾರಿ ನಡೆಸುತ್ತಿದ್ದಾನೆ ಎಂದರ್ಥ. ಹೌದು, ಪ್ರಧಾನಿ ನರೇಂದ್ರ ಮೋದಿಯವರ ಭದ್ರತೆ ಸಲಹೆಗಾರಾಗಿರುವ ಧೋವಲ್ ಇಂಡಿಯನ್ ಜೇಮ್ಸ್ ಬಾಂಡ್. ಜಾಗತಿಕ ವಿದ್ಯಮಾನಗಳನ್ನು ಅವಲೋಕಿಸಿದರೆ ಇವರ ಈ ಮಾತುಗಳ ಹಿಂದೆ ಬಹಳಷ್ಟು ಅರ್ಥ ಮತ್ತು ತೂಕವಿದೆ ಎಂತಲೇ. ಉಗ್ರರು ಹಾಗೂ ಅವರಿಗೆ ಬೆಂಬಲ ನೀಡುವವರಿಗೆ ಮತ್ತೊಮ್ಮೆ ಕಠಿಣವಾಗಿಯೇ ಪ್ರತ್ಯುತ್ತರ ನೀಡಲೇಬೇಕಾದ ಅನಿವಾರ್ಯತೆ ಬಗ್ಗೆ ಪದೇ ಪದೆ ಅವರು ಒತ್ತಿ ಹೇಳಿದ್ದು ಒಂದು ಮಿಂಚಿನ ಸಂಚಲನ ಜತೆಗೆ ಕಠಿಣ ಸಂದೇಶದ ಕರೆಯೂ ಆಗಿತ್ತು. ಈಗಂತೂ ದುರಂಧರ್ ಸಿನಿಮಾ ನೋಡಿದ ಮೇಲೆ ಎಲ್ಲರ ತಲೆಯಲ್ಲಿ ದೇಶದ ಆಂತರಿಕ ಸುರಕ್ಷತೆ ಮತ್ತು ಭದ್ರತೆಗೆ ಶತ್ರು ದೇಶಗಳು ಹೇಗೆ ಸಂಚು ರೂಪಿಸುತ್ತಿವೆ ಮತ್ತು ಅದಕ್ಕೆ ನಮ್ಮವರೇ ನಮ್ಮ ನೆಲಸದಲ್ಲಿ ನಿಂತು ಹೇಗೆ ಬೆಂಬಲಿಸಿದರು ಮತ್ತು ಈಗಲೂ ಬೆಂಬಲಿಸುತ್ತಿದ್ದಾರೆ ಎನ್ನುವುದರ ಬಗ್ಗೆ ಜನರಿಗೆ ಸ್ವಲ್ಪ ಅರಿವಾಗಿದೆ. ಅದಕ್ಕೆ ಪೂರಕವಾಗಿ ಅಜಿತ್ ಧೋವಲ್ ರ ಈ ಘರ್ಜನೆ ನಿಜಕ್ಕೂ ಸಕಾಲಿಕ. ರಕ್ತಪಿಪಾಸು ಉಗ್ರರು ಭಾರತದ ಮೇಲೆ ದಾಳಿ ಮಾಡಲು ಮತ್ತೆ ಸನ್ನದ್ಧರಾಗಿದ್ದಾರೆ ಎಂಬ ಮಾಧ್ಯಮಗಳ ವರದಿ ಬೆನ್ನಲ್ಲೇ ಅಜಿತ್ ಧೋವಲರ್ ಈ ಸಂವಾದ ಹಲವು ಎಚ್ಚರಿಕೆಗಳನ್ನು ಕೂಡ ನೀಡಿದೆ.

## ಜನವರಿ 15 -ಸೈನಿಕ ದಿನ

**ಭಾ**ರತದಲ್ಲಿ ಪ್ರತಿ ವರ್ಷ 1949 ರಿಂದ ಜನವರಿ 15ರಂದು "ಸೈನಿಕರ ದಿನ"ವನ್ನು ಆಚರಿಸಲಾಗುತ್ತಿದೆ. 1948ರಲ್ಲಿ ಆಗಿನ ಬ್ರಿಟಿಷರ ಕೊನೆಯ ಕಮಾಂಡರ್ ಆಗಿದ್ದ ಸರ್ ಫ್ರಾನ್ಸಿಸ್ ಅವರಿಂದ ಪ್ರಥಮ ಭಾರತೀಯ ಸೈನ್ಯದ ಕಮಾಂಡರ್ ಇನ್ ಚೀಫ್ ಕೆ ಎಂ ಕಾರ್ಯಪ್ಪ ಅಧಿಕಾರವಹಿಸಿಕೊಂಡರು. ಕರ್ನಾಟಕದ ಮಡಿಕೇರಿಯ ಕೆ ಎಂ ಕಾಯಪ್ಪ ಫೀಲ್ಡ್ ಮಾರ್ಷಲ್ ಹುದ್ದೆಗೆ ಏರಿದರು.

**ಮಹತ್ವ :** ಈ ದಿನ ರಾಷ್ಟ್ರೀಯ ರಾಜಧಾನಿ ಕೇಂದ್ರದಲ್ಲಿ ಪರೇಡ್ ಮತ್ತು ಮಿಲ್ಟ್ರಿ ಶೋಗಳು ನಡೆಯುತ್ತವೆ. ದೇಶದ ರಕ್ಷಣೆಗಾಗಿ ತಮ್ಮ ಪ್ರಾಣವನ್ನು ಅರ್ಪಿಸಿದ ಹುತಾತ್ಮ ಯೋಧರನ್ನು ಸ್ಮರಿಸಲಾಗುತ್ತದೆ. ಇಂಡಿಯಾ ಗೇಟಿನಲ್ಲಿರುವ ಅಮರ್ ಜವಾನ್ ಜ್ಯೋತಿಗೆ ಗೌರವ ಸಲ್ಲಿಸಲಾಗುತ್ತದೆ. ಅಪ್ರತಿಮ ಹೋರಾಟಗಾರರಿಗೆ ಪ್ರಶಸ್ತಿ ನೀಡುತ್ತಾರೆ.ಭಾರತ ಸರ್ಕಾರ ವೀರ ಸೇನಾನಿಗಳಿಗೆ ಗೌರವ ಸಲ್ಲಿಸುವ ದ್ಯೋತಕವಾಗಿ ಈ ದಿನಾಚರಣೆ ನಡೆಯುತ್ತದೆ. ಪ್ರಪಂಚದ ಎರಡನೇ ಅತಿ ದೊಡ್ಡ ಸೈನ್ಯವನ್ನು ಹೊಂದಿದ ಭಾರತದ ಸೇನೆಯಲ್ಲಿರುವ ಸೈನಿಕರು ರಾಷ್ಟ್ರದ ರಕ್ಷಣೆಗಾಗಿ ಕಠಿಣ ಹಾಗೂ ಅಪಾಯಕಾರಿ ಕರ್ತವ್ಯವನ್ನು ನಿಭಾಯಿಸುತ್ತ ತಮ್ಮ ಜೀವದ ಹಂಗನ್ನು ತೊರೆದು ದೇಶದ ರಕ್ಷಣೆಯ ಗುರಿಯನ್ನು ಹೊಂದಿ ದೇಶದಲ್ಲಿ ಶಾಂತಿ ನೆಲೆಸಲು ಕಾರಣೀಕರ್ತರಾಗಿರುತ್ತಾರೆ. ಇಂತಹ ವೀರಯೋಧರಿಗೆ ಗೌರವ ಸಲ್ಲಿಸುವುದು ಪ್ರತಿಯೊಬ್ಬರ ಭಾರತೀಯನ ಕರ್ತವ್ಯವಾಗಿದೆ.

■ **ಡಾ. ಪಲ್ಲವಿ ಅಶ್ವಥ್ ಕುಮಟಾ**

# ಕಾಂಕ್ರೀಟ್ ಅಭಿವೃದ್ಧಿ ಭ್ರಮೆ ಮತ್ತು ಪಶ್ಚಿಮ ಘಟ್ಟದ ವಾಸ್ತವ

**ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಜೀವಮಾನವನ್ನೇ ಅರ್ಪಿಸಿದ ದಣಿವರಿಯದ ಹೋರಾಟಗಾರ, ಪರಿಸರ ವಿಜ್ಞಾನಿ ಡಾ. ಮಾಧವ ಗಾಡ್ಗೀಳ್ ಅವರು ಜನವರಿ 7ರಂದು ದೇಹಾತ್ಮಕವಾಗಿ ನಮ್ಮನ್ನು ಅಗಲಿದರೂ, ಅವರ ಚಿಂತನೆಗಳು, ವರದಿಗಳು ಮತ್ತು ಪರಿಸರಪರ ಕನಸುಗಳು ಇಂದು ಇನ್ನಷ್ಟು ಜೀವಂತವಾಗಿವೆ. ಪಶ್ಚಿಮ ಘಟ್ಟಗಳನ್ನು ಕೇವಲ ಭೌಗೋಳಿಕ ಪ್ರದೇಶವಲ್ಲ, ಜೀವಜಾಲದ ಸಮಗ್ರ ವ್ಯವಸ್ಥೆಯಾಗಿ ಅವರು ಕಂಡರು. ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಪರಿಸರ ನಾಶದ ವಿರುದ್ಧ ಅವರು ನೀಡಿದ ಎಚ್ಚರಿಕೆಗಳು ಇಂದಿನ ದುಸ್ಥಿತಿಯಲ್ಲಿ ಮತ್ತಷ್ಟು ಪ್ರಸ್ತುತವಾಗಿವೆ. ಈ ಹಿನ್ನೆಲೆಯಲ್ಲಿ, ಪಶ್ಚಿಮ ಘಟ್ಟಗಳ ಇಂದಿನ ಸ್ಥಿತಿ ಮತ್ತು ಭವಿಷ್ಯದ ದಾರಿಯನ್ನು ಕುರಿತು ಡಾ. ಮಾಧವ್ ಗಾಡ್ಗೀಳರ ಜೊತೆ ಮರಣೋತ್ತರ ಕಾಲ್ಪನಿಕ ಸಂದರ್ಶನವನ್ನು ಕೃಷ್ಣಮೂರ್ತಿ ಹೆಬ್ಬಾರ್, ಕರ್ಕಿ ನಡೆಸಿಕೊಟ್ಟಿದ್ದಾರೆ.**





✍ ಕೃಷ್ಣಮೂರ್ತಿ ಹೆಬ್ಬಾರ್, ಕರ್ಕಿ

**ಚಿಂತನೆ ಚಾವಡಿ**

**ಸಂದರ್ಶಕ:** ನಮಸ್ಕಾರ ಗಾಡ್ಗೀಳ್ ಅವರೇ, ಪಶ್ಚಿಮ ಘಟ್ಟಗಳ ಇಂದಿನ ಪರಿಸ್ಥಿತಿಯನ್ನು ನೋಡಿದರೆ ನಿಮಗೆ ಏನನ್ನಿಸುತ್ತದೆ? ನಾವು ಅಭಿವೃದ್ಧಿಯ ಹೆಸರಿನಲ್ಲಿ ವಿನಾಶದತ್ತ ಸಾಗುತ್ತಿದ್ದೇವಾ?

**ಮಾಧವ ಗಾಡ್ಗೀಳ್:** ನಮಸ್ಕಾರ. ನೋಡಿ, ನಾನು 2011ರಲ್ಲೇ ಸಲ್ಲಿಸಿದ ವರದಿಯಲ್ಲಿ "ಪಶ್ಚಿಮ ಘಟ್ಟಗಳು ಅತ್ಯಂತ ಸೂಕ್ಷ್ಮ ಪ್ರದೇಶಗಳು" ಎಂದು ಎಚ್ಚರಿಸಿದ್ದೆ. ಆದರೆ ಇಂದು ನಾವು ಕಾಣುತ್ತಿರುವ ಭೂಕುಸಿತಗಳು, ಅಕಾಲಿಕ ಪ್ರವಾಹಗಳು ಮತ್ತು ಜೀವವೈವಿಧ್ಯದ ನಾಶ—ಇವೆಲ್ಲವೂ ನಾವು ಪ್ರಕೃತಿಯ ಎಚ್ಚರಿಕೆಯನ್ನು ನಿರ್ಲಕ್ಷಿಸಿದ್ದರ ಫಲ. ನಾವು 'ಅಭಿವೃದ್ಧಿ' ಎನ್ನುವುದನ್ನು ಕೇವಲ ಕಾಂಕ್ರೀಟ್ ರಸ್ತೆ ಮತ್ತು ರೆಸಾರ್ಟ್‌ಗಳಲ್ಲಿ ಅಳೆಯುತ್ತಿದ್ದೇವೆ, ಇದು ತಪ್ಪು.

**ಸಂದರ್ಶಕ**: ನೀವು ಅಂದೇ ಇಡೀ ಪಶ್ಚಿಮ ಘಟ್ಟವನ್ನು 'ಪರಿಸರ ಸೂಕ್ಷ್ಮ ಪ್ರದೇಶ' (ESA) ಎಂದು ಘೋಷಿಸಲು ಹೇಳಿದ್ದೀರಿ. ಆದರೆ ರಾಜ್ಯ ಸರ್ಕಾರಗಳು ಅದನ್ನು ವಿರೋಧಿಸಿದವು. ಇದಕ್ಕೆ ಕಾರಣವೇನು?

ಮಾಧವ ಗಾಡ್ಗೀಳ್: ಅದಕ್ಕೆ ಮುಖ್ಯ ಕಾರಣ ನಮ್ಮ ನಡುವೆ ಎಲ್ಲೆಡೆ ಇರುವ ಹಣದಾಹಿಗಳಾದ ಸ್ಥಾಪಿತ ಹಿತಾಸಕ್ತಿಗಳು. ಗಣಿಗಾರಿಕೆ ಮಾಫಿಯಾ, ಮರಳು ಮಾಫಿಯಾ ಮತ್ತು ದೊಡ್ಡ ಮಟ್ಟದ ಭೂ-ಅತಿಕ್ರಮಣದಾರರಿಗೆ ಪರಿಸರ ಸಂರಕ್ಷಣೆ ಎಂದರೆ ಲಾಭಕ್ಕೆ ಅಡ್ಡಿ ಎಂದರ್ಥ. ನಾನು ಜನಸಾಮಾನ್ಯರ ವಿರುದ್ಧ ವರದಿ ನೀಡಲಿಲ್ಲ. ಬದಲಿಗೆ, ಸ್ಥಳೀಯ ಪಂಚಾಯತ್‌ಗಳಿಗೆ ಅಧಿಕಾರ ನೀಡಬೇಕು, ಅವರು ತಮ್ಮ ಕಾಡನ್ನು ರಕ್ಷಿಸಿಕೊಳ್ಳಬೇಕು ಎಂದು ಹೇಳಿದ್ದೆ. ಆದರೆ ರಾಜಕಾರಣಿಗಳು ಜನರಲ್ಲಿ ನನ್ನ ವರದಿ ವಿರುದ್ಧ ಸಾಮಾನ್ಯ ಜನರಿಗೆ ತಪ್ಪು ಮಾಹಿತಿ ನೀಡಿ ಭಯ ಹುಟ್ಟಿಸಿದರು.

**ಸಂದರ್ಶಕ:** ಇತ್ತೀಚಿನ ವರ್ಷಗಳಲ್ಲಿ ಕೇರಳ ಮತ್ತು ಕರ್ನಾಟಕದ ಮಲೆನಾಡಿನಲ್ಲಿ ಸಂಭವಿಸುತ್ತಿರುವ ಭೀಕರ ಭೂಕುಸಿತಗಳಿಗೆ ನೇರ ಕಾರಣವೇನು?

**ಮಾಧವ ಗಾಡ್ಗೀಳ್:** ಅದು ಅತ್ಯಂತ ಸರಳ ಸತ್ಯ. ಗುಡ್ಡಗಳ ಸಮತೋಲನ ಹದಗೆಟ್ಟಿರುವುದು ಮೊದಲ ಕಾರಣ. ಕಡಿದಾದ ಇಳಿಜಾರುಗಳಲ್ಲಿ ಜೆಸಿಬಿ ಬಳಸಿ ರಸ್ತೆ ಮಾಡುವುದು ಮತ್ತು ಬೃಹತ್ ಕಟ್ಟಡಗಳನ್ನು ಕಟ್ಟುವುದು.

ನೈಸರ್ಗಿಕ ಹರಿವಿನ ತಡೆ ಸಹ ಒಂದು. ಮಳೆ ನೀರು ಸರಾಗವಾಗಿ ಹರಿಯುವ ಹಾದಿಯನ್ನು ನಾವು ಮುಚ್ಚಿದ್ದೇವೆ.

ಏಕದಳ ಸಸ್ಯಗಳ ಕೃಷಿ ಸಹ ಕಾರಣ. ಸ್ವಾಭಾವಿಕ ಕಾಡುಗಳನ್ನು ಕಡಿದು ರಬ್ಬರ್ ,ಅಡಿಕೆ ಅಥವಾ ಅಕೇಶಿಯಾದಂತಹ ಏಕದಳ ಸಸ್ಯಗಳ ತೋಟಗಳನ್ನು ಮಾಡುವುದು ಮಣ್ಣಿನ ಹಿಡಿತವನ್ನು ಸಡಿಲಗೊಳಿಸುತ್ತದೆ. ಪ್ರಕೃತಿಯು ತನ್ನ ಸಹನೆಯನ್ನು ಕಳೆದುಕೊಂಡಾಗ ಇಂತಹ ದುರಂತಗಳು ಸಂಭವಿಸುತ್ತವೆ.

**ಸಂದರ್ಶಕ:** ಹಾಗಾದರೆ ಈಗಲೂ ಈ ಅಪಾಯದಿಂದ ಪಾರಾಗಲು ನಮಗೆ ಸಮಯವಿದೆಯೇ? ನಾವು ಪಶ್ಚಿಮ ಘಟ್ಟಗಳನ್ನು ಉಳಿಸಿಕೊಳ್ಳಲು ಏನು ಮಾಡಬೇಕು?

**ಮಾಧವ ಗಾಡ್ಗೀಳ್:** ಖಂಡಿತ ಸಮಯವಿದೆ, ಉಪಾಯವೂ ಇದೆ.ಆದರೆ ನಾವು ತಕ್ಷಣ ಕಾರ್ಯಪ್ರವೃತ್ತರಾಗಬೇಕು:

ವಿಕೇಂದ್ರೀಕರಣ ಅಗತ್ಯ. ಪರಿಸರ ರಕ್ಷಣೆಯ ನಿರ್ಧಾರಗಳನ್ನು ಎಸಿ ಕೊಠಡಿಯಲ್ಲಿ ಕುಳಿತ ಅಧಿಕಾರಿಗಳಲ್ಲ, ಹಳ್ಳಿಯ ಜನರು ತೆಗೆದುಕೊಳ್ಳುವಂತಾಗಬೇಕು.

ಗಣಿಗಾರಿಕೆ ನಿಷೇಧವಾಗಲಿ. ಸೂಕ್ಷ್ಮ ವಲಯಗಳಲ್ಲಿ ಕ್ವಾರಿ ಮತ್ತು ಗಣಿಗಾರಿಕೆಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕು.

ಪರಿಸರ ಸ್ನೇಹಿ ಪ್ರವಾಸೋದ್ಯಮ ಅಗತ್ಯ. ಬೃಹತ್ ರೆಸಾರ್ಟ್‌ಗಳ ಬದಲು ಪರಿಸರಕ್ಕೆ ಹಾನಿಯಾಗದ 'ಹೋಂ ಸ್ಟೇ' ಸಂಸ್ಕೃತಿಯನ್ನು ಉತ್ತೇಜಿಸಬೇಕು.

**ಸಂದರ್ಶಕ**: ಕೊನೆಯದಾಗಿ, ಇಂದಿನ ಯುವ ಪೀಳಿಗೆಗೆ ನಿಮ್ಮ ಸಂದೇಶವೇನು?

**ಮಾಧವ ಗಾಡ್ಗೀಳ್:** ಪಶ್ಚಿಮ ಘಟ್ಟಗಳು ಕೇವಲ ಬೆಟ್ಟಗಳಲ್ಲ, ಅವು ದಕ್ಷಿಣ ಭಾರತದ 'ಜಲ ಗೋಪುರಗಳು'. ಇವು ಉಳಿದರೆ ಮಾತ್ರ ನಮಗೆ ಕುಡಿಯಲು ನೀರು ಸಿಗುತ್ತದೆ. ವಿಜ್ಞಾನವನ್ನು ಓದಿ, ಪ್ರಕೃತಿಯನ್ನು ಗಮನಿಸಿ ಮತ್ತು ಪ್ರಶ್ನಿಸುವುದನ್ನು ಕಲಿಯಿರಿ. ಪ್ರಕೃತಿಯ ಜೊತೆ ಬದುಕುವುದನ್ನು ಕಲಿಯದಿದ್ದರೆ, ಪ್ರಕೃತಿಯೇ ನಮ್ಮನ್ನು ಹೊರಹಾಕುತ್ತದೆ. ಹೊಸಕಿ ಹಾಕುತ್ತದೆ.

**ಸಂದರ್ಶಕ:** ಧನ್ಯವಾದಗಳು ಗಾಡ್ಗೀಳ್ ಅವರೇ, ನಿಮ್ಮ ಮಾರ್ಗದರ್ಶಿ ಮಾತುಗಳು ನಮ್ಮ ಕಣ್ಣು ತೆರೆಸುವಂತಿವೆ.

**ಮಾಧವ ಗಾಡ್ಗೀಳ್:** ಧನ್ಯವಾದ.

# ಹೋರಾಟ ಜನರದ್ದು, ರಾಜಕೀಯ ಬೇಡ

**ಬೇ**ಡ್ತಿ-ವರದಾ ಹಾಗೂ ಅಘನಾಶಿನಿ-ವೇದಾವತಿ ನದಿ ಜೋಡಣೆ ಯೋಜನೆಗಳ ವಿರುದ್ಧ ನಡೆದ ಬೃಹತ್ ಜನಸಮಾವೇಶ ಜಿಲ್ಲೆ ಕಂಡ ಅಪರೂಪದ ಘಟನೆ. ಇಂತಹ ಜನಬೆಂಬಲ ಹಿಂದೆ ನೋಡಿರದಷ್ಟು ಭಾರೀದಾಗಿತ್ತು. ಇಪ್ಪತ್ತು ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸಿದ್ದು, ಒಂದು ಹೋರಾಟಕ್ಕೆ ಸಿಕ್ಕ ಮಹತ್ವದ ಬಲವೆಂದರೆ ತಪ್ಪಾಗದು. ನಿಜಕ್ಕೂ 'ನಭೂತೋ ನ ಭವಿಷ್ಯತಿ' ಅನ್ನಿಸುವಂತ ಜನಸಾಗರವೇ ಅದು.

ಸ್ವರ್ಣವಲ್ಲೀ ಶ್ರೀಗಳ ನೇತೃತ್ವದಲ್ಲಿ ನಡೆದ ಈ ಹೋರಾಟ ಪಕ್ಷ, ಜಾತಿ, ವಯಸ್ಸು, ಅಂತಸ್ಸು ಎಲ್ಲವನ್ನೂ ಮರೆತು ನಮ್ಮ ನೆಲ-ಜಲ ರಕ್ಷಣೆಗೆ ಜನ ಒಂದಾಗಿ ನಿಂತ ದೃಶ್ಯ ಇಂದಿಗೂ ಕಣ್ಣ ಮುಂದೆ ನಿಲ್ಲುತ್ತದೆ. ಶಿರಸಿ-ಸಿದ್ದಾಪುರ-ಯಲ್ಲಾಪುರ ಮಟ್ಟಿಗೆ ನಮ್ಮ ವಯೋಮಾನದವರು ಹಿಂದೆ ಕಂಡಿರದ ಸಮಾವೇಶ ಇದು. ಇಂತಹ ಒಗ್ಗಟ್ಟನ್ನು ಸೃಷ್ಟಿಸುವುದು ಸುಲಭವಲ್ಲ; ಜನರೊಳಗಿನ ಆತಂಕ ಮತ್ತು ಪ್ರೀತಿಯೇ ಇದಕ್ಕೆ ಕಾರಣ.

ಜನಮುಡಿ
ನಮ್ಮ ವಿಳಾಸ
ತತ್ತ್ವನಿಷ್ಠ ದಿನ ಪತ್ರಿಕೆ
ಹೋಟೆಲ್ ಮಧುವನ ಹಿಂಭಾಗ, ಯಲ್ಲಾಪುರ ರಸ್ತೆ,
ಶಿರಸಿ-581 401, ದೂರವಾಣಿ: 9481559555
email: tatvanishtadaily@gmail.com

ಆದರೆ, ಈ ಹೋರಾಟದ ಮುನ್ನ ಎರಡು ದಿನ ಹಾಗೂ ನಂತರ ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಗೊಂದಲ ಮೂಡಿಸಲು ಯತ್ನಿಸಿದದ್ದು ವಿಷಾದಕರ. "ಈ ಯೋಜನೆ ಆಗಲ್ಲ, ಸ್ವಾಮೀಜಿಗಳು ಬಿಡಲ್ಲ, ಪರಿಸರವಾದಿಗಳು ರಾಜಕೀಯ ಪಕ್ಷಗಳ ಲಾಭಕ್ಕಾಗಿ ಗೊಂದಲ ಮಾಡ್ತಿದ್ದಾರೆ" ಎಂಬ ಮಾತುಗಳು ನಗೆಯಾಸ್ಪದ. ಸ್ವಾಮೀಜಿಗಳೇ ಕರೆ ನೀಡಿದ ಹೋರಾಟದ ಬಗ್ಗೆ ಇಂತಹ ಮಾತುಗಳು ಎಷ್ಟು ಅಸಂಬದ್ಧವೋ ಜನರಿಗೆ ಚೆನ್ನಾಗಿ ತಿಳಿದಿದೆ.

ಇನ್ನೊಬ್ಬರು ಇದನ್ನು ಜಾತಿಯ ಗಾಜಿನಿಂದ ನೋಡಿ, "ಒಂದೇ ಜಾತಿಯವರ ಹೋರಾಟ" ಎಂದು ಒಡಕು ಮೂಡಿಸಲು ಯತ್ನಿಸಿದರು. ಆದರೆ ಆಯೋಜನೆ, ಸಹಕಾರ, ಕರಪತ್ರ ಎಲ್ಲೆಡೆ ಎಲ್ಲಾ ಸಮುದಾಯದವರು ಇದ್ದರು. ಎಲ್ಲಾ ಪಕ್ಷದವರೂ ಸಹಕಾರ ನೀಡಿದ್ದರು. ಜನರೂ ಪಕ್ಷ ನೋಡದೆ, ಕರೆಗೆ ಓಗಿ ಬಂದಿದ್ದರು. ಇದು ಸತ್ಯ.

ಅಂತಹ ವೇದಿಕೆಯಲ್ಲಿ ಪಕ್ಷಾತೀತವಾಗಿ ಶಾಸಕರು, ಸಂಸದರು ಬೆಂಬಲ ವ್ಯಕ್ತಪಡಿಸಿದಾಗ, ಒಬ್ಬ ಉಸ್ತುವಾರಿ ಸಚಿವ ಮಾತ್ರ ತಮ್ಮ ಮಾತುಗಳಿಂದಲೇ ತಮ್ಮ ನಿಲುವು ಬಹಿರಂಗಪಡಿಸಿಕೊಂಡರು. ಮುಖ್ಯಮಂತ್ರಿಗಳಿಗೆ ಡಿಪಿಆರ್‌ಗೆ ಒಪ್ಪಿಗೆ ಕೊಡದಂತೆ ಮನವಿ ಸಲ್ಲಿಸಿದ ಸಂದರ್ಭದಲ್ಲೂ ಜಿಲ್ಲೆಯ ಹಲವು ನಾಯಕರು ಇದ್ದರು; ಆದರೆ ಅವರು ಗೈರಾಗಿದ್ದರು ಎಂಬುದು ಜನರ ಗಮನ ತಪ್ಪಿಲ್ಲ.

ರಾಜಕೀಯ ನಾಯಕರನ್ನು ನಂಬಿಕೊಂಡರೆ ಮಾತ್ರ ಹೋರಾಟ ಗೆಲ್ಲುವುದಿಲ್ಲ ಎಂಬ ಪಾಠವನ್ನು ಈ ಸಮಾವೇಶ ಮತ್ತೊಮ್ಮೆ ಕಲಿಸಿದೆ. ಜನರಿಗಾಗಿ ರಾಜಕೀಯ ಮಾಡಿ. ರಾಜಕೀಯಕ್ಕಾಗಿ ಜನರನ್ನು ಬಳಸಿಕೊಳ್ಳಬೇಡಿ. ಈ ಹೋರಾಟ ಇಲ್ಲಿಗೆ ನಿಲ್ಲಬಾರದು; ಇದು ಇನ್ನಷ್ಟು ಬಲಗೊಳ್ಳಬೇಕು. ಏಕೆಂದರೆ ಇದು ಪಕ್ಷದ ಹೋರಾಟವಲ್ಲ, ನಮ್ಮ ನೆಲ-ನೀರಿನ, ನಮ್ಮ ಭವಿಷ್ಯದ ಹೋರಾಟ.

■ **ಸಂತೋಷ್ ಹೆಗಡೆ**

# ದೇಹಕ್ಕೆ ನಾರಿನ ಶಕ್ತಿ ತುಂಬುವ ಬಸಳೆ ಸೊಪ್ಪು





ಹಳ್ಳಿ-ಹಳ್ಳಿಗಳ ಮನೆ ಹಿತ್ತಿಲಲ್ಲಿ ಸಹಜವಾಗಿ ಬೆಳೆದು ನಿಂತಿರುವ ಬಸಳೆ ಸೊಪ್ಪು, ಆರೋಗ್ಯದ ದೃಷ್ಟಿಯಿಂದ ಅತ್ಯಂತ ಮಹತ್ವದ ಸೊಪ್ಪುಗಳಲ್ಲಿ ಒಂದಾಗಿದೆ. ದೇಹಕ್ಕೆ ಅಗತ್ಯವಿರುವ ನಾರಿನಾಂಶವನ್ನು ಸಮೃದ್ಧವಾಗಿ ಪೂರೈಸುವ ಈ ಸೊಪ್ಪು, ಜೀರ್ಣಕ್ರಿಯೆಯಿಂದ ಹಿಡಿದು ಮೂಳೆಗಳ ಆರೋಗ್ಯವರೆಗೆ ಹಲವು ರೀತಿಯಲ್ಲಿ ದೇಹಕ್ಕೆ ಲಾಭಕಾರಿಯಾಗಿದೆ.

ಬಸಳೆ ಸೊಪ್ಪು ಕೇವಲ ರುಚಿಕರವಾದ ಸಸ್ಯಹಾರವಲ್ಲ; ಇದರಲ್ಲಿ ಕಬ್ಬಿಣ, ಕ್ಯಾಲ್ಸಿಯಂ, ಪ್ರೋಟೀನ್, ವಿಟಮಿನ್ ಎ, ಸಿ ಮತ್ತು ಕೆ ಸೇರಿದಂತೆ ಹಲವಾರು ಪೋಷಕಾಂಶಗಳು ಅಡಕವಾಗಿವೆ. ವಿಶೇಷವಾಗಿ 100 ಗ್ರಾಂ ಬಸಳೆ ಸೊಪ್ಪಿನಲ್ಲಿ ಸುಮಾರು 8,000 ಘಟಕಗಳಷ್ಟು ವಿಟಮಿನ್ ಎ ಇರುವುದರಿಂದ ಇದು ಕಣ್ಣುಗಳ ಆರೋಗ್ಯ ಹಾಗೂ ರೋಗನಿರೋಧಕ ಶಕ್ತಿಗೆ ಸಹಕಾರಿಯಾಗುತ್ತದೆ. ಬೀಟಾ ಕ್ಯಾರೋಟಿನ್ ಮತ್ತು ಲುಟೀನ್‌ನಂತಹ ಆಂಟಿ ಆಕ್ಸಿಡೆಂಟ್‌ಗಳು ದೇಹದ ಜೀವಕೋಶಗಳನ್ನು ವಯಸ್ಸಿನ ಪರಿಣಾಮಗಳಿಂದ ರಕ್ಷಿಸುತ್ತವೆ.

ಅಧಿಕ ನಾರಿನಾಂಶ ಇರುವುದರಿಂದ ಆಹಾರ ಸರಿಯಾಗಿ ಜೀರ್ಣವಾಗಲು ಬಸಳೆ ಸೊಪ್ಪು ಸಹಾಯ ಮಾಡುತ್ತದೆ. ಮಲಬದ್ಧತೆ ಸಮಸ್ಯೆಗೆ ಇದು ನೈಸರ್ಗಿಕ ಪರಿಹಾರವಾಗಿದ್ದು, ಪಿತ್ತದ ತೊಂದರೆಗಳನ್ನು ತಗ್ಗಿಸುವ ಗುಣವೂ ಇದಕ್ಕಿದೆ. ಕಡಿಮೆ ಕ್ಯಾಲೋರಿ ಹೊಂದಿರುವುದರಿಂದ ತೂಕ ನಿಯಂತ್ರಣಕ್ಕೂ ಇದು ಉಪಯುಕ್ತ.

ಮೂಳೆಗಳ ಆರೋಗ್ಯದ ದೃಷ್ಟಿಯಿಂದಲೂ ಬಸಳೆ ಸೊಪ್ಪು ಅತ್ಯಂತ ಮಹತ್ವದ್ದಾಗಿದೆ. ಇದರಲ್ಲಿ ಇರುವ ವಿಟಮಿನ್ ಕೆ ಮತ್ತು ಕ್ಯಾಲ್ಸಿಯಂ ದೇಹದಲ್ಲಿ ಕ್ಯಾಲ್ಸಿಯಂ ಹೀರಿಕೊಳ್ಳುವಿಕೆಯನ್ನು ಸುಧಾರಿಸಿ, ಮೂಳೆಗಳು ಮತ್ತು ಹಲ್ಲುಗಳನ್ನು ಬಲಪಡಿಸುತ್ತವೆ. ವಾರಕ್ಕೆ ಎರಡು-ಮೂರು ಬಾರಿ ಬಸಳೆ ಸೊಪ್ಪು ಸೇವಿಸುವುದು ಮೂಳೆಗಳ ವೃದ್ಧಿಗೆ ಸಹಕಾರಿ.

ಚರ್ಮದ ಕಾಂತಿ ಹೆಚ್ಚಿಸಲು ಬಸಳೆ ಸೊಪ್ಪು ಉತ್ತಮ ಆಹಾರ. ವಿಟಮಿನ್ ಎ, ಸಿ ಮತ್ತು ಕೆಗಳ ಸಮೃದ್ಧಿಯಿಂದ ಚರ್ಮ ಆರೋಗ್ಯಕರವಾಗಿದ್ದು, ನೈಸರ್ಗಿಕ ಹೊಳಪನ್ನು ಪಡೆಯಲು ನೆರವಾಗುತ್ತದೆ. ಹೃದಯದ ಆರೋಗ್ಯಕ್ಕೂ ಇದರಲ್ಲಿ ಇರುವ ಪೊಟ್ಯಾಶಿಯಂ ಮತ್ತು ಮೆಗ್ನೀಷಿಯಂ ರಕ್ತದೊತ್ತಡವನ್ನು ಸಮತೋಲನದಲ್ಲಿಡಲು ಸಹಕಾರಿಯಾಗುತ್ತದೆ.

ಗರ್ಭಿಣಿಯರಿಗೆ ಅಗತ್ಯವಿರುವ ಫೋಲೇಟ್ ಅಂಶ ಬಸಳೆ ಸೊಪ್ಪಿನಲ್ಲಿ ಇರುವುದರಿಂದ ಇದು ಉಪಯುಕ್ತವಾದರೂ, ಅತಿಯಾಗಿ ಸೇವಿಸದೇ ಮಧ್ಯಮ ಪ್ರಮಾಣದಲ್ಲೇ ತೆಗೆದುಕೊಳ್ಳುವುದು ಸೂಕ್ತ. ನೀರಿನ ಅಂಶ ಹೆಚ್ಚು ಇರುವ ಕಾರಣ ಕೆಲವರಿಗೆ ಗ್ಯಾಸು ಅಥವಾ ಹೊಟ್ಟೆ ಉಬ್ಬರ ಉಂಟಾಗುವ ಸಾಧ್ಯತೆಯೂ ಇದೆ ಎಂಬುದನ್ನು ಗಮನದಲ್ಲಿಡಬೇಕು.

ಒಟ್ಟಾರೆ, ನಾರಿನಾಂಶ, ಖನಿಜಗಳು ಮತ್ತು ವಿಟಮಿನ್‌ಗಳಿಂದ ಸಮೃದ್ಧವಾದ ಬಸಳೆ ಸೊಪ್ಪು ನಮ್ಮ ದಿನನಿತ್ಯದ ಆಹಾರದಲ್ಲಿರಬೇಕಾದ ಸಹಜ ಔಷಧಿ ಎನ್ನಬಹುದು. ಸರಿಯಾದ ಪ್ರಮಾಣದಲ್ಲಿ ಸೇವಿಸಿದರೆ ಆರೋಗ್ಯಯುತ ದೇಹ ನಿರ್ಮಾಣಕ್ಕೆ ಇದು ಮಹತ್ವದ ಪಾತ್ರ ವಹಿಸುತ್ತದೆ.

■ **ಪೂಜಾ ಸಂತೋಷ್ ಶೆಟ್ಟಿ , ಹೊಸನಗರ (ಬೆಂಗಳೂರು)**

# ಸಂಗೀತ, ಭಜನೆ, ನೃತ್ಯ, ತಾಳಮದ್ದಲೆ ಕಾರ್ಯಕ್ರಮ ಸಂಪನ್ನ



**● ತತ್ವನಿಷ್ಠ, ಶಿರಸಿ:** ವಾನಳ್ಳಿ ಸಮೀಪದ ತೋಟಿಮನೆ ತಟ್ಟೀಹಕ್ಲಿನ ನರಸಿಂಹ ಭಟ್ಟ ಮತ್ತು ಸತ್ಯನಾರಾಯಣ ಭಟ್ಟ ಅವರ ಮನೆಯಲ್ಲಿ ಸಂಗೀತ, ಭಜನೆ, ನೃತ್ಯ ಹಾಗೂ ತಾಳಮದ್ದಲೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಸಂಗೀತ ಗುರುಗಳಾದ ಸುಮಾ ಹೆಗಡೆ ವಾನಳ್ಳಿ ಅವರಿಗೆ ಶಿಷ್ಯೆಯರಾದ ಸೌಮ್ಯ ಮತ್ತು ಸುಮಾ ಗುರುವಂದನೆ ಕಾರ್ಯಕ್ರಮ ನಡೆಸಿಕೊಟ್ಟು, ಭಕ್ತಿಗೀತೆ ಹಾಡಿದರು. ಇವರಿಗೆ ಗಾಯಕ ನಾರಾಯಣ ಹೆಗಡೆ ಅಸ್ತಾಳ ತಬಲಾ ಸಾಥ್ ನೀಡಿದರು.

ಸುಮಾ ಹೆಗಡೆ ವಾನಳ್ಳಿ ರಾಗ ಮಾರುಬಿಹಾಗ್ ಪ್ರಸ್ತುತ ಪಡಿಸಿ, ರಾಗ ದುರ್ಗಾ, ಮಾಲಕಂಸ ಹಾಗೂ ಭೈರವಿಗಳಲ್ಲಿ ಸುಂದರವಾದ ಗಾಯನವನ್ನು ಪ್ರಸ್ತುತಪಡಿಸಿ ಜನ ಮೆಚ್ಚುಗೆಗೆ ಪಾತ್ರರಾದರು. ಇವರಿಗೆ ಶಂಕರ ಹೆಗಡೆ ಹಿರೇಮಕ್ಕಿ ತಬಲಾ, ಅಂಜನಾ ಹೆಗಡೆ ಹಾರ್ಮೋನಿಯಂ ಸಾಥ್ ನೀಡಿದರು. ನವೀನಾ ಭಟ್ಟ ತುಳಗೆರೆ ಸಂಗಡಿಗರಿಂದ ಭಜನಾ ಕಾರ್ಯಕ್ರಮ ಹಾಗೂ ಪ್ರತಿಭಾನ್ಮವಿತ ಮಕ್ಕಳಿಂದ ಭಾರತ ನಾಟ್ಯ ನೃತ್ಯ ಪ್ರದರ್ಶನ ಏರ್ಪಟ್ಟಿತ್ತು.

ನಂತರ ಅತಿಥಿ ಕಲಾವಿದರ ಕೂಡುವಿಕೆಯಿಂದ ತಾಳಮದ್ದಲೆ "ಸುಧನ್ವ ಮೋಕ್ಷ" ಜರುಗಿತು. ಹಿಮ್ಮೇಳದಲ್ಲಿ ಭಾಗವತರಾಗಿ ಗಜಾನನ ಭಟ್ಟ ತುಳಗೆರೆ, ಮದ್ದಲೆ ವಾದಕರಾಗಿ ಶಂಕರ ಭಾಗವತ ಯಲ್ಲಾಪುರ, ಚಂಡೆಯಲ್ಲಿ ಪ್ರಶಾಂತ್ ಕೈಗಾಡಿ ಭಾಗವಹಿಸಿ ಉತ್ತಮ ಹಿಮ್ಮೇಳ ನೀಡುವುದರೊಂದಿಗೆ ರಂಜಿಸಿದರು.

ಮುಮ್ಮೇಳದಲ್ಲಿ ಸುಧನ್ವನಾಗಿ ಆರ್.ಟಿ. ಭಟ್ಟ ಕಬ್ಗಾಲ, ಅರ್ಜುನನಾಗಿ ಲಕ್ಷ್ಮಿನಾರಾಯಣ ಹೆಗಡೆ ಶಿರಗಣಿ, ಕೃಷ್ಣನಾಗಿ ಪ್ರವೀಣ ಹೆಗಡೆ ವಾನಳ್ಳಿ, ಪ್ರಭಾವತಿಯಾಗಿ ಅರುಣ್ ಕುಮಾರ್ ಜಡ್ಡಿಗದ್ದೆ ಭಾಗವಹಿಸಿ ಸಮರ್ಥ ಅರ್ಥದಾರಿಕೆಯೊಂದಿಗೆ ಆಖ್ಯಾನವನ್ನು ಯಶಸ್ವಿಗೊಳಿಸಿದರು. ಮನೆಯ ಯಜಮಾನರಾದ ನರಸಿಂಹ ಭಟ್ಟ ಮತ್ತು ಸತ್ಯನಾರಾಯಣ ಭಟ್ಟ ಕಲಾವಿದರನ್ನು ಗೌರವಿಸಿದರು. ಡಯಟ್ ಶಿರಸಿಯ ನಿವೃತ್ತ ಪ್ರಾಚಾರ್ಯ ಎಮ್.ಎಸ್. ಹೆಗಡೆ ಉಪಸ್ಥಿತರಿದ್ದರು. ಲಕ್ಷ್ಮಿ ವಿನಾಯಕ ಭಟ್ಟ ನಿರೂಪಿಸಿದರು.

## ಗಿರಗಡ್ಡೆಯಲ್ಲಿ ಶವ ಪತ್ತೆ; ಸಾವಿನ ಬಗ್ಗೆ ಶಂಕೆ

**● ತತ್ವನಿಷ್ಠ, ಸಿದ್ದಾಪುರ:** ತಾಲೂಕಿನ ಗಿರಗಡ್ಡೆಯಲ್ಲಿ ಶಿರಸಿ ಮೂಲದ ವ್ಯಕ್ತಿಯೋರ್ವರು ಅನುಮಾನಾಸ್ಪದವಾಗಿ ಮೃತಪಟ್ಟ ಸ್ಥಿತಿಯಲ್ಲಿ ಪತ್ತೆಯಾದ ಘಟನೆ ಬುಧವಾರ ನಡೆದಿದೆ. ಮೃತಪಟ್ಟವರನ್ನು ಶಿರಸಿ ತಾಲೂಕಿನ ಅಜ್ಜೀಬಳದ ನೆಲ್ಲಮಡಕಿ ನಿವಾಸಿ ಮಹೇಶ ವೆಂಕಟರಮಣ ನಾಯ್ಕ (40) ಎಂದು ಗುರುತಿಸಲಾಗಿದೆ. ಮೃತ ಮಹೇಶ ಅವರು ಕೂಲಿ ಕೆಲಸ ಮಾಡಿಕೊಂಡಿದ್ದು, ಶಿರಸಿ ತಾಲೂಕಿನ ಹಳ್ಳಿಕಾನ ಊರಿನಲ್ಲಿ ನಡೆಯುತ್ತಿದ್ದ ಸಂಕ್ರಾಂತಿ ಹಬ್ಬದ ಪ್ರಯುಕ್ತ ಶ್ರೀ ಭೂತೇಶ್ವರ ದೇವರ ವಾರ್ಷಿಕೋತ್ಸವದ ತಯಾರಿಯನ್ನು ಮುಗಿಸಿಕೊಂಡು ತಮ್ಮ ಬೈಕ್‌ನಲ್ಲಿ ಮನೆಗೆ ತೆರಳುತ್ತಿದ್ದರು. ಗಿರಗಡ್ಡೆ ಭೂತೇಶ್ವರ ದೇವಸ್ಥಾನದ ರಸ್ತೆಯ ಮೇಲೆ ಇವರ ಚಪ್ಪಲಿ ಹಾಗೂ ಬೈಕ್ ಬಿದ್ದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಅಲ್ಲಿಂದ ಸ್ವಲ್ಪ ದೂರದಲ್ಲಿರುವ ಗಿರಗಡ್ಡೆ ಊರಿನ ವಾದಿರಾಜ ಶೇಟ್ ಎನ್ನುವವರಿಗೆ ಸೇರಿದ ಗದ್ದೆಯಲ್ಲಿ, ಎರಡು ವಿದ್ಯುತ್ ಕಂಬಗಳ ನಡುವೆ ಇರುವ ಕಬ್ಬಿಣದ ಆಂಗಲ್ ಪಟ್ಟಿಗೆ ನೈಲಾನ್ ದಾರದಿಂದ ಕುತ್ತಿಗೆಗೆ ನೇಣು ಬಿಗಿದುಕೊಂಡ ಸ್ಥಿತಿಯಲ್ಲಿ ಮಹೇಶ ಅವರ ಮೃತದೇಹ ಪತ್ತೆಯಾಗಿದೆ. ಮೃತ ಮಹೇಶ ಅವರು ಸುಮಾರು 3 ವರ್ಷಗಳ ಹಿಂದೆ ಕಬಡ್ಡಿ ಆಡುವಾಗ ಕಾಲಿಗೆ ಪೆಟ್ಟಾಗಿದ್ದು, ಶಸ್ತ್ರಚಿಕಿತ್ಸೆಗೊಳಗಾಗಿದ್ದರು. ಅಲ್ಲದೆ ತಂದೆ-ತಾಯಿ ಮೃತಪಟ್ಟಿದ್ದರಿಂದ ಮಾನಸಿಕವಾಗಿ ನೊಂದಿದ್ದರು ಎಂದು ಹೇಳಲಾಗಿದೆ. ಆದರೆ ಇದೀಗ ಇವರ ಸಾವು ಸಂಶಯಾಸ್ಪದವಾಗಿದ್ದು, ಸಾವಿನ ನೈಜ ಕಾರಣ ಪತ್ತೆ ಹಚ್ಚುವಂತೆ ಮೃತರ ದೊಡ್ಡಪ್ಪನ ಮಗ ಪ್ರವೀಣ ಸುಬ್ರಾಯ ನಾಯ್ಕ ಅವರು ದೂರಿನಲ್ಲಿ ಕೋರಿದ್ದಾರೆ. ಈ ಕುರಿತು ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಆಯ್ಕೆ ಪಟ್ಟಿ ಪ್ರಕಟ

**● ತತ್ವನಿಷ್ಠ, ಕಾರವಾರ:** ಉತ್ತರ ಕನ್ನಡ ಜಿಲ್ಲಾ ಕಂದಾಯ ಘಟಕದಲ್ಲಿ 2021-2022 ನೇ ಸಾಲಿನ ಖಾಲಿ ಇರುವ ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಗಳ ಭರ್ತಿ ಮಾಡುವ 3 ನೇ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಜಿಲ್ಲಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಜಾಲತಾಣ http://uttarakannada.nic.in ಮೂಲಕ ಅಥವಾ ಕಚೇರಿ ದೂರವಾಣಿ ಸಂಖ್ಯೆ: 08382-229857/222072 ಗೆ ಸಂಪರ್ಕಿಸಲು ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ತಿಳಿಸಿದ್ದಾರೆ.

## ವೇಮನ ಜಯಂತಿ

**● ತತ್ವನಿಷ್ಠ, ಕಾರವಾರ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಜ. 19ರಂದು ಬೆಳಗ್ಗೆ 10 ಗಂಟೆಗೆ ಮಹಾಯೋಗಿ ವೇಮನ ಜಯಂತಿಯನ್ನು ಕಾರವಾರದ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ.

## ಸದಸ್ಯರ ಪ್ರವಾಸ

**● ತತ್ವನಿಷ್ಠ, ಕಾರವಾರ:** ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ತಿಪ್ಪೇಸ್ವಾಮಿ ಕೆ.ಟಿ. ಜ. 22 ಮತ್ತು 23 ರಂದು ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದು ಅಂದು ಬೆಳಗ್ಗೆ 10.30 ಗಂಟೆಗೆ ಆಯೋಗದ ವತಿಯಿಂದ ಉತ್ತರ ಕನ್ನಡ ಜಿಲ್ಲೆಯ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಿಗೆ ಮಕ್ಕಳ ಹಕ್ಕುಗಳು ಹಾಗೂ ಕಾನೂನುಗಳ ಕುರಿತು ಏರ್ಪಡಿಸಿರುವ ತರಬೇತಿಯಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಕಾರಾಗೃಹ, ಐಟಿಐ, ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಮಕ್ಕಳ ರಕ್ಷಣಾ ನೀತಿ-2016 ರ ಅನುಷ್ಠಾನದ ಪರಿಶೀಲನಾ ಭೇಟಿ ಕೈಗೊಳ್ಳಲಿದ್ದಾರೆ. ಜ.23 ರಂದು ಆಯೋಗದ ವತಿಯಿಂದ ಉತ್ತರ ಕನ್ನಡ ಜಿಲ್ಲೆಯ ಮಕ್ಕಳ ಪಾಲನಾ ಕೇಂದ್ರದ ಸಿಬ್ಬಂದಿಗಳಿಗೆ ಏರ್ಪಡಿಸಿರುವ ತರಬೇತಿಯಲ್ಲಿ ಭಾಗವಹಿಸಲಿದ್ದಾರೆ ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಜ್ಯ ಮಟ್ಟದ ಪ್ರಶಸ್ತಿ

**● ತತ್ವನಿಷ್ಠ, ಕಾರವಾರ:** ರಾಷ್ಟ್ರೀಯ ಮತದಾನ ದಿನಾಚರಣೆ-2026 ರ ಕಾರ್ಯಕ್ರಮದ ಅಂಗವಾಗಿ ನಡೆಸಿದ ರಾಜ್ಯ ಮಟ್ಟದ ಕನ್ನಡ ಪ್ರಬಂಧ ಸ್ಪರ್ಧೆಯ ಪದವಿ ವಿಭಾಗದಲ್ಲಿ, ಕುಮಟಾದ ಡಾ. ಎ.ವಿ ಬಳಿಗಾ ಕಲಾ ಮತ್ತು ವಿಜ್ಞಾನ ಕಾಲೇಜಿನ ಸುಮೇಧಾ ಗಾಂವಕರ ಪ್ರಥಮ ಸ್ಥಾನ ಮತ್ತು ಪಿ.ಯು.ಸಿ ವಿಭಾಗದಲ್ಲಿ ಯಲ್ಲಾಪುರದ ವೈ.ಟಿ.ಎಸ್.ಎಸ್ ಕಾಲೇಜಿನ ಪೂರ್ವಿ ಹೆಗಡೆ ದ್ವಿತೀಯ ಸ್ಥಾನ ಪಡೆದಿದ್ದಾರೆ. ಜ. 25 ರಂದು ಬೆಂಗಳೂರಿನ ಸರ್. ಪುಟ್ಟಣ್ಣಚೆಟ್ಟಿ ಪುರಭವನ (ಟೌನ್ ಹಾಲ್) ನಲ್ಲಿ ನಡೆಯುವ ರಾಜ್ಯ ಮಟ್ಟದ ರಾಷ್ಟ್ರೀಯ ಮತದಾನ ದಿನಾಚರಣೆ ಕಾರ್ಯಕ್ರಮದಲ್ಲಿ ರಾಜ್ಯಪಾಲರು ಪ್ರಶಸ್ತಿಯನ್ನು ವಿತರಿಸಲಿದ್ದಾರೆ ಎಂದು ಜಂಟಿ ಮುಖ್ಯ ಚುನಾವಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಾಂದರ್ಭಿಕ ಮಹಜರ್ ವರದಿ ದಾಖಲೆಯಾಗಿ ಪರಿಗಣನೆಗೆ ನಿರ್ಧಾರ

**● ತತ್ವನಿಷ್ಠ, ಕಾರವಾರ:** ಅರಣ್ಯ ಹಕ್ಕು ಕಾಯಿದೆ ಅಡಿಯಲ್ಲಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ದಾಖಲಾತಿ ಅಲಭ್ಯತೆ ಕಾರಣಕ್ಕೆ ತಿರಸ್ಕರಿಸಿರುವ ಪ್ರಕರಣಗಳಲ್ಲಿ, ಮುಂದಿನ 45 ದಿನಗಳೊಳಗೆ ಸ್ಥಳ ಮಹಜರ್ ನಡೆಸಿ, ಆ ಮಹಜರ್ ವರದಿಯನ್ನು ದಾಖಲೆಗಳಾಗಿ ಪರಿಗಣಿಸಲು ರಾಜ್ಯ ಸರ್ಕಾರ ಮಹತ್ವದ ತೀರ್ಮಾನ ಕೈಗೊಂಡಿದೆ ಎಂದು ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಅವರ ಅಧ್ಯಕ್ಷತೆಯಲ್ಲಿ ಜ.6ರಂದು ವಿಧಾನಸೌಧದಲ್ಲಿ ನಡೆದ ಅರಣ್ಯ ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಹಕ್ಕುಗಳ ಕಾಯಿದೆ-2006 ಅಡಗಿನ ರಾಜ್ಯ ಮಟ್ಟದ ಉಸ್ತುವಾರಿ ಸಮಿತಿ ಸಭೆಯ ನಡವಳಿಕೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದರು.

ರಾಜ್ಯದಲ್ಲಿ ಅರಣ್ಯ ಹಕ್ಕು ಕಾಯಿದೆ ಅಡಿಯಲ್ಲಿ ಇದುವರೆಗೆ ಒಟ್ಟು 2,95,176 ಅರ್ಜಿಗಳು ಸ್ವೀಕೃತವಾಗಿದ್ದು, ಈ ಪೈಕಿ 16,700 ಹಕ್ಕುಪತ್ರಗಳು ವಿತರಿಸಲಾಗಿದೆ. ಆದರೆ 2,62,595 ಅರ್ಜಿಗಳು ತಿರಸ್ಕೃತಗೊಂಡಿವೆ. ಹೆಚ್ಚಿನ ಅರ್ಜಿಗಳು ದಾಖಲೆಗಳ ಕೊರತೆಯಿಂದ ತಿರಸ್ಕೃತವಾಗಿರುವ ಹಿನ್ನೆಲೆಯಲ್ಲಿ, ಸ್ಥಳ ಪರಿಶೀಲನೆ ನಡೆಸಿ ಸಾಗುವಳಿಯ ಕುರುಹುಗಳ ಆಧಾರದ ಮೇಲೆ ಮಹಜರ್ ವರದಿಯನ್ನು ದಾಖಲೆಗಳಾಗಿ ಪರಿಗಣಿಸುವಂತೆ ಸಮಿತಿ ಸೂಚನೆ ನೀಡಿದೆ ಎಂದು ರವೀಂದ್ರ ನಾಯ್ಕ ಹೇಳಿದರು.

ಮೂರು ತಲೆಮಾರಿನ ನಿರ್ದಿಷ್ಟ ದಾಖಲೆಗಳಿಲ್ಲದ ಪ್ರಕರಣಗಳಲ್ಲಿ ಅರಣ್ಯ, ಕಂದಾಯ, ಭೂದಾಖಲೆ ಹಾಗೂ ಕೃಷಿ ಚಟುವಟಿಕೆಗಳ ಸಂಬಂಧಿತ ಅಧಿಕಾರಿಗಳು ಜಂಟಿಯಾಗಿ ಸ್ಥಳ ಮಹಜರ್ ನಡೆಸಬೇಕು. ಅರಣ್ಯ ಹಕ್ಕು ಕಾಯಿದೆಯಲ್ಲಿ ಉಲ್ಲೇಖಿಸಿರುವ 13 ದಾಖಲೆಗಳ ಕಟ್ಟುನಿಟ್ಟಾದ ಅವಶ್ಯಕತೆ ಇಲ್ಲದೆ, ಸ್ಥಳ ಪರಿಶೀಲನೆಯ ಮಹಜರ್ ವರದಿಯನ್ನೇ ದಾಖಲೆಗಳಾಗಿ ಪರಿಗಣಿಸುವುದು ಈ ತೀರ್ಮಾನದ ಪ್ರಮುಖ ಅಂಶವಾಗಿದೆ ಎಂದು ಅವರು ತಿಳಿಸಿದರು.

ಗ್ರಾಮ ಮಟ್ಟದ ಅರಣ್ಯ ಹಕ್ಕು ಸಮಿತಿಗಳಲ್ಲಿ ಬಾಕಿ ಇದ್ದ ಅರ್ಜಿಗಳ ವಿಲೇವಾರಿ ನಡೆದಿದ್ದು, ತಾಲೂಕು ಮತ್ತು ಜಿಲ್ಲಾ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳಿಲ್ಲದ ಕಾರಣ ಉಪವಿಭಾಗ ಹಾಗೂ ಜಿಲ್ಲಾ ಮಟ್ಟದ ಸಮಿತಿಗಳಲ್ಲಿ ಅರ್ಜಿಗಳ ವಿಲೇವಾರಿ ಬಾಕಿ ಉಳಿದಿದೆ ಎಂಬುದನ್ನು ಸಭೆಯ ನಡವಳಿಕೆಯಲ್ಲಿ ಉಲ್ಲೇಖಿಸಲಾಗಿದೆ. ಗ್ರಾಮ ಮಟ್ಟದ ಸಮಿತಿಗಳಿಂದ ತಿರಸ್ಕೃತಗೊಂಡ ಅರ್ಜಿಗಳನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಿ ಮಾಹಿತಿ ಸಂಗ್ರಹಿಸಲು ಸಹ ಸಭೆ ತೀರ್ಮಾನಿಸಿದೆ.

ಅರಣ್ಯ ಹಕ್ಕು ಕಾಯಿದೆ ಅಡಿಯಲ್ಲಿ ವಿತರಿಸಿರುವ ಹಕ್ಕುಪತ್ರಗಳ ವಿವರವನ್ನು ಪಹಣಿ ಕಲಂ 11ರಲ್ಲಿ ಒಂದು ವಾರದೊಳಗೆ ದೃಢೀಕರಿಸುವುದು, ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆಗೆ ಅನುಕೂಲವಾಗುವಂತೆ ಜಂಟಿ ಗುರುತಿನ ಚೀಟಿ ವಿತರಿಸುವುದು ಸೇರಿದಂತೆ ಒಟ್ಟು 9 ನಿರ್ಣಯಗಳನ್ನು ಸಭೆ ಕೈಗೊಂಡಿದೆ ಎಂದು ರವೀಂದ್ರ ನಾಯ್ಕ ತಿಳಿಸಿದ್ದಾರೆ.

ಅರಣ್ಯ ಹಕ್ಕು ಕಾಯಿದೆ ಅನುಷ್ಠಾನವನ್ನು ಸಮರ್ಪಕವಾಗಿ ಜಾರಿಗೊಳಿಸಲು ಸಂಬಂಧಿತ ಎಲ್ಲಾ ಇಲಾಖೆಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಿ ಅನುಪಾಲನಾ ವರದಿ ಸಲ್ಲಿಸುವಂತೆ ಸಭೆ ಸೂಚನೆ ನೀಡಿದೆ ಎಂದು ಅವರು ಹೇಳಿದರು.

ಇದೇ ವೇಳೆ, ಗ್ರಾಮ, ಉಪವಿಭಾಗ ಮತ್ತು ಜಿಲ್ಲಾ ಮಟ್ಟದ ಅರಣ್ಯ ಹಕ್ಕು ಸಮಿತಿಗಳಲ್ಲಿ ತಿರಸ್ಕೃತಗೊಂಡ ಅರ್ಜಿಗಳ ಸ್ಥಳ ಪರಿಶೀಲನೆ ಮತ್ತು ಮಹಜರ್ ನಡೆಸಲು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಆಡಳಿತ ಅಧಿಕಾರಿ, ವಲಯ ಅಥವಾ ಉಪವಲಯ ಅರಣ್ಯಾಧಿಕಾರಿ ಹಾಗೂ ಭೂಮಾಪಕರನ್ನೊಳಗೊಂಡ ಮಹಜರ್ ಪರಿಶೀಲನಾ ಸಮಿತಿ ರಚಿಸಲಾಗಿದೆ. ಇದರ ಮೇಲ್ವಿಚಾರಣೆಗೆ ಸಹಾಯಕ ಆಯುಕ್ತರ ಅಧ್ಯಕ್ಷತೆಯಲ್ಲಿ ಹಿರಿಯ ಮಹಜರ್ ಮತ್ತು ಪರಿಶೀಲನಾ ಉಸ್ತುವಾರಿ ಸಮಿತಿಯನ್ನೂ ರಚಿಸಿರುವುದಾಗಿ ಜಿಲ್ಲಾಡಳಿತ ಸುತ್ತೋಲೆ ಮೂಲಕ ಪ್ರಕಟಿಸಿದೆ ಎಂದು ರವೀಂದ್ರ ನಾಯ್ಕ ತಿಳಿಸಿದ್ದಾರೆ.

## ಚೆಕ್ ಬೌನ್ಸ್ ಪ್ರಕರಣ: ದಂಡ

**● ತತ್ವನಿಷ್ಠ, ಶಿರಸಿ:** ನಗರದ ಶ್ರೀ ಭೂತೇಶ್ವರ ಪತ್ತಿನ ಸಹಕಾರಿ ಸಂಘದಲ್ಲಿ ಸಾಲ ಪಡೆದು ಮರಳಿಸದ ವ್ಯಕ್ತಿಯ ವಿರುದ್ಧ ನ್ಯಾಯಾಲಯ ತೀರ್ಪು ನೀಡಿ ಆದೇಶ ಪ್ರಕಟಿಸಿದೆ.

ಸಂಘದಲ್ಲಿ ಕಮಲಾಕರ್ ನರಸಿಂಹ ಭಂಡಾರಿ ಎಂಬುವವರು 30.03.2019 ರಲ್ಲಿ 10 ಲಕ್ಷ ರೂ. ಪಡೆದುಕೊಂಡಿದ್ದರು. ಬಳಿಕ ಅದನ್ನು ಮರಳಿಸುವ ಕುರಿತು ದಿನಾಂಕ 19-6-2021 ರಂದು 1372691-00ಕ್ಕೆ ನಗದಾಗುವಂತೆ ಚೆಕ್ ನೀಡಿದ್ದ. ಚೆಕ್ ಬೌನ್ಸ್ ಆಗಿತ್ತು. ಈ ಹಿನ್ನೆಲೆಯಲ್ಲಿ ಸಂಘದ ಪರವಾಗಿ ಮುಖ್ಯ ಕಾರ್ಯನಿರ್ವಾಹಕ ವಿನಾಯಕ ಶೆಟ್ಟಿ ಶಿರಸಿ 1ನೇ ಹೆಚ್ಚುವರಿ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಚೆಕ್ ಬೌನ್ಸ್ ದಾವೆ ಹೂಡಿದ್ದರು. ಇದಕ್ಕೆ ಸಂಬಂಧಿಸಿ ವಾದ ಪ್ರತಿವಾದ ಆಲಿಸಿದ ಮಾನ್ಯ ನ್ಯಾಯಾಧೀಶರಾದ ಅಲ್ತಾಫ್ ಹುಸೇನಸಾಬ್ ಖನಗಾಂವಿ ಸಾಲ ಮರಳಿಸದ ಕಮಲಾಕರ್ ನರಸಿಂಹ ಭಂಡಾರಿ ಅವರು ಸಂಘಕ್ಕೆ ಪರಿಹಾರವಾಗಿ 17,00,000 ಹಣ ಪಾವತಿಸಬೇಕು.ಅದರಲ್ಲಿ 20,000 ರೂ. ಸರ್ಕಾರಕ್ಕೆ ದಂಡ ಪಾವತಿಸಲು ತಪ್ಪಿದಲ್ಲಿ 6 ತಿಂಗಳು ಸಾದಾ ಕಾರಾಗೃಹ ಶಿಕ್ಷೆ ಅನುಭವಿಸಬೇಕು ಎಂದು ತೀರ್ಪು ನೀಡಿ ಆದೇಶ ಹೊರಡಿಸಿದ್ದಾರೆ. ಸಂಘದ ಪರವಾಗಿ ಪ್ರಶಾಂತ ವಿ.ನಾಯ್ಕ ವಾದ ಮಂಡಿಸಿದರು.

## ವಿದ್ಯುತ್ ಗ್ರಾಹಕರ ಸಂವಾದ ಸಭೆ

**● ತತ್ವನಿಷ್ಠ, ಕಾರವಾರ:** ಕುಮಟಾ ಉಪ ವಿಭಾಗದ ವ್ಯಾಪ್ತಿಯಲ್ಲಿ ಜ. 17 ರಂದು ಬೆಳಗ್ಗೆ 10.30 ರಿಂದ ಮಧ್ಯಾಹ್ನ 1.30 ಗಂಟೆವರೆಗೆ ವಿದ್ಯುತ್ ಅದಾಲತ್ ಹಾಗೂ ಮಧ್ಯಾಹ್ನ 3.30 ರಿಂದ 5ರ ವರೆಗೆ ಗ್ರಾಹಕ ಸಂವಾದ ಸಭೆ ಕುಮಟಾ ಹೆಸ್ಕಾಂ ಉಪ-ವಿಭಾಗದ ಕಚೇರಿಯ ಆವರಣದಲ್ಲಿ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ 08386-(222034/224865/256177) ದೂರವಾಣಿಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದು ಎಂದು ಹೆಸ್ಕಾಂ ತಿಳಿಸಿದೆ.

ಕಾರವಾರ: ಕಾರವಾರ ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಕಚೇರಿಯಲ್ಲಿ ಜ.17 ರಂದು ಗ್ರಾಹಕರ ಸಂವಾದ ಸಭೆ ಮಧ್ಯಾಹ್ನ 3.30 ರಿಂದ ಸಂಜೆ 5.30 ಗಂಟೆಯವರೆಗೆ ನಡೆಯಲಿದೆ. ಗ್ರಾಹಕರು ತಮ್ಮ ವಿದ್ಯುತ್ ಸಂಬಂಧಿತ ಸಮಸ್ಯೆಗಳೇನಾದರೂ ಇದ್ದಲ್ಲಿ ಸಭೆಗೆ ಹಾಜರಾಗಿ ತಮ್ಮ ಕುಂದು ಕೊರತೆಗಳ ಅಹವಾಲು ನೀಡಲು ತಿಳಿಸಲಾಗಿದೆ.

## ನಾಳೆ ಕ್ಯಾಲೆಂಡರ್ ಬಿಡುಗಡೆ

**● ತತ್ವನಿಷ್ಠ, ಹೊನ್ನಾವರ:** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ತಾಲೂಕು ಘಟಕ ಹೊನ್ನಾವರದ ವತಿಯಿಂದ ನೂತನ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ ಹಾಗೂ ನಮಸ್ಕಾರ ಸಮಾಜ ಸೇವಾ ಸಂಸ್ಥೆ ,ಕುಮಟಾ ಮತ್ತು ಬೆಳಕು ನೇತ್ರಾಲಯ ಕುಮಟಾ ಇವರ ಸಹಯೋಗದಲ್ಲಿ ಉಚಿತ ಕಣ್ಣಿನ ಪೊರೆ ತಪಾಸಣಾ ಶಿಬಿರ ಜ. 16ರಂದು 11 ಗಂಟೆಗೆ ಸೋಶಿಯಲ್ ಕ್ಲಬ್ ನಲ್ಲಿ ನಡೆಯಲಿದೆ.

ಈ ಕಾರ್ಯಕ್ರಮವನ್ನು ನರಸಿಂಹ ಅಡಿ ಶಿರಸಿ ಅಧ್ಯಕ್ಷರು, ಉತ್ತರ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಕ್ಯಾಲೆಂಡರ್ ಬಿಡುಗಡೆ ಮಾಡಲಿದ್ದಾರೆ. ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವಿನಾಯಕ ಮೇಸ್ತ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಪಪಂ ಮುಖ್ಯಾಧಿಕಾರಿ ಯೇಸು ಬೆಂಗಳೂರು, ವಿಠ್ಠಲದಾಸ ಕಾಮತ್, ರಾಜ್ಯಸಮಿತಿ ಸದಸ್ಯರು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಮಾರುತಿ ನಾಯ್ಕ ಹೊನ್ನಾವರ, ಉಪಾಧ್ಯಕ್ಷರು, ಉತ್ತರ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಸತೀಶ್ ತಾಂಡೇಲ್ , ಕಾರ್ಯಕಾರಿಣಿ ಸದಸ್ಯರು , ಉತ್ತರ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಭಾಗವಹಿಸಲಿದ್ದಾರೆ. ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ ಮುಗಿದ ಬಳಿಕ ಮಧ್ಯಾಹ್ನ ೨ ರಿಂದ ೪ ಗಂಟೆವರೆಗೆ ಬೆಳಕು ನೇತ್ರಾಲಯ ವತಿಯಿಂದ ಉಚಿತ ನೇತ್ರ ತಪಾಸಣೆ ಹಾಗೂ ಶಸ್ತ್ರಚಿಕಿತ್ಸಾ ಶಿಬಿರ ನಡೆಯಲಿದೆ. ಈ ಕಾರ್ಯಕ್ರಮಕ್ಕೆ ಆಸಕ್ತರು ಆಗಮಿಸಬೇಕೆಂದು ತಾಲೂಕು ಪತ್ರಕರ್ತರ ಸಂಘ ಅಧ್ಯಕ್ಷರು ಹಾಗೂ ಸರ್ವ ಪದಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜ. 22ರಿಂದ ಜ. 31 ರವರೆಗೆ ವಿಧಾನಮಂಡಲದ ಜಂಟಿ ಅಧಿವೇಶನ



**● ತತ್ವನಿಷ್ಠ, ಬೆಂಗಳೂರು:** ಪ್ರಸಕ್ತ ಸಾಲಿನ ವರ್ಷದ ಮೊದಲ ವಿಧಾನಮಂಡಲದ ಜಂಟಿ ಅಧಿವೇಶನ ಜ. 22ರಿಂದ ಜ. 31ರ ವರೆಗೆ ನಡೆಸಲು ರಾಜ್ಯಸರ್ಕಾರ ತೀರ್ಮಾನಿಸಿದೆ. ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ತುರ್ತು ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿ ನಡೆಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ವರ್ಷದ ಮೊದಲ ಜಂಟಿ ಅಧಿವೇಶನವನ್ನು ನಡೆಸಲು ಉದ್ದೇಶಿಸಲಾಗಿದೆ. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಜ. 22ರಂದು ವಿಧಾನಮಂಡಲದ ಎರಡು ಸದನಗಳ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಲಿದ್ದಾರೆ ಎಂದು ತಿಳಿಸಿದರು.

ಮೊದಲು ಕೇಂದ್ರ ಸರ್ಕಾರದ ಉದ್ದೇಶಿತ ವಿಕಸಿತ ಭಾರತ – ರೋಜ್ಗಾರ್ ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ) ಖಾತರಿ ಕಾಯ್ದೆ- 2025 ತಿದ್ದುಪಡಿ ಕುರಿತು ಚರ್ಚಿಸಲು ಕೇವಲ ಮೂರು ದಿನ ಮಾತ್ರ ಅಧಿವೇಶನ ನಡೆಸಲು ಉದ್ದೇಶಿಸಲಾಗಿತ್ತು. ಆದರೆ ಸಚಿವ ಸಂಪುಟ ಸಭೆಯಲ್ಲಿ ಕೆಲವು ಶಾಸಕರು ಅಧಿವೇಶನವನ್ನು ಹೆಚ್ಚು ದಿನಗಳ ಕಾಲ ನಡೆಸಬೇಕು. ಚರ್ಚೆಯಲ್ಲಿ ಎಲ್ಲರೂ ಪಾಲ್ಗೊಳ್ಳಲು ಅವಕಾಶವಾಗುತ್ತದೆ. ಮೂರು ದಿನದ ಬದಲಿಗೆ ಏಳು ದಿನ ನಡೆಸಲು ತೀರ್ಮಾನಿಸಲಾಯಿತು ಎಂದರು.

ಜಂಟಿ ಅಧಿವೇಶನದಲ್ಲಿ ಕೇಂದ್ರ ಸರ್ಕಾರವು ಮನ್ರೇಗಾ ಯೋಜನೆ ಹೆಸರನ್ನು ತಿದ್ದುಪಡಿ ಮಾಡಿ ವಿಕಸಿತ ಭಾರತ- ರೋಜ್ಗಾರ್ ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ) ಖಾತರಿ ಕಾಯ್ದೆ- 2025 ಎಂದು ಮರು ನಾಮಕರಣ ಮಾಡಿರುವ ಬಗ್ಗೆ ಸದನದಲ್ಲಿ ಖಂಡನಾ ನಿರ್ಣಯ ಮಂಡಿಸುವ ಬಗ್ಗೆಯೂ ತೀರ್ಮಾನಿಸಲಾಗಿದೆ ಎಂದರು.

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಮೊದಲ ದಿನ ವಿಧಾನ ಮಂಡಲ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಿದ ನಂತರ ಮಾರನೇಯ ದಿನ ಮನ್ರೇಗಾ ಕಾಯ್ದೆ ಬದಲಾವಣೆಯ ಬಗ್ಗೆ ವಿಶೇಷ ಚರ್ಚೆ ನಡೆಯಲಿದೆ. ಮನ್ರೇಗಾ ಚರ್ಚೆಗಾಗಿಯೇ ವಿಶೇಷ ಅಧಿವೇಶನ ನಡೆಯಲಿದ್ದು, ನಂತರ ಬಜೆಟ್ ಅಧಿವೇಶನ ಫೆಬ್ರವರಿ ಕೊನೆಯ ವಾರದಲ್ಲಿ ಸಮಾವೇಶಗೊಳ್ಳಲಿದೆ.

ನಮ್ಮ ರಾಜ್ಯದ ಜನರ ಹಕ್ಕುಗಳನ್ನ ಕೇಂದ್ರ ಸರ್ಕಾರ ಕಿತ್ತುಕೊಂಡರೆ ಸುಮ್ಮನೆ ಇರಲು ಆಗಲ್ಲ. ಒತ್ತಡ ತಂದು ಮನರೇಗಾ ಯೋಜನೆಯನ್ನ ಪುನಃಸ್ಥಾಪನೆಗೆ ಒತ್ತಡ ಹಾಕಲಾಗುವುದು. ಪಂಜಾಬ್ ಹಾಗೂ ತಮಿಳುನಾಡು ಸಹ ವಿಬಿಜೀ ರಾಮ್ ಜೀ ಕಾಯ್ದೆ ವಿರುದ್ಧ ಧ್ವನಿ ಎತ್ತಿವೆ ಎಂದು ಹೇಳಿದರು.

ಕೇಂದ್ರ ಸರ್ಕಾರ ಮಹಾತ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಹೆಸರು ಬದಲಾವಣೆ ಮಾಡಿರುವುದರ ವಿರುದ್ಧ ವ್ಯಾಪಕ ಚರ್ಚೆಗಳಾಗುತ್ತಿವೆ. ಕೇಂದ್ರ ಸರ್ಕಾರ ಮಹಾತ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಹೆಸರನ್ನು ವಿಕಸಿತ ಭಾರತ ಗ್ರಾಮೀಣ ಉದ್ಯೋಗ ಖಾತ್ರಿ ಮತ್ತು ಜೀವನೋಪಾಯ ಮಿಷನ್ ಗ್ರಾಮೀಣ ಎಂದು ಬದಲಾವಣೆ ಮಾಡಿದೆ.

ಪರಿಷ್ಕೃತ ಯೋಜನೆಯ ಪ್ರಕಾರ ಯೋಜನಾ ವೆಚ್ಚದಲ್ಲಿ ರಾಜ್ಯ ಸರ್ಕಾರಗಳು ಶೇ.40ರಷ್ಟು ವೆಚ್ಚ ಭರಿಸಬೇಕು ಎಂಬ ನಿಯಮ ಇದೆ. ಇದಕ್ಕೆ ರಾಜ್ಯ ಸರ್ಕಾರ ತೀವ್ರ ವಿರೋಧ ವ್ಯಕ್ತಪಡಿಸಿದೆ.

ಕಾಮಗಾರಿಗಳ ಆಯ್ಕೆಗೆ ಕೇಂದ್ರ ಸರ್ಕಾರವೇ ಅಧಿಸೂಚಿತ ಪ್ರದೇಶಗಳನ್ನು ಗುರುತಿಸಬೇಕಿದೆ ಹಾಗೂ ಇತರ ವಿಚಾರಗಳ ಬಗ್ಗೆ ಕಾಂಗ್ರೆಸ್ ಪಕ್ಷ ವಿರೋಧ ವ್ಯಕ್ತಪಡಿಸುತ್ತಿದೆ. ರಾಜ್ಯ ಸರ್ಕಾರ ಮಸೂದೆಯಲ್ಲಿನ ನಕಾರಾತಕ ಅಂಶಗಳನ್ನು ಮುಂದಿಟ್ಟುಕೊಂಡು ದೇಶಾದ್ಯಂತ ಪ್ರತಿಭಟನೆ, ಧರಣಿ, ಉಪವಾಸ ಸತ್ಯಾಗ್ರಹ ಹಾಗೂ ಪಾದಯಾತ್ರೆ ಸೇರಿದಂತೆ ಇತರ ಪ್ರಕಾರಗಳಲ್ಲಿ ಹೋರಾಟ ರೂಪಿಸುತ್ತಿದೆ.

ಇದಕ್ಕೆ ಪ್ರತಿಯಾಗಿ ಬಿಜೆಪಿ ಕಾಯ್ದೆಯನ್ನು ಬಲವಾಗಿ ಸಮರ್ಥಿಸಿಕೊಳ್ಳುತ್ತಿದೆ. ಮನ್ರೇಗಾ ಯೋಜನೆಯಲ್ಲಿ ಕೇವಲ ನೂರು ದಿನ ಮಾತ್ರ ಮಾನವ ದಿನಗಳ ಉದ್ಯೋಗಕ್ಕೆ ಅವಕಾಶ ಇತ್ತು. ಪರಿಷ್ಕೃತ ಕಾಯ್ದೆಯಲ್ಲಿ 125 ದಿನಗಳ ಉದ್ಯೋಗಾವಕಾಶ ದೊರೆಯಲಿದೆ ಎಂದು ಪ್ರತಿಪಾದಿಸುತ್ತಿದೆ.

ಕೇಂದ್ರ ಸರ್ಕಾರ ರೂಪಿಸಿರುವ ಹೊಸ ಕಾಯ್ದೆ ಜನಪರವಾಗಿದೆ ಎಂದು ಬಿಜೆಪಿ ವಾದಿಸುತ್ತಿದ್ದರೆ, ಕಾಂಗ್ರೆಸ್ ಪಕ್ಷ ಕಾಯ್ದೆಯಿಂದ ಗ್ರಾಮೀಣ ಭಾಗದ ಜನರ ಉದ್ಯೋಗವಕಾಶಗಳು ಕಡಿತಗೊಳ್ಳಲಿವೆ ಎಂದು ಆತಂಕ ವ್ಯಕ್ತಪಡಿಸುತ್ತಿದೆ. ಮಹಾತ ಗಾಂಧೀಜಿ ಅವರ ಹೆಸರು ಬದಲಾವಣೆಯಷ್ಟೇ ಅಲ್ಲ ಕಾಯ್ದೆಯಿಂದ ಗ್ರಾಮೀಣ ಭಾಗದ ಉದ್ಯೋಗಗಳೇ ನಾಶವಾಗುತ್ತವೆ ಎಂದು ಕಾಂಗ್ರೆಸ್ಸಿನ ಆರೋಪ.ಈ ನೆಲೆಯಲ್ಲಿ ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್‌ನ ಜೊತೆಗೂ ವಾದ ಪ್ರತಿವಾದಕ್ಕೆ ಅವಕಾಶ ಕಲ್ಪಿಸುವ ಸಲುವಾಗಿ ಸದನದಲ್ಲಿ ಚರ್ಚೆ ನಡೆಯಲಿದೆ.

## ಇರಾನ್ ತೊರೆಯಲು ಸೂಚನೆ

**● ತತ್ವನಿಷ್ಠ, ನವದೆಹಲಿ:** ಇರಾನ್ ನಲ್ಲಿ ಖಮೇನಿ ಆಡಳಿತ ವಿರೋಧಿ ಪ್ರತಿಭಟನೆಯಿಂದಾಗಿ ಉಂಟಾದ ಹಿಂಸಾಚಾರದಲ್ಲಿ ಮೃತಪಟ್ಟವರ ಸಂಖ್ಯೆ 2,500 ದಾಟಿದೆ. ಈ ಮಧ್ಯೆ ಇರಾನಿನಲ್ಲಿರುವ ಪ್ರಜೆಗಳಿಗೆ ಭಾರತ ಎರಡನೇ ಬಾರಿಗೆ ಸಲಹೆ ನೀಡಿದ್ದು, ಕೂಡಲೇ ದೇಶ ತೊರೆಯುವಂತೆ ಸೂಚಿಸಿದೆ.

ಈ ಹಿಂದೆ ಜನವರಿ 5 ರಂದು ಕೂಡಾ ಇದೇ ರೀತಿಯ ಸಲಹೆ ನೀಡಲಾಗಿತ್ತು. ಇರಾನ್‌ನಲ್ಲಿ ಹೆಚ್ಚಾಗುತ್ತಿರುವ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡುಈ ರೀತಿಯ ಸಲಹೆ ನೀಡಲಾಗಿದೆ. ಸದ್ಯ ಇರಾನ್‌ನಲ್ಲಿರುವ ವಿದ್ಯಾರ್ಥಿಗಳು, ಯಾತ್ರಿಕರು, ವ್ಯಾಪಾರಸ್ಥರು ಮತ್ತು ಪ್ರವಾಸಿಗರು ಕಮರ್ಷಿಯಲ್ ವಿಮಾನ ಸೇರಿದಂತೆ ಲಭ್ಯವಿರುವ ಸಾರಿಗೆ ಮೂಲಕ ಕೂಡಲೇ ಇರಾನ್‌ನಿಂದ ಹೊರಡಲು ಸೂಚಿಸಲಾಗಿದೆ.

ಪ್ರತಿಭಟನೆ, ಹಿಂಸಾಚಾರದಿಂದಾಗಿ ಎಲ್ಲಾ ಭಾರತೀಯ ನಾಗರಿಕರು ಅಲ್ಲಿಂದ ಹೊರಡಬೇಕು. ಪ್ರತಿಭಟನೆ ನಡೆಯುತ್ತಿರುವ ಪ್ರದೇಶಗಳನ್ನು ತಪ್ಪಿಸಬೇಕು. ಇರಾನ್‌ನಲ್ಲಿನ ಭಾರತೀಯ ರಾಯಭಾರ ಕಚೇರಿಯೊಂದಿಗೆ ಸಂಪರ್ಕದಲ್ಲಿರಿ ಮತ್ತು ಯಾವುದೇ ಬೆಳವಣಿಗೆಗಳಿಗಾಗಿ ಸ್ಥಳೀಯ ಮಾಧ್ಯಮಗಳ ಕಡೆ ಗಮನಹರಿಸಿ ಎಂದು ಪುನರುಚ್ಚರಿಸಲಾಗಿದೆ.

ಇರಾನ್‌ನಲ್ಲಿರುವ ಎಲ್ಲಾ ಭಾರತೀಯ ನಾಗರಿಕರು ಪಾಸ್ ಪೋರ್ಟ್ ಜೊತೆಗೆ ತಮ್ಮ ಪ್ರಯಾಣ ಮತ್ತು ವಲಸೆ ದಾಖಲೆಗಳನ್ನು ತಮ್ಮೊಂದಿಗೆ ಇಟ್ಟುಕೊಳ್ಳುವಂತೆ ಸಲಹೆ ನೀಡಲಾಗಿದೆ. ಇರಾನ್ ದೇಶಾದ್ಯಂತ ಪ್ರತಿಭಟನೆಗಳು ಹೆಚ್ಚಾಗುತ್ತಿದ್ದು, ಹಿಂಸಾತ್ಮಕವಾಗಿ ತಿರುಗಿದೆ. ಇದರಿಂದಾಗಿ ಜನರ ಬಂಧನ, ಗಾಯದಂತಹ ಘಟನೆಗಳು ನಡೆಯುತ್ತಿದ್ದು, ದೈನಂದಿನ ಜೀವನಕ್ಕೆ ಅಡ್ಡಿಯಾಗಿದೆ. ಕೂಡಲೇ ಇರಾನ್ ತೊರೆಯುವಂತೆ ಅಲ್ಲಿನ ಯುನೈಟೆಡ್ ಸ್ಟೇಟ್ಸ್ ವರ್ಚುವಲ್ ರಾಯಭಾರ ಕಚೇರಿ ಸಲಹೆ ನೀಡಿದೆ.

### ಮಹಿಳಾ ಮೋರ್ಚಾದಿಂದ ರಾಜ್ಯಪಾಲರಿಗೆ ಮನವಿ

# ದಲಿತ ಮಹಿಳೆ ಸುಜಾತ ಹಂಡಿ ಮೇಲೆ ದೌರ್ಜನ್ಯ: ಖಂಡನೆ



**● ತತ್ವನಿಷ್ಠ, ಭಟ್ಕಳ:** ಹುಬ್ಬಳ್ಳಿಯಲ್ಲಿ ದಲಿತ ಮಹಿಳೆ ಹಾಗೂ ಬಿಜೆಪಿ ಕಾರ್ಯಕರ್ತೆಯಾದ ಸುಜಾತ ಹಂಡಿ ಅವರ ಮೇಲೆ ನಡೆದಿರುವ ದೌರ್ಜನ್ಯವನ್ನು ಖಂಡಿಸಿ, ಭಾರತೀಯ ಜನತಾ ಪಾರ್ಟಿ ಭಟ್ಕಳ ಮಂಡಲದ ಮಹಿಳಾ ಮೋರ್ಚಾ ವತಿಯಿಂದ ಪ್ರಭಾರಿ ಸಹಾಯಕ ಆಯುಕ್ತ ಪ್ರವೀಣ ಕರಾಂಡೆ ಅವರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಹುಬ್ಬಳ್ಳಿಯಲ್ಲಿ ಮತದಾರರ ಪರಿಷ್ಕರಣೆಗೆ ಮುನ್ನ ನಡೆದ ಸಮೀಕ್ಷೆಯ ವೇಳೆ ಬಿಜೆಪಿ ಕಾರ್ಯಕರ್ತೆಯಾದ ಸುಜಾತ ಹಂಡಿ ಅವರ ವಿರುದ್ಧ ದ್ವೇಷ ರಾಜಕಾರಣ ನಡೆಸಲಾಗಿದೆ. ಅವರ ಮೇಲೆ ಪ್ರಕರಣ ದಾಖಲಿಸಿ ಬಂಧಿಸುವ ಸಂದರ್ಭದಲ್ಲಿ ಅಮಾನವೀಯವಾಗಿ ವರ್ತಿಸಲಾಗಿದೆ ಎಂದು ಮಹಿಳಾ ಮೋರ್ಚಾ ಆರೋಪಿಸಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯದಲ್ಲಿದ್ದ ಅಧಿಕಾರಿಗಳು ಹಾಗೂ ಸಹಾಯಕರನ್ನು ಅಮಾನತು ಮಾಡಿ, ನಿಷ್ಪಕ್ಷಪಾತ ತನಿಖೆ ನಡೆಸಿ ನ್ಯಾಯ ಒದಗಿಸಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ಅಲ್ಲದೆ, ರಾಜ್ಯದಲ್ಲಿ ಹೆಚ್ಚುತ್ತಿರುವ ಮಹಿಳಾ ದೌರ್ಜನ್ಯ, ಅತ್ಯಾಚಾರ ಹಾಗೂ ಅನಾಚಾರ ಪ್ರಕರಣಗಳಿಗೆ ತಕ್ಷಣವೇ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ರಾಜ್ಯಪಾಲರಲ್ಲಿ ಆಗ್ರಹಿಸಲಾಗಿದೆ.

ಈ ಸಂದರ್ಭದಲ್ಲಿ ಮಹಿಳಾ ಮೋರ್ಚಾ ಅಧ್ಯಕ್ಷೆ ಸುನೀತಾ ಹೇರೂರ್‌ಕರ್, ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ವಿಜಯ ನಾಯ್ಕ , ಉಪಾಧ್ಯಕ್ಷರಾದ ಕಾವೇರಿ ನಾಯ್ಕ , ಭವಾನಿ ಮೊಗೇರ್, ಮಾದೇವಿ ನಾಯ್ಕಭಟ್ಕಳ ಮಂಡಲ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್ ನಾಯ್ಕ್, ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಕಾರ್ಯಕಾರಿಣಿ ಸದಸ್ಯ ರವಿ ನಾಯ್ಕ ಜಾಲಿ, ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಅಬಾಕಸ್ ಸ್ಪರ್ಧೆಯಲ್ಲಿ ಉತ್ತಮ ಸಾಧನೆ



**● ತತ್ವನಿಷ್ಠ, ಮುಂಡಗೋಡ:** ಮೈಸೂರಿನ ವಿಜಯನಗರದ ಸಂಭ್ರಮ ಕನ್ವೆನ್ಷನ್ ಸಭಾಂಗಣದಲ್ಲಿ ಅಬಾಕಸ್ ವೇದಿಕ್ ಮಾಥ್ಸ್ ಸ್ಪರ್ಧೆ ಪ್ರೊಪಾಥ್ ಅಕಾಡೆಮಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ರಾಜ್ಯ ಮಟ್ಟದ ಅಬಾಕಸ್ ಮತ್ತು ವೇದಿಕ್ ಮ್ಯಾತ್ಸ್ ಸ್ಪರ್ಧೆಯಲ್ಲಿ ಮುಂಡಗೋಡ ತಾಲೂಕಿನ ಮಳಗಿ ಗ್ರಾಮದ ಪ್ರೋಪಾತ್ ತರಬೇತಿ ಕೇಂದ್ರದಲ್ಲಿ ಅಬ್ಯಾಕಸ್ ಕಲಿಯುತ್ತಿರುವ, ಎರಡನೇ ಲೆವೆಲ್ ಪೂರ್ತಿಗೊಳಿಸಿದ ಭುವನ ಉದಯ ಕೊಳಗಿ ಪ್ರಥಮ ಸ್ಥಾನ, ಮುಗ್ಧ ದಿನೇಶ ಅಂಡಗಿ ದ್ವಿತೀಯ ಸ್ಥಾನ, ಧನುಷ ಕೆ ಸಿ ತೃತೀಯ ಸ್ಥಾನವನ್ನು ಪಡೆದಿದ್ದಾರೆ. ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 400 ಮಕ್ಕಳು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಈ ಹಿಂದೆ ಶಿಕ್ಷಕರಿಗೆ ಮತ್ತು ಶಿಕ್ಷಕಿಯರಿಗೆ ನಡೆದ ಅಬಾಕಸ್ ಮೂರನೆಯ ಲೆವೆಲ್ಲಿನ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ರಾಜೇಶ್ವರಿ ಶಾಂತರಾಮ ಅಂಡಗಿ ಅವರಿಗೂ ಬಹುಮಾನ ಹಾಗೂ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.

# ಕಾಲುಸಂಕ ಕಾಮಗಾರಿಗೆ ಶಾಸಕ ಭೀಮಣ್ಣ ನಾಯ್ಕ ಭೂಮಿ ಪೂಜೆ



● **ತತ್ವನಿಷ್ಠ, ಶಿರಸಿ:** ತಾಲೂಕಿನ ಗ್ರಾಮೀಣ ಭಾಗದ ರಸ್ತೆ ಮತ್ತು ಸಂಪರ್ಕ ವ್ಯವಸ್ಥೆಯನ್ನು ಬಲಪಡಿಸಲು ಆದ್ಯತೆ ನೀಡಲಾಗುವುದು ಎಂದು ಶಾಸಕ ಭೀಮಣ್ಣ ನಾಯ್ಕ ಹೇಳಿದರು.

ಅವರು ತಾಲೂಕಿನ ಸೋಂದಾ ಗ್ರಾಮ ಪಂಚಾಯತ ವ್ಯಾಪ್ತಿಯ ಮೊಗದ್ದೆ ಗ್ರಾಮದಿಂದ ಔಡಾಳಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಮಧ್ಯದ ಹಳ್ಳಕ್ಕೆ ಸುಮಾರು 30 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಲಿರುವ ನೂತನ ಕಾಲು ಸಂಕ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಕಳೆದ ಹಲವು ವರ್ಷಗಳಿಂದ ಮಳೆಗಾಲದಲ್ಲಿ ಈ ಹಳ್ಳ ದಾಟಲು ಗ್ರಾಮಸ್ಥರು ಹಾಗೂ ಶಾಲಾ ಮಕ್ಕಳು ಪಡುತ್ತಿದ್ದ ಹರಸಾಹಸವನ್ನು ಮನಗಂಡು, ಈ ಕಾಮಗಾರಿಯನ್ನು ಆದ್ಯತೆಯ ಮೇಲೆ ಕೈಗೆತ್ತಿಕೊಳ್ಳಲಾಗಿದೆ. 30 ಲಕ್ಷ ರೂ.ಗಳ ಅನುದಾನದಲ್ಲಿ ಸುಸಜ್ಜಿತ ಹಾಗೂ ಭದ್ರವಾದ ಕಾಲು ಸಂಕ ನಿರ್ಮಾಣವಾಗಲಿದ್ದು, ಇದರಿಂದ ಮೊಗದ್ದೆ ಮತ್ತು ಔಡಾಳ ಭಾಗದ ನೂರಾರು ಕುಟುಂಬಗಳಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ಕಾಮಗಾರಿಯ ಭೂಮಿ ಪೂಜೆ ನೆರವೇರಿಸಿದ ನಂತರ ಗ್ರಾಮಸ್ಥರೊಂದಿಗೆ ಚರ್ಚಿಸಿದ ಶಾಸಕರು, ಸಾರ್ವಜನಿಕರ ತೆರಿಗೆ ಹಣದಲ್ಲಿ ನಡೆಯುವ ಪ್ರತಿಯೊಂದು ಕಾಮಗಾರಿಯೂ ಗುಣಮಟ್ಟದಿಂದ ಕೂಡಿರಬೇಕು. ಗುತ್ತಿಗೆದಾರರು ಮತ್ತು ಸಂಬಂಧಪಟ್ಟ ಇಲಾಖೆಯ ಇಂಜಿನಿಯರ್‌ಗಳು ಸ್ಥಳದಲ್ಲಿದ್ದು ಕೆಲಸದ ಗುಣಮಟ್ಟವನ್ನು ಪರಿಶೀಲಿಸಬೇಕು. ನಿಗದಿತ ಅವಧಿಯೊಳಗೆ ಸಂಕವು ಸಾರ್ವಜನಿಕರ ಬಳಕೆಗೆ ಮುಕ್ತವಾಗಬೇಕು ಎಂದು ಸೂಚನೆ ನೀಡಿದರು.

ಇದೇ ಸಂದರ್ಭದಲ್ಲಿ ಗ್ರಾಮಸ್ಥರು ಶಾಸಕರಿಗೆ ತಮ್ಮ ಭಾಗದ ಇತರ ಸಮಸ್ಯೆಗಳ ಬಗ್ಗೆಯೂ ಗಮನ ಸೆಳೆದರು. ಗ್ರಾಮಸ್ಥರ ಅಹವಾಲುಗಳನ್ನು ತಾಳ್ಮೆಯಿಂದ ಆಲಿಸಿದ ಶಾಸಕರು, ಹಂತಹಂತವಾಗಿ ಎಲ್ಲ ಮೂಲ ಸೌಕರ್ಯಗಳನ್ನು ಒದಗಿಸುವ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಸ್ಥಳೀಯ ಗ್ರಾಮ ಪಂಚಾಯತ್ ಜನಪ್ರತಿನಿಧಿಗಳು, ಸದಸ್ಯರು, ಪ್ರಮುಖ ಮುಖಂಡರು, ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಮೊಗದ್ದೆ ಮತ್ತು ಔಡಾಳ ಗ್ರಾಮದ ನೂರಾರು ಗ್ರಾಮಸ್ಥರು ಉಪಸ್ಥಿತರಿದ್ದರು.

## ಗಜಾನನೋತ್ಸವ ಮಂಡಳಿ ಮಾಜಿ ಅಧ್ಯಕ್ಷರಿಗೆ ಶ್ರದ್ಧಾಂಜಲಿ



● **ತತ್ವನಿಷ್ಠ, ಶಿರಸಿ:** ಗಜಾನನೋತ್ಸವ ಮಂಡಳಿಯ ಮಾಜಿ ಅಧ್ಯಕ್ಷರಾಗಿದ್ದ ದಿ. ಗೋಪಾಲ ತಿಮ್ಮಪ್ಪ ನಾಯ್ಕ ಹಾಗೂ ದಿ. ದೇವಿದಾಸ ಮಾಡಗೇರಿ ಅವರ ಆತ್ಮಕ್ಕೆ ಶಾಂತಿಕೋರಿ ಜ. 14ರಂದು ನಗರದ ಶಿವಾಜಿಚೌಕದ ಗಜಾನನೋತ್ಸವ ಮಂಡಳಿಯ ಗಣೇಶ ಮಂಟಪದಲ್ಲಿ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಈರ್ವರು ಹಿರಿಯರಾಗಿ ಗಜಾನನೋತ್ಸವ ಮಂಡಳಿಯ ಅಭಿವೃದ್ಧಿಗೆ, ತನ್ಮೂಲಕ ಶಿರಸಿಯ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಳನ್ನು ಸ್ಮರಿಸಿಕೊಳ್ಳಲಾಯಿತು. ಮಂಡಳಿಯ ಅಧ್ಯಕ್ಷ ಮಹಾದೇವ ಪಟಗಾರ ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ ಗಜಾನನ ಸಕಲಾತಿ, ನಿವೃತ್ತ ಪ್ರಾಂಶುಪಾಲ ಕೆ.ಎನ್. ಹೊಸಮನಿ ಹಾಗೂ ಪತ್ರಕರ್ತ ಪರಮಾನಂದ ಹೆಗಡೆ ಮಾತನಾಡಿ, ಸ್ವರ್ಗಸ್ಥರಾದ ಗೋಪಾಲ ನಾಯ್ಕ ಮತ್ತು ದೇವಿದಾಸ ಮಾಡಗೇರಿ ಕುಟುಂಬಗಳಿಗೆ ದುಃಖ ಸಹಿಸುವ ಶಕ್ತಿ ದೊರೆಯಲಿ ಎಂದು ಪ್ರಾರ್ಥಿಸಿದರು. ಸಭೆಯಲ್ಲಿ ಮಾಜಿ ಅಧ್ಯಕ್ಷರಾದ ಅಶೋಕ ಜಾಧವ, ಶಂಭುಲಿಂಗ ಎಳಗೇರಿ, ಬಾಬು ಹನ್ಮಂತಿಕರ, ವಾಸುದೇವ ಮಾಡಗೇರಿ, ಉಪಾಧ್ಯಕ್ಷ ದೇವಿದಾಸ ಪ್ರಭು, ಕಾರ್ಯದರ್ಶಿ ಪ್ರಕಾಶ ಗೋಸಾವಿ, ವಿಠಲ ಪಂಡಿತ, ಗಣೇಶ ಹೆಗಡೆ, ಶಿರಸಿ ಅರ್ಬನ್ ಬ್ಯಾಂಕ್ ನಿರ್ದೇಶಕ ಪ್ರಕಾಶ ಪೈ, ಯಡಳ್ಳಿ ಗ್ರಾಪಂ ಅಧ್ಯಕ್ಷ ಭಾಸ್ಕರ ಶೆಟ್ಟಿ, ವಿದ್ಯುತ್ ಗುತ್ತಿಗೆದಾರ ಹರೀಶ ಪಂಡಿತ, ರಾಮಮೂರ್ತಿಹೊಸೂರ ಮತ್ತಿತರರು ಉಪಸ್ಥಿತರಿದ್ದರು.

## ರಾಜ್ಯಮಟ್ಟಕ್ಕೆ ಆಯ್ಕೆ



● **ತತ್ವನಿಷ್ಠ, ಶಿರಸಿ:** ಧರ್ಮಸ್ಥಳದ ಶಾಂತಿವನ ಟ್ರಸ್ಟ್ ಆಯೋಜಿಸಿದ ನೈತಿಕ ಮತ್ತು ಮೌಲ್ಯ ಶಿಕ್ಷಣ ಆಧಾರಿತ ಜಿಲ್ಲಾಮಟ್ಟದ ಭಾಷಣ ಸ್ಪರ್ಧೆಯಲ್ಲಿ ವಾನಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿ ನೀತಿ ಹರಿಹರ ಭಟ್ಟ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾಳೆ. ಧರ್ಮಸ್ಥಳದಲ್ಲಿ ನಡೆದ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಧರ್ಮಸ್ಥಳ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರ ಸಮ್ಮುಖದಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾಳೆ.

## ಓಸಿ ಆಟ: ಪ್ರಕರಣ

● **ತತ್ವನಿಷ್ಠ, ಶಿರಸಿ:** ಸಾರ್ವಜನಿಕ ಸ್ಥಳದಲ್ಲಿ ಓಸಿ ಆಡಿಸುತ್ತಿದ್ದ ಮೇಲಿನ ಓಣಿಕೇರಿಯ ಮಹೇಶ ರಾಮ ನಾಯ್ಕ (36) ವಿರುದ್ಧ ಶಿರಸಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈತ ತಾಲೂಕಿನ ಹುತ್ಗಾರ ಸಮೀಪದ ಕಲಗಾರವಡ್ಡು ಕ್ರಾಸ್ ಸಾರ್ವಜನಿಕ ಸ್ಥಳದಲ್ಲಿ ಓಸಿ ಆಟ ಆಡಿಸುತ್ತಿದ್ದ ವೇಳೆ ಶಿರಸಿ ಗ್ರಾಮೀಣ ಠಾಣೆಯ ಪಿಐ ರಮೇಶ ಹೂಗಾರ ನೇತೃತ್ವದಲ್ಲಿ ಸಿಬ್ಬಂದಿ ದಾಳಿ ನಡೆಸಿ, 525 ರೂ. ನಗದು, ಓಸಿ ಚೀಟಿ ಹಾಗೂ ಬಾಲ್ ಪೆನ್ನು ವಶಪಡಿಸಿಕೊಂಡಿದ್ದಾರೆ.

## ಅಪಘಾತ: ಬೈಕ್ ಸವಾರ ಸಾವು

● **ತತ್ವನಿಷ್ಠ, ಶಿರಸಿ:** ಶಿರಸಿ-ಕುಮಟಾ ರಾಷ್ಟ್ರೀಯ ಹೆದ್ದಾರಿಯ ಹಾರೂಗಾರ ಗ್ರಾಮದ ಸೇತುವೆ ಬಳಿ ಬೈಕ್ ನಿಯಂತ್ರಣ ತಪ್ಪಿ ಉರುಳಿ ಬಿದ್ದ ಪರಿಣಾಮ ಸವಾರ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಸಹ ಸವಾರ ಗಂಭೀರ ಗಾಯಗೊಂಡಿದ್ದಾನೆ. ಯಲ್ಲಾಪುರ ತಾಲೂಕಿನ ಕಣ್ಣಿಗೇರಿ ಸಮೀಪದ ಅಂತಿಗೇರಿಯ ಸಂಕೇತ ನೀಲಕಂಠ ದೇಸಾಯಿ (25) ಮೃತ ಬೈಕ್ ಸವಾರ. ಬಿಜನಕೊಪ್ಪದ ನಾಗರಾಜ ಹರೀಶ್ಚಂದ್ರ ಪಾಟೀಲ (26) ಗಾಯಗೊಂಡ ಸಹ ಸವಾರ. ಶಿರಸಿ-ಕುಮಟಾ ರಾಷ್ಟ್ರೀಯ ಹೆದ್ದಾರಿಯಲ್ಲಿ ಶಿರಸಿ ಕಡೆಯಿಂದ ಕಮಟಾ ಕಡೆಗೆ ಅತಿವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿದ ಪರಿಣಾಮ ಹಾರೂಗಾರ ಸೇತುವೆ ಬಳಿ ಬೈಕ್ ನಿಯಂತ್ರಣ ತಪ್ಪಿ ಉರುಳಿ ಬಿದ್ದಿದೆ. ಅಪಘಾತದ ರಭಸಕ್ಕೆ ಸಂಕೇತ ದೇಸಾಯಿ ತಲೆಗೆ ಗಂಭೀರ ಗಾಯಗವಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಹಿಂಬದಿ ಸವಾರ ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾನೆ. ಬೈಕ್ ಸಂಪೂರ್ಣ ಜಕಂಗೊಂಡಿದೆ. ಈ ಕುರಿತು ಶಿರಸಿ ಟ್ರಾಫಿಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ರಸ್ತೆಗಳಲ್ಲಿ ಹೊಗೆಯಾಟ: ಜನರ ಜೀವದೊಂದಿಗೆ ಚೆಲ್ಲಾಟ

### ವಿಪರೀತ ಹೊಗೆ ಉಗುಳುವ ಸರ್ಕಾರಿ ಬಸ್‌ಗಳು | ಕಂಡರೂ ಕಾಣದಂತಿರುವ ಅಧಿಕಾರಿಗಳು | ದುರಸ್ತಿಗೆ ತಾತ್ಸಾರ

■ **ನಿತಿನ್ ಹೆಗಡೆ ಮುತ್ತಿಗೆ**

● **ತತ್ವನಿಷ್ಠ, ಸಿದ್ದಾಪುರ:** ಮಲೆನಾಡು ಎಂದರೆ ಹಸಿರು, ಸ್ವಚ್ಛಂದ ಗಾಳಿ ಮತ್ತು ಆಹ್ಲಾದಕರ ಪರಿಸರ. ಆದರೆ, ಉತ್ತರ ಕನ್ನಡ ಜಿಲ್ಲೆಯ ಶಿರಸಿ ಮತ್ತು ನೆರೆಯ ಸಾಗರ ರಸ್ತೆಗಳಲ್ಲಿ ಸಂಚರಿಸುವ ಸರ್ಕಾರಿ ಬಸ್‌ಗಳು ಈ ಹಸಿರು ಪರಿಸರಕ್ಕೆ ಕಪ್ಪು ಮಸಿ ಬಳಿಯುತ್ತಿವೆ.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕೆಎಸ್‌ಆರ್‌ಟಿಸಿ ಬಸ್‌ಗಳು ಉಗುಳುವ ದಟ್ಟವಾದ ಕಪ್ಪು ಹೊಗೆಯಿಂದಾಗಿ, ರಸ್ತೆಯಲ್ಲಿ ಸಂಚರಿಸುವ ದ್ವಿಚಕ್ರ ವಾಹನ ಸವಾರರು, ಶಾಲಾ ಮಕ್ಕಳು ಮತ್ತು ಪಾದಚಾರಿಗಳು ನಿತ್ಯ ನರಕಯಾತನೆ ಅನುಭವಿಸುವಂತಾಗಿದೆ. ಸಾರ್ವಜನಿಕರ ಆರೋಗ್ಯದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲದ ಸಾರಿಗೆ ಇಲಾಖೆಯ ಧೋರಣೆ ಮತ್ತು ದೂರು ನೀಡಿದರೂ ಕ್ರಮ ಕೈಗೊಳ್ಳದ ಅಧಿಕಾರಿಗಳ ಜಾಣ ಕುರುಡುತನದ ವ್ಯವಸ್ಥೆಯನ್ನು ಅಣುಕಿಸುವಂತಿದೆ.

**ಭರವಸೆ ಸುಳ್ಳಾಯಿತು, ಹೊಗೆ ಮುಂದುವರಿಯಿತು:** ಈ ನಿರ್ದಿಷ್ಟ ಪ್ರಕರಣ ಸಾರಿಗೆ ಸಂಸ್ಥೆಯ ಅವ್ಯವಸ್ಥೆಗೆ ಹಿಡಿದ ಕನ್ನಡಿಯಂತಿದೆ. ಶಿರಸಿ ಡಿಪೋಗೆ ಸೇರಿದ ಬಸ್ ಸಂಖ್ಯೆ KA-31-F-1406 ರಸ್ತೆಗಳಲ್ಲಿ ಸಂಚರಿಸುವಾಗ ಅತಿಯಾದ ಕಪ್ಪು ಹೊಗೆಯನ್ನು ಹೊರಸೂಸುತ್ತಿತ್ತು. ಈ ಬಗ್ಗೆ ಸಾರ್ವಜನಿಕರು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಉತ್ತರ ಕನ್ನಡ ವಿಭಾಗದ ಅಧಿಕಾರಿಗಳಿಗೆ ಸಾಕ್ಷ್ಯ ಸಮೇತ ದೂರು ನೀಡಿದ್ದರು. ಬಸ್ ಉಗುಳುವ ಹೊಗೆಯ ಫೋಟೋ ಮತ್ತು ವೀಡಿಯೊಗಳನ್ನು ಕಳುಹಿಸಿದಾಗ, ಅಧಿಕಾರಿಗಳು ತಕ್ಷಣ ಸ್ಪಂದಿಸುವ ನಾಟಕವಾಡಿದರು. "ಸಮಸ್ಯೆಯನ್ನು ಕೂಡಲೇ ಸರಿಪಡಿಸುತ್ತೇವೆ, ಸಂಬಂಧಪಟ್ಟ ಡಿಪೋ ಮ್ಯಾನೇಜರ್‌ಗೆ ಸೂಚನೆ ನೀಡುತ್ತೇವೆ. ಒಂದೇ ದಿನದಲ್ಲಿ ಸರಿ ಮಾಡಿಸಿ ಕೊಡುತ್ತೇವೆ," ಎಂಬ ಸಿದ್ಧ ಉತ್ತರದ ಭರವಸೆ ಅವರಿಂದ ದೊರಕಿತ್ತು ಹಾಗೂ ಇದರ ಜೊತೆ ರಿಪೇರಿ ಆದ ಬಗ್ಗೆಯೂ ತಿಳಿಸಲಾಗಿತ್ತು.

ಆದರೆ, ರಿಪೇರಿ ಆದ ಬಸ್ 10 ದಿನಗಳು ಕಳೆದರೂ, ಅದೇ ರಸ್ತೆಯಲ್ಲಿ, ಅದೇ ಪ್ರಮಾಣದ ಅಥವಾ ಅದಕ್ಕಿಂತಲೂ ಹೆಚ್ಚಿನ ಕಪ್ಪು ಹೊಗೆಯನ್ನು ಕಾರುತ್ತಾ ರಾಜಾರೋಷವಾಗಿ ಅದೇ ಬಸ್ ಸಂಚರಿಸುತ್ತಿದೆ. ಹತ್ತು ದಿನಗಳ ಅವಧಿಯಲ್ಲಿ ಆ ಬಸ್ ಅನ್ನು ಏನು ದುರಸ್ತಿ ಮಾಡಿದರು? ಹತ್ತೇ ದಿನದಲ್ಲಿ ಮತ್ತೆ ಹೊಗೆ ಉಗುಳಲು ಆರಂಭಿಸಿದ್ದೇಕೆ? ಇದರ ಬಗ್ಗೆ ಸಂಸ್ಥೆಯ ಅಧಿಕಾರಿಗಳು, ಡಿಪೋ ವ್ಯವಸ್ಥಾಪಕರು ಬಸ್ ಅನ್ನು ಡಿಪೋದಿಂದ ತೆಗೆಯುವಾಗ ಚಾಲಕರು ಗಮನಿಸುವುದಿಲ್ಲವೇ? ಅಥವಾ "ಹೇಳೋರು ಕೇಳೋರು ಯಾರು ಇಲ್ಲ, ಹೊಗೆ ಮಾಡುತ್ತಾ ಸಂಚರಿಸುವುದು ಹಕ್ಕು" ಎನ್ನುವ ರೀತಿಯಲ್ಲಿ ಸಂಸ್ಥೆಯ ಅಧಿಕಾರಿಗಳು ವರ್ತಿಸುತ್ತಿರುವುದು, ಬಹಳಷ್ಟು ಬಸ್‌ಗಳು ಹೊಗೆ ಕಾರುತ್ತಾ ಹೋಗುತ್ತಿರುವುದಕ್ಕೆ ನಿದರ್ಶನವಾಗಿದೆ. ಇದು ಕೇವಲ ತಾಂತ್ರಿಕ ದೋಷದ ವಿಷಯವಲ್ಲ, ಬದಲಾಗಿ ಸಾರಿಗೆ ಸಂಸ್ಥೆ ಎಷ್ಟು ಹಗುರವಾಗಿ ಮಹತ್ವದ ವಿಷಯಗಳನ್ನು ಪರಿಗಣಿಸುತ್ತದೆ ಎಂಬುದಕ್ಕೆ ಜ್ವಲಂತ ಸಾಕ್ಷಿಯಾಗಿದೆ.





### ಕಪ್ಪು ಹೊಗೆ ಬಿಡಲು ಪ್ರಮುಖ ಕಾರಣ

1. **ಕಾಲಮಿತಿಯ ನಿರ್ವಹಣೆ ಇಲ್ಲದಿರುವುದು:** ಏರ್ ಫಿಲ್ಟರ್‌ಗಳು ಕಸದಿಂದ ತುಂಬಿಕೊಂಡಾಗ ಇಂಜಿನ್‌ಗೆ ಸರಿಯಾದ ಪ್ರಮಾಣದ ಗಾಳಿ ಸಿಗುವುದಿಲ್ಲ. ಇದರಿಂದ ಇಂಧನ ಪೂರ್ಣವಾಗಿ ದಹಿಸದೆ ಕಪ್ಪು ಹೊಗೆ ಬರುತ್ತದೆ.
2. **ಫ್ಯುಯೆಲ್ ಇಂಜೆಕ್ಷನ್ ಪಂಪ್ ದೋಷ:** ಡೀಸೆಲ್ ಪಂಪ್‌ಗಳ ಟೈಮಿಂಗ್ ಸರಿ ಇಲ್ಲದಿದ್ದರೆ ಅಥವಾ ಇಂಜೆಕ್ಟರ್‌ಗಳು ಹಾಳಾಗಿದ್ದರೆ ಈ ಸಮಸ್ಯೆ ಬರುತ್ತದೆ.
3. **ಕಳಪೆ ಗುಣಮಟ್ಟದ ಇಂಧನ:** ಕೆಲವೊಮ್ಮೆ ಕಳಪೆ ಗುಣಮಟ್ಟದ ಇಂಧನ ಅಥವಾ ವಾಹನವನ್ನು ಸರಿಯಾಗಿ ನಿರ್ವಹಣೆ ಮಾಡದೆ ಇರುವುದು ಕಾರಣವಾಗಬಹುದು.

### ಸಂಸ್ಥೆ ಏನು ಮಾಡಬೇಕು?

1. **ತಕ್ಷಣದ ಕ್ರಮ:** ಶಿರಸಿ ಮತ್ತು ಸಾಗರ ಡಿಪೋದ ಹೊಗೆ ಉಗುಳುವ ಎಲ್ಲಾ ಬಸ್‌ಗಳನ್ನು ತಕ್ಷಣವೇ ಸಂಪೂರ್ಣ ದುರಸ್ತಿ ಮಾಡಬೇಕು. ಈ ಬಗ್ಗೆ ಅಧಿಕಾರಿಗಳ ನಿರ್ಲಕ್ಷ್ಯದ ಬಗ್ಗೆ ತನಿಖೆಯಾಗಬೇಕು.
2. **ಆರ್‌ಟಿಒ ಹಸ್ತಕ್ಷೇಪ:** ಉತ್ತರ ಕನ್ನಡ ಜಿಲ್ಲೆಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ತಕ್ಷಣವೇ ಸರ್ಕಾರಿ ಬಸ್‌ಗಳ ಆಕಸ್ಮಿಕ ತಪಾಸಣೆ ನಡೆಸಬೇಕು. ನಿಯಮ ಉಲ್ಲಂಘಿಸುವ ಬಸ್‌ಗಳ ಫಿಟ್ನೆಸ್ ಸರ್ಟಿಫಿಕೇಟ್ ರದ್ದುಗೊಳಿಸಿ, ನಿರ್ದಾಕ್ಷಿಣ್ಯವಾಗಿ ದಂಡ ವಿಧಿಸಬೇಕು.
3. **ಅಧಿಕಾರಿಗಳ ಉತ್ತರದಾಯಿತ್ವ:** ಸಂಸ್ಥೆಯ ಬಹುತೇಕ ಬಸ್‌ಗಳು ಕಪ್ಪು ಹೊಗೆ ಉಗುಳುತ್ತಿದ್ದರೂ ನಿರ್ಲಕ್ಷ್ಯ ವಹಿಸುತ್ತಿರುವ ಅಧಿಕಾರಿಗಳಿಗೆ ವಿಭಾಗದಿಂದ ಸೂಕ್ತ ಮಾರ್ಗದರ್ಶನ ಹೋಗಬೇಕು.
4. **ನಿರ್ವಹಣೆ:** ಬಸ್‌ಗಳ ನಿರ್ವಹಣಾ ವರದಿಯನ್ನು ಕಟ್ಟುನಿಟ್ಟಾಗಿ ಹಿರಿಯ ಅಧಿಕಾರಿಗಳು ಗಮನಿಸುತ್ತಿರಬೇಕು.



**ಸಾಗರ ಡಿಪೋ ಬಸ್‌ಗಳದ್ದೂ ಇದೇ ಕಥೆ:** ಸಮಸ್ಯೆ ಕೇವಲ ಶಿರಸಿ ಡಿಪೋಗೆ ಸೀಮಿತವಾಗಿಲ್ಲ. ಶಿವಮೊಗ್ಗ ವಿಭಾಗಕ್ಕೆ ಸೇರಿದ ಸಾಗರ ಡಿಪೋದಿಂದ ಶಿರಸಿಗೆ ಬರುವ ಅನೇಕ ಬಸ್‌ಗಳ (ಉದಾಹರಣೆಗೆ KA-17-F-1631) ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಘಟ್ಟದ ರಸ್ತೆಗಳಲ್ಲಿ ಏರುವಾಗ ಈ ಬಸ್‌ಗಳು ಬಿಡುವ ಹೊಗೆಯ ಪ್ರಮಾಣ ಎಷ್ಟಿರುತ್ತದೆ ಎಂದರೆ, ಹಿಂದಿನಿಂದ ಬರುವ ವಾಹನಗಳಿಗೆ ಮುಂದಿನ ರಸ್ತೆಯೇ ಕಾಣಿಸುವುದಿಲ್ಲ. ಈ ಬಸ್‌ಗಳು 'ಮಾಲಿನ್ಯ ನಿಯಂತ್ರಣ' ಮಾನದಂಡಗಳನ್ನು ಗಾಳಿಗೆ ತೂರಿವೆ. ಇದು ಕೇವಲ ಎರಡು ಬಸ್‌ಗಳ ಕಥೆ ಅಲ್ಲ, ಬಹಳಷ್ಟು ಬಸ್‌ಗಳು ಸಂಚರಿಸುತ್ತಿರುವುದೇ ಹೀಗೆ!

**ಆರೋಗ್ಯದ ಮೇಲೆ ಗಂಭೀರ ಪರಿಣಾಮ:** ಈ ಬಸ್‌ಗಳು ಡೀಸೆಲ್ ದಹನದಿಂದ ಹೊರಬಿಡುವ ಕಪ್ಪು ಹೊಗೆಯಲ್ಲಿ 'ಪಾರ್ಟಿಕ್ಯುಲೇಟ್ ಮ್ಯಾಟರ್', ನೈಟ್ರೋಜನ್ ಆಕ್ಸೈಡ್ ಮತ್ತು ಕಾರ್ಬನ್ ಮಾನಾಕ್ಸೈಡ್‌ನಂತಹ ಅಪಾಯಕಾರಿ ರಾಸಾಯನಿಕಗಳಿರುತ್ತವೆ. ರಸ್ತೆ ಬದಿಯಲ್ಲಿ ಬಸ್‌ಗಾಗಿ ಕಾಯುವ ಅಥವಾ ನಡೆದುಕೊಂಡು ಹೋಗುವ ಶಾಲಾ ಮಕ್ಕಳು ಈ ವಿಷಗಾಳಿಯನ್ನು ನೇರವಾಗಿ ಸೇವಿಸುತ್ತಿದ್ದಾರೆ. ಮಕ್ಕಳ ಶ್ವಾಸಕೋಶಗಳು ಇನ್ನೂ ಬೆಳವಣಿಗೆಯ ಹಂತದಲ್ಲಿರುವುದರಿಂದ, ಈ ಹೊಗೆ ಅವರ ಮೇಲೆ ದೀರ್ಘಕಾಲೀನ ಪರಿಣಾಮ ಬೀರುತ್ತದೆ. ಅಸ್ತಮಾ, ಬ್ರಾಂಕೈಟಿಸ್ ಮತ್ತು ಕಣ್ಣು ಉರಿಯಂತಹ ಸಮಸ್ಯೆಗಳು ಮಕ್ಕಳಲ್ಲಿ ಹೆಚ್ಚಾಗಲು ಇಂತಹ ಬಸ್‌ಗಳೇ ಪ್ರಮುಖ ಕಾರಣ. ಬಸ್ ಚಾಲಕರು ಗೇರ್ ಬದಲಾಯಿಸಿದಾಗ ಅಥವಾ ವೇಗ ಹೆಚ್ಚಿಸಿದಾಗ, ಹಿಂದಿನಿಂದ ಬರುವ ದ್ವಿಚಕ್ರ ವಾಹನ ಸವಾರರ ಮುಖಕ್ಕೆ ದಟ್ಟ ಹೊಗೆ ರಾಚುತ್ತದೆ. ಆ ಕ್ಷಣದಲ್ಲಿ ಉಂಟಾಗುವ 'ಶೂನ್ಯ ಗೋಚರತೆ'ಯಿಂದಾಗಿ ಹಿಂದಿನ ವಾಹನಗಳು ನಿಯಂತ್ರಣ ತಪ್ಪಿ ಬಸ್‌ಗೆ ಅಥವಾ ಎದುರಿನ ವಾಹನಕ್ಕೆ ಡಿಕ್ಕಿ ಹೊಡೆಯುವ ಸಾಧ್ಯತೆಗಳಿರುತ್ತವೆ.

**ಕಾಯ್ದೆ ಏನು ಹೇಳುತ್ತದೆ?:** ಮೋಟಾರು ವಾಹನ ಕಾಯ್ದೆ 1988ರ ಸೆಕ್ಷನ್ 190(2)ರ ಪ್ರಕಾರ, ನಿಗದಿಪಡಿಸಿದ ಮಿತಿಗಿಂತ ಹೆಚ್ಚು ಹೊಗೆ ಹೊರಸೂಸುವುದು ಶಿಕ್ಷಾರ್ಹ ಅಪರಾಧ. ಇದಕ್ಕೆ ಭಾರೀ ಮೊತ್ತದ ದಂಡ ಮತ್ತು ವಾಹನ ಜಪ್ತಿ ಮಾಡುವ ಅಧಿಕಾರವಿದೆ. ವಾಣಿಜ್ಯ ವಾಹನಗಳಿಗೆ ಪ್ರತಿ ವರ್ಷ ಫಿಟ್ನೆಸ್ ಸರ್ಟಿಫಿಕೇಟ್ ಪಡೆಯುವುದು ಕಡ್ಡಾಯ. ಇಷ್ಟು ಪ್ರಮಾಣದಲ್ಲಿ ಹೊಗೆ ಉಗುಳುವ ಬಸ್‌ಗಳಿಗೆ ಆರ್‌ಟಿಒ ಅಧಿಕಾರಿಗಳು ಎಫ್‌ಸಿ ನೀಡುವುದು ಹೇಗೆ? ಕೇವಲ ಕಾಗದದ ಮೇಲೆ ತಪಾಸಣೆ ನಡೆಯುತ್ತಿದೆಯೇ ಅಥವಾ ಸರ್ಕಾರಿ ವಾಹನ ಎಂಬ ಕಾರಣಕ್ಕೆ 'ಕಣ್ಮುಚ್ಚಿ' ಸಹಿ ಹಾಕಲಾಗುತ್ತಿದೆಯೇ ಎಂಬ ಅನುಮಾನ ಸಾರ್ವಜನಿಕರಲ್ಲಿ ಮೂಡಿದೆ.

ಸಾರಿಗೆ ಇಲಾಖೆಯು ಸರ್ಕಾರಿ ಸ್ವಾಮ್ಯದ್ದಾಗಿರಬಹುದು, ಆದರೆ ಕಾನೂನಿನ ಮುಂದೆ ಎಲ್ಲರೂ ಸಮಾನರು. ಆರ್‌ಟಿಒ ಅಧಿಕಾರಿಗಳಿಗೆ ಸರ್ಕಾರಿ ಬಸ್‌ಗಳನ್ನು ತಪಾಸಣೆ ಮಾಡುವ, ದಂಡ ವಿಧಿಸುವ ಮತ್ತು ರಸ್ತೆಗಿಳಿಯದಂತೆ ತಡೆಯುವ ಸಂಪೂರ್ಣ ಅಧಿಕಾರವಿದೆ. ಆದರೆ, "ಸರ್ಕಾರಿ ಇಲಾಖೆಗಳ ನಡುವಿನ ಹೊಂದಾಣಿಕೆ"ಯ ಹೆಸರಿನಲ್ಲಿ ಸಾರ್ವಜನಿಕರ ಪ್ರಾಣದೊಂದಿಗೆ ಆಟವಾಡಲಾಗುತ್ತಿದೆ.

## ಟವರ್ ಚಾಲನೆಗೆ ಶೀಘ್ರ ಕ್ರಮ: ಶಾಸಕ ಭೀಮಣ್ಣ ನಾಯ್ಕ

● **ತತ್ವನಿಷ್ಠ, ಶಿರಸಿ:** ತಾಲೂಕಿನ ಹೆಬ್ರಿ ಗ್ರಾಮದ ಶ್ರೀ ಪ್ರಾಣಲಿಂಗೇಶ್ವರ ದೇವಾಲಯದ ವಾರ್ಷಿಕ ಸಮಾರಾಧನೆ ಕಾರ್ಯಕ್ರಮದಲ್ಲಿ ಶಾಸಕ ಭೀಮಣ್ಣ ನಾಯ್ಕ ಪಾಲ್ಗೊಂಡು ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಗ್ರಾಮಸ್ಥರ ಅಹವಾಲುಗಳನ್ನು ಆಲಿಸಿದ ಶಾಸಕರು ಮಾತನಾಡಿ, ಗ್ರಾಮೀಣ ಭಾಗದ ಜನರ ಸಮಸ್ಯೆಗಳ ಬಗ್ಗೆ ನನಗೆ ಅರಿವಿದೆ. ಈಗಾಗಲೇ ರಸ್ತೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಕ್ರಿಯಾ ಯೋಜನೆ ರೂಪಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು. ಸಮುದಾಯ ಭವನದ ಬೇಡಿಕೆಯನ್ನು ಶಾಸಕರ ನಿಧಿಯಿಂದ ಅಥವಾ ಸರ್ಕಾರದ ವಿಶೇಷ ಅನುದಾನದಡಿ ಆದ್ಯತೆಯ



ಮೇಲೆ ಪರಿಗಣಿಸಲಾಗುವುದು. ಇನ್ನು ನೆಟ್‌ವರ್ಕ್ ಸಮಸ್ಯೆಯ ಕುರಿತು ಸಂಬಂಧಪಟ್ಟ ಕಂಪೆನಿಗಳ ಅಧಿಕಾರಿಗಳೊಂದಿಗೆ ಮಾತನಾಡಿ ಶೀಘ್ರವೇ ಸ್ಥಾಪನೆಗೊಂಡ ಟವರ್ ಚಾಲನೆಗೆ ಕ್ರಮ ಕೈಗೊಳ್ಳಲು ಸೂಚಿಸುತ್ತೇನೆ ಎಂದ ಅವರು, ಶಿರಸಿ ತಾಲೂಕಿನ ಹೆಬ್ರಿ ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗೆ ಬದ್ಧವಾಗಿದ್ದು, ಗ್ರಾಮಸ್ಥರು ನೀಡಿರುವ ಮನವಿಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿ ಹಂತ ಹಂತವಾಗಿ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಭರವಸೆ ನೀಡಿದರು.

ಎಸ್.ಕೆ. ಭಾಗವತ್, ಶ್ರೀಪಾದ್ ಹೆಗಡೆ ಕಡವೆ, ಪ್ರವೀಣ ಗೌಡ ತೆಪ್ಪಾರ, ದೇವರಾಜ ಮರಾಠಿ ಸೇರಿದಂತೆ ಗ್ರಾಮದ ಪ್ರಮುಖರು, ದೇವಾಲಯದ ಸಮಿತಿಯ ಪದಾಧಿಕಾರಿಗಳು ಹಾಗೂ ನೂರಾರು ಗ್ರಾಮಸ್ಥರು ಉಪಸ್ಥಿತರಿದ್ದರು.

## ಕಲೋತ್ಸವ ಸ್ಪರ್ಧೆ: ರಾಜ್ಯಮಟ್ಟಕ್ಕೆ ಆಯ್ಕೆ

● **ತತ್ವನಿಷ್ಠ, ಶಿರಸಿ:** ಜಿಲ್ಲಾಡಳಿತ ಹಾಗೂ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಮಂಡ್ಯದ ಸೇಂಟ್ ಥಾಮಸ್ ವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಸ್ಪರ್ಧೆಯಲ್ಲಿ ಧೃತಿ ಹೆಗಡೆ ವಾನಳ್ಳಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾಳೆ. ಧಾರ್ಮಿಕ ಪಠಣ ವಿಭಾಗದ ಸಂಸ್ಕೃತ ಭಗವದ್ಗೀತಾ ಕಂಠಪಾಠ ಸ್ಪರ್ಧೆಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಇವಳು, ಮಂಡ್ಯ ಜಿಲ್ಲೆಗೆ ಪ್ರಥಮ ಸ್ಥಾನ ತಂದುಕೊಡುವ ಮೂಲಕ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಜಿಲ್ಲೆಯನ್ನು ಪ್ರತಿನಿಧಿಸಲು ಅರ್ಹತೆ ಪಡೆದಿದ್ದಾರೆ. ಧೃತಿ ಹೆಗಡೆ ಅವರು ಪ್ರಸ್ತುತ ಮಂಡ್ಯ ಜಿಲ್ಲೆಯ





ಆದಿಚುಂಚನಗಿರಿಯಲ್ಲಿ ನೆಲೆಸಿರುವ ಮೂಲತಃ ಶಿರಸಿ ತಾಲೂಕಿನ ವಾನಳ್ಳಿಯ ಡಾ.ಮಂಜುನಾಥ ಹೆಗಡೆ ಮತ್ತು ಅರ್ಚನಾ ಹೆಗಡೆ ದಂಪತಿ ಪುತ್ರಿಯಾಗಿದ್ದಾರೆ. ಇವರು ಬೆಳ್ಳೂರ್ ಕ್ರಾಸ್‌ನ ಅಭ್ಯಾಸ್ ಇಂಟರ್ನ್ಯಾಷನಲ್ ಸ್ಕೂಲ್‌ನಲ್ಲಿ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ.

### ಎಸ್.ಎಸ್.ಎಲ್.ಸಿ ಪರೀಕ್ಷೆ: ಪೂರ್ವಸಿದ್ಧತಾ ಸಭೆ

# ಎಸ್‌ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಪ್ರಗತಿಯಾಗಲಿ: ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ

● **ತತ್ವನಿಷ್ಠ, ಕಾರವಾರ:** ಕಳೆದ ಬಾರಿಯ ಎಸ್.ಎಸ್.ಎಲ್.ಸಿ. ಫಲಿತಾಂಶದಲ್ಲಿ ಕಾರವಾರ ಶೈಕ್ಷಣಿಕ ಜಿಲ್ಲೆ ರಾಜ್ಯದಲ್ಲಿ ತೃತೀಯ ಸ್ಥಾನ ಪಡೆದಿದೆ. ಈ ಬಾರಿ ಇನ್ನೂ ಅಧಿಕ ಸುಧಾರಣೆಯಾಗಬೇಕು. ಜಿಲ್ಲೆಯ ಎಲ್ಲ ಶಾಲೆಗಳಲ್ಲಿ ಶೇ. 100ರ ಫಲಿತಾಂಶ ದಾಖಲಿಸಬೇಕು. ಜಿಲ್ಲೆಯ ಯಾವುದೇ ವಿದ್ಯಾರ್ಥಿ ಅನುತ್ತೀರ್ಣ ಆಗದಂತೆ ಸಂಬಂಧಪಟ್ಟ ಶಾಲೆಗಳ ಮುಖ್ಯೋಪಾಧ್ಯಾಯರು, ಶಿಕ್ಷಕರು ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳು ಜವಾಬ್ದಾರಿ ವಹಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ಸೂಚಿಸಿದರು.

ಅವರು ಬುಧವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಕಾರವಾರ ಶೈಕ್ಷಣಿಕ ಜಿಲ್ಲೆಯಲ್ಲಿ ಈ ಬಾರಿಯ ಎಸ್.ಎಸ್.ಎಲ್.ಸಿ ಫಲಿತಾಂಶ ವೃದ್ಧಿಗೆ ಕೈಗೊಂಡಿರುವ ಕ್ರಮಗಳ ಕುರಿತು ಎಲ್ಲ ಶಾಲೆಗಳ ಮುಖ್ಯೋಪಾಧ್ಯಾಯರು, ತಾಲೂಕು ಶಿಕ್ಷಣಾಧಿಕಾರಿಗಳು ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.



ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾದರೆ ವಿದ್ಯಾರ್ಥಿಗಳು ತಮ್ಮ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುತ್ತಾರೆ. ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವ ಜವಾಬ್ದಾರಿ ಶಿಕ್ಷಕರದ್ದು. ಪ್ರತಿಯೊಬ್ಬ ವಿದ್ಯಾರ್ಥಿಯ ಜೀವನವನ್ನು ರೂಪಿಸುವ ಅತೀ ದೊಡ್ಡ ಜವಾಬ್ದಾರಿ ಹೊಂದಿರುವ ಶಿಕ್ಷಕರು, ತಮ್ಮ ಎಲ್ಲ ಅನುಭವ ಧಾರೆಯೆರೆದು, ಶಾಲೆಯ ಯಾವುದೇ ವಿದ್ಯಾರ್ಥಿ ಅನುತ್ತೀರ್ಣರಾಗದಂತೆ ನೋಡಿಕೊಳ್ಳಬೇಕು ಎಂದರು.

ಫಲಿತಾಂಶದಲ್ಲಿ ಜಿಲ್ಲೆಗೆ ರ್‍ಯಾಂಕ್ ಬರುವುದು ಮುಖ್ಯವಲ್ಲ. ಆದರೆ ಜಿಲ್ಲೆಯ ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಬೇಕು. ಅರ್ಧ ವಾರ್ಷಿಕ ಪರೀಕ್ಷೆ ಮತ್ತು ಮೊದಲ ಪ್ರಿಪರೇಟರಿ ಫಲಿತಾಂಶವನ್ನು ವಿಶ್ಲೇಷಣೆ ಮಾಡಿ, ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಿ, ಅವರ ಬಗ್ಗೆ ವೈಯಕ್ತಿಕವಾಗಿ ಗಮನಹರಿಸಬೇಕು ಎಂದರು.

ಶಾಲೆಗಳಿಗೆ ನಿರಂತರವಾಗಿ ಗೈರು ಹಾಜರಾಗುತ್ತಿರುವ ವಿದ್ಯಾರ್ಥಿಗಳ ಕುರಿತಂತೆ ವಿಶೇಷ ಗಮನ ಹರಿಸಿ ವೈಯಕ್ತಿವಾಗಿ ಮತ್ತು ಎಸ್‌ಡಿ.ಎಂ.ಸಿ. ಸದಸ್ಯರ ಮೂಲಕ ಮನೆ ಭೇಟಿ ನೀಡಿ, ಪೋಷಕರ ಮತ್ತು ವಿದ್ಯಾರ್ಥಿಯ ಮನವೊಲಿಸಿ ಶಾಲೆಗೆ ಬರುವಂತೆ ಮಾಡಬೇಕು. ಅವರನ್ನು ಉತ್ತೀರ್ಣರಾಗುವಂತೆ ಮಾಡುವ ಜವಾಬ್ದಾರಿ ವಹಿಸಿಕೊಳ್ಳಬೇಕು. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮಂಡಳಿಯು ಸಿದ್ದಪಡಿಸಿರುವ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಹಾಗೂ ಡಯಟ್ ಮೂಲಕ ಸಿದ್ದಪಡಿಸಿರುವ ಪ್ರಶ್ನೆ ಪತ್ರಿಕೆಗಳನ್ನು ಅಭ್ಯಾಸ ಮಾಡಿಸಲು ತಿಳಿಸಿದರು.

ಎಸ್.ಎಸ್.ಎಲ್.ಸಿ. ಫಲಿತಾಂಶ ಸುಧಾರಣೆಗಾಗಿ ಜಿಲ್ಲಾಡಳಿತದ ಮೂಲಕ ಎಲ್ಲ ರೀತಿಯ ಸಹಕಾರ ನೀಡುವುದಾಗಿ ತಿಳಿಸಿದ ಜಿಲ್ಲಾಧಿಕಾರಿ, ಕಳೆದ ಬಾರಿಯಂತೆ ವಿದ್ಯಾರ್ಥಿಗಳಿಗೆ ಪ್ರೇರಣಾತ್ಮಕ ಪತ್ರಗಳನ್ನು ಬರೆಯಲಾಗುವುದು. ಪ್ರೇರಣಾ ಶಿಬಿರಗಳಿಗೆ ವಿವಿಧ ಇಲಾಖೆಗಳ ಅಧಿಕಾರಿಗಳು ಭೇಟಿ ನೀಡಿ ಮಕ್ಕಳನ್ನು ಪ್ರೋತ್ಸಾಹಿಸಲಿದ್ದು, ಫೋನ್ ಇನ್ ಕಾರ್ಯಕ್ರಮ ಆಯೋಜಿಸಲಾಗುವುದು ಎಂದರು.

ಜಿಪಂ ಸಿಇಒ ಡಾ. ದಿಲೀಷ್ ಶಶಿ ಮಾತನಾಡಿ, ಜಿಲ್ಲೆಯು ಎಸ್.ಎಸ್.ಎಲ್.ಸಿ. ಫಲಿತಾಂಶದಲ್ಲಿ ಕಳೆದ ಬಾರಿಗಿಂತಲೂ ಉತ್ತಮ ಸಾಧನೆ ತೋರಬೇಕಿದೆ. ಈ ಬಾರಿ ನಮ್ಮ ಗುರಿ ಮೊದಲನೇ ಸ್ಥಾನವಾಗಬೇಕು. ಶಾಲಾ ಪರೀಕ್ಷೆಯಲ್ಲಿ ಅನುತ್ತೀರ್ಣರಾಗುವ ವಿದ್ಯಾರ್ಥಿಗಳಿಗಾಗಿ ಶಿಕ್ಷಕರು ಹೆಚ್ಚುವರಿ ಸಮಯ ಮೀಸಲಿಟ್ಟು ಕಲಿಕೆಯಲ್ಲಿ ಹಿಂದುಳಿದಿರುವ ವಿಷಯಗಳನ್ನು ಬೋಧಿಸಬೇಕು. ವಿದ್ಯಾರ್ಥಿಗಳು ಪ್ರಶ್ನೆ ಪತ್ರಿಕೆಯಲ್ಲಿ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಬೇಕು. ಯಾವುದೇ ಪ್ರಶ್ನೆಗೂ ಉತ್ತರವನ್ನು ಖಾಲಿ ಬಿಡದೇ, ಸಾಧ್ಯವಾದಷ್ಟು ಉತ್ತರ ಬರೆಯಲು ಪ್ರಯತ್ನಿಸುವ ಬಗ್ಗೆ ಶಿಕ್ಷಕರು ತಿಳಿಸಬೇಕು. ಫಲಿತಾಂಶ ವೃದ್ಧಿಗೆ ಈಗಾಗಲೇ ರೂಪಿಸಿರುವ 29 ಅಂಶಗಳ ಅನುಷ್ಠಾನ ಮಾತ್ರವಲ್ಲದೇ, ಶಿಕ್ಷಕರು ಮತ್ತು ಪೋಷಕರು ಹಾಗೂ ಅಧಿಕಾರಿಗಳು ಸಂಘಟಿತ ಪ್ರಯತ್ನದ ಮೂಲಕ ಉತ್ತಮ ಫಲಿತಾಂಶ ಬರಲು ಕಾರ್ಯನಿರ್ವಹಿಸಬೇಕು ಎಂದರು.

ಕಾರವಾರ ಶೈಕ್ಷಣಿಕ ಜಿಲ್ಲೆಯ ಉಪ ನಿರ್ದೇಶಕಿ ಲತಾ ನಾಯ್ಕ ಪ್ರಾಸ್ತಾವಿಕವಿಕವಾಗಿ ಮಾತನಾಡಿದರು. ಸಭೆಯಲ್ಲಿ ಡಯಟ್ ಪ್ರಾಂಶುಪಾಲ ಎನ್‌.ಆರ್. ಹೆಗಡೆ, ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ ತಾಲೂಕುಗಳು ತಾಲೂಕು ಶಿಕ್ಷಣಾಧಿಕಾರಿಗಳು, ಎಲ್ಲ ಶಾಲೆಗಳ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

Owned and Published by PRAVEEN BALACHANDRA HEGDE, 28 KARJAGI BALESAR, UTTARA KANNADA, KARNATAKA - 581340. Printer: PLOT NO. 15 & 16, KIADB RAYAPUR INDUSTRIAL AREA, DHARWAD, KARNATAKA - 580009. Printed at and by METROPOLITAN MEDIA COMPANY LIMITED PLOT NO. 15 & 16, KIADB RAYAPUR INDUSTRIAL AREA, DHARWAD, KARNATAKA - 580009. Published at: Tatvanishta, Behind Hotel Mdhuvana, Yellapur Road, Sirsi-581 401 Editor: PRAVEEN HEGDE , Executive Editor: Mahesh Hegde All rights reserved. Reproduction in whole or in part without written permission is prohibited.

